ಜನ್ಮಶತಮಾನೋತ್ಸವ ವರ್ಷ - ೨೦೧೮



ಮರೆಯಲಾರದ ಕನ್ನಡ ವೀರ ಸೇನಾನಿ

ಮ.ರಾಮಮೂರ್ತಿ

ಸಂಪಾದಕರು :

ಎನ್. ಆನಂದರಾಮರಾವ್

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ (ನೋಂ)

ಜನ್ಮಶತಮಾನೋತ್ಸವ ವರ್ಷ – 2018

ಮರೆಯಲಾಗದ
ಕನ್ನಡ ವೀರ ಸೇನಾನಿ

ಮ. ರಾಮಮೂರ್ತಿ

ಲೇಖಕರು
ಎನ್. ಆನಂದ ರಾಮರಾವ್

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ಮತ್ತು
ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ
ಬೆಂಗಳೂರು

ಮರೆಯುಬಾರದ ಕನ್ನಡ ವೀರ ಸೇನಾನಿ ಮ. ರಾಮಮೂರ್ತಿ
~ ಲೇಖಕರು ಎನ್. ಆನಂದ ರಾಮರಾವ್

ಮೊದಲ ಮುದ್ರಣ : 2018

ಪುಟಗಳು : XX + 74 = 94

ಬೆಲೆ : ರೂ. 100/-

ಕಾಗದ : 80 Gsm Maplitho

ರಕ್ಷಾಪುಟ ವಿನ್ಯಾಸ : ಚಂದ್ರಕಾಂತ ಪಟ್ಟಣ

ಅಕ್ಷರಜೋಡಣೆ : ರಚನಾ ಕ್ರಿಯೇಶನ್ಸ್, ಬೆಂಗಳೂರು-50
94484 61085

ಮುದ್ರಣ : ಶ್ರೀ ಉಜ್ವಲ ಎಂಟರ್‌ಪ್ರೈಸಸ್
ಶ್ರೀನಗರ, ಬೆಂಗಳೂರು–50
ಮೊ : 9448214533

ಅರ್ಪಣೆ

1960ರ ದಶಕದಲ್ಲಿ ಕನ್ನಡ ಜಾಗೃತಿಗಾಗಿ
ಹೋರಾಡಿ ಕನ್ನಡದ ಅಭಿಮಾನವನ್ನು
ತುಂಬಿದ ಎಲ್ಲಾ ಕನ್ನಡದ ಹೋರಾಟಗಾರರಿಗೆ...

ಸಂಪಾದಕೀಯ ಮಂಡಳಿ

ಎನ್. ಆನಂದರಾಮರಾವ್

ಎಂ. ತಿಮ್ಮಯ್ಯ

ಸಿದ್ದಯ್ಯ


ನಾ.ಶ್ರೀಧರ

ಎಂ.ಗೌಡಯ್ಯ

ಬಿ.ಜಿ.ರಾಜೇಶ್

ಮಂ.ಅ.ವೆಂಕಟೇಶ್

"ಚಿರನೆನಪಿನ ನುಡಿ"



ಹೋದವಾರ ಮಿತ್ರರಾದ ಎನ್. ಆನಂದರಾಮರಾವ್ ಅವರು ನಮ್ಮ ಮನೆಗೆ ಅಪೂರ್ವ ಪತ್ರಿಕಾಸಂಗ್ರಾಹಕ ಮಂ.ಅ. ವೆಂಕಟೇಶ್ ಅವರೊಂದಿಗೆ ಬಂದರು. ಮ.ರಾಮಮೂರ್ತಿ ಅವರನ್ನು ಕುರಿತು ಅಚ್ಚಾದ ಕರಡು ಪ್ರತಿಯೊಂದನ್ನು ಮುಂದಿಟ್ಟು, "ಮುನ್ನುಡಿ ಬರೆದು ಕೊಡಬೇಕು. ನೀವು ರಾಮಮೂರ್ತಿಯವರನ್ನು ಚೆನ್ನಾಗಿ ಬಲ್ಲವರಲ್ಲಿ ಒಬ್ಬರು" ಎಂದರು. ಅದಕ್ಕೆ ನಾನು ಹೇಳಿದೆ, "ರಾಮಮೂರ್ತಿಯನ್ನು ನನಗಿಂತ ಚೆನ್ನಾಗಿ ಬಲ್ಲವರು, ಒಡನಾಡಿಗಳು ಬೇಕಾದಷ್ಟಿದ್ದಾರೆ. ಅವರ ಕೈಲಿ ಮುನ್ನುಡಿ ಬರೆಸಿ" ಎಂದೆ. ಅದಕ್ಕೆ ಅವರು "ರಾಮಮೂರ್ತಿಯವರನ್ನು ಕುರಿತ ನಿಮ್ಮದೇ ಚಿರನೆನಪುಗಳಿವೆಯಲ್ಲ ಅದನ್ನೇ ಮುನ್ನುಡಿ ಅಂತ ಬರೆದುಕೊಡಿ ಸಾಕು" ಎಂದರು. ನಾನೂ ನನ್ನ ಅಂತರಂಗದ ಅಚ್ಚುಮೆಚ್ಚಿನ ವ್ಯಕ್ತಿ ಕನ್ನಡದ ಶಕ್ತಿಯಾದ ಎಂ. ರಾಮಮೂರ್ತಿಯವರನ್ನು ನೆನಪು ಮಾಡಿಕೊಳ್ಳಲು ಒಂದು ಅವಕಾಶವೆಂದು ಭಾವಿಸಿ "ಹೂಂ" ಎಂದೆ.

ಕನ್ನಡ ಚಳುವಳಿ ಪ್ರಾರಂಭದಲ್ಲಿ ಅನಕೃ, ರಾಮಮೂರ್ತಿ ಅವರೊಂದಿಗೆ ಹಗಲಿರುಳು ದುಡಿದವರಲ್ಲಿ ಕನ್ನಡ ಕುಟೀರದ ಎಂ.ವಿ. ಸುಬ್ಬರಾವ್ ಅವರೂ ಒಬ್ಬರು. ಅವರ ಹಾಗೆ ಅಲೆಅಲೆದು ಕನ್ನಡಕ್ಕಾಗಿ ದುಡಿದವರು ಇನ್ನೊಬ್ಬರಿಲ್ಲ. ನಿಜಕ್ಕೂ ಕನ್ನಡಕ್ಕೆ ದುಡಿದ ಹಿರಿಯ ಸಾಹಿತಿಗಳಿಗೆ– ಆಲೂರು ವೆಂಕಟರಾಯರು, ಹುಯಿಲಗೋಳ ನಾರಾಯಣರಾಯರು ಮುಂತಾದವರಿಗೆಲ್ಲ ಬೆಂಗಳೂರಿನಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿದರು. ಕನ್ನಡದ ಸಂಘಸಂಸ್ಥೆಗಳನ್ನು ಸಂಪರ್ಕಿಸಿ ಚಳುವಳಿಗೆ ಕಾವೇರಿಸಿದರು. ಅವರೊಡನೆ ಸದಾ

ಜೊತೆಗಿದ್ದವನು ನಾನು. ಬೆಳಗಾದರೆ ಅನಕೃ, ರಾಮಮೂರ್ತಿ ಜೊತೆ ರಾಮಭಂಟರಂತೆ ಇರುತ್ತಿದ್ದೆವು. ಅನಕೃ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾನಕ್ಕೆ ನಿಲ್ಲಿಸಲು ಬಲವಂತ ಮಾಡಿದವರು ನಾವು. ಮಣಿಪಾಲಸಾಹಿತ್ಯ ಸಮ್ಮೇಳನಕ್ಕೆ ಅನಕೃ ಅಧ್ಯಕ್ಷರಾಗಿ ಬಾರದಿರಲು ಆಗಿನ ಪರಿಷತ್ತಿನ ಅಧ್ಯಕ್ಷರು ಇನ್ನಿಲ್ಲದ ಸಾಹಸ ಮಾಡಿದರು. ಅವರ ಪ್ರಯತ್ನಗಳನ್ನು ಭಗ್ನಗೊಳಿಸಿ ಅನಕೃ ಅಧ್ಯಕ್ಷರಾಗಲು ತೆರೆಮರೆಯಲ್ಲಿ ಶ್ರಮಿಸಿದವರು ಸುಬ್ಬರಾಯರು. ಅವರೊಡನೆ ಇದ್ದ ಸಹಕಾರಿ ನಾನು ಮತ್ತು ಇತರ ಹಲವಾರು ಮಂದಿ.

ಚಳುವಳಿ ಕಾಲದಲ್ಲಿ ಬೆಳಗಿನಿಂದ ಸಂಜೆಯವರೆಗೆ ಅನಕೃ ಅವರ ಮನೆಯಲ್ಲಿ ಇದ್ದವರೆಂದರೆ ನಾವಿಬ್ಬರು ಎಂದರೆ ತಪ್ಪಲ್ಲ. ಹೀಗಾಗಿ ಅನಕೃ, ರಾಮಮೂರ್ತಿ, ನಾಡಿಗೇರ್, ಬೀಚಿ ಚತುರ್ಮುಖ ಬ್ರಹ್ಮರು ನಿಕಟರಾದರು. ಅವರೊಂದಿಗೆ ವೇದಿಕೆಯ ಭಾಷಣಗಳಲ್ಲಿ ನಾನೂ ಭಾಗವಹಿಸುತ್ತಿದ್ದೆ.. ಎಂ.ವಿ. ಸುಬ್ಬರಾಯರು ಸಂಘಟಕರು. ಸಂಚಾಲಕರು. ವೇದಿಕೆ ಭಾಷಣಕ್ಕೆ ಬರುತ್ತಿರಲಿಲ್ಲ. ವ್ಯವಸ್ಥೆಯ ಹಿಮ್ಮೇಳ ಅವರದು.

ವಿಮಾನಪುರದ ಕನ್ನಡ ಸಂಘದಲ್ಲಿ ಒಮ್ಮೆ ನಾಡಿಗೇರ್, ಅನಕೃ, ನಾನು, ಬೀchi, ಮತ್ತಿತರರು ಭಾಗವಹಿಸಿದ್ದೆವು. ನಾಡಿಗೇರ್ ಮಾತನಾಡುತ್ತಾ ಸಭೆಯನ್ನು ರಂಜಿಸುತ್ತಿದ್ದರು. ಅವರು ಹೇಳಿದ ನಗೆ ಮಾತು ಒಂದು ನೆನಪಿದೆ. ನಾಡಿಗೇರ್ ಹೇಳಿದರು, "ಯಾರೋ ಕೇಳಿದರು ನನ್ನನ್ನು , ನಿಮ್ಮ ಹೆಂಡತಿ ನಿಮಗಿಂತ ವಯಸ್ಸಿನಲ್ಲಿ ಚಿಕ್ಕವರು. ನೀವು ಅವರಿಗಿಂತ ದೊಡ್ಡವರು. ಆದರೆ, ಅವರ ತಲೆಗೂದಲು ಬೆಳ್ಳಗಾಗಿದೆ. ನಿಮ್ಮದು ಇನ್ನೂ ಕಪ್ಪಾಗಿಯೇ ಇದೆ. ಇದರ ಗುಟ್ಟೇನು?" ಅದಕ್ಕೆ ನಾಡಿಗೇರ್ ರವರ ಉತ್ತರ ಹೀಗಿತ್ತು. " ನನ್ನ ಸ್ನೇಹಿತರು ಕೇಳಿದ ಪ್ರಶ್ನೆಗೆ ಉತ್ತರ ಸುಲಭ. ನನ್ನಂಥವನಿಗೆ ಇಂಥಹ ಒಳ್ಳೆಯ ಹೆಂಡ್ತಿ ಸಿಕ್ಕಿ ತಾನು ಕಷ್ಟ ಪಡುತ್ತಾ ನನಗೆ ಸುಖ ಕೊಡ್ತಾ ಇದ್ದಾಳೆ. ಎಂದು ಸದಾ ಆನಂದದಿಂದ ಇದ್ದೇನೆ. ಅದಕ್ಕೆ ನನ್ನ ಕೂದಲು ಕಪ್ಪಗಿದೆ. ಇಂಥವನನ್ನು ಕಟ್ಟಿಕೊಂಡು ಏನು ಮಾಡುವುದು ಎಂಬ ಚಿಂತೆಯಲ್ಲಿ ಅವಳ

ತಲೆಗೂದಲು ಬೆಳ್ಳಗಾಗಿದೆ" ಎಂದರು. "ಕನ್ನಡದ ಬಗ್ಗೆ ಹೋರಾಡುವವರು ಸದಾ ಆನಂದದಿಂದ ಇರಬೇಕು. ಇಲ್ಲದಿದ್ದರೆ ನಿಮ್ಮ ತಲೆಗೂದಲು ಬೆಳ್ಳಗಾದೀತು". ಎಂದರು.

ಕನ್ನಡ ಚಳುವಳಿಯ ಎಲ್ಲಾ ಸಭೆಗಳಲ್ಲಿ ಅನಕೃ, ರಾಮಮೂರ್ತಿ, ನಾಡಿಗೇರ್, ಜೊತೆ ಬಹಳ ಸಾರಿ ಹಿಂಬಾಲಕರಾಗಿರುತ್ತಿದ್ದೆವು. ನಾನು ಮತ್ತು ಸುಬ್ಬರಾವ್, ಕಾರಿನಲ್ಲಿ. ಹೀಗೆ ಒಮ್ಮೆ ಕಾರಿನಲ್ಲಿ ಹೋಗುತ್ತಿದ್ದಾಗ ನಾಡಿಗೇರ್ ಹೇಳಿದರು, "ರಾಯರೇ (ಅನಕೃ.ರವರನ್ನು ಎಲ್ಲರೂ ಸಂಭೋಧಿಸುತ್ತಿದ್ದ ರೀತಿ) ಈ ಸಲ ಸಭೆಯಲ್ಲಿ ನೀವು ಕೊನೆಯಲ್ಲಿ ಮಾತನಾಡುತ್ತೀರಿ. ನೀವೇ ಮೊದಲು ಮಾತನಾಡಿದರೆ ಜನ ಯಾರೂ ನಮ್ಮ ಭಾಷಣ ಕೇಳಲು ಇರೋಲ್ಲ. ಹಾಗಾಗಿ ಆಮೇಲೆ ಉಳಿದವರೂ ಮಾತಾಡುವ ಹಾಗಿಲ್ಲ. ಈ ಸಲ ನೀವು ಮಾತಾಡಲೇ ಬೇಡಿ. ಸಭೆಯಲ್ಲಿ ಇರಿ. ನೀವಿಲ್ಲದಿದ್ರೆ ಜನ ಯಾರೂ ಬರೋಲ್ಲ. ನಿಮ್ಮ ಬದಲಾಗಿ ನಾನು ಮಾತಾಡಿ ಸಭೆಗೆ ಹೇಳುತ್ತೇನೆ. ಈವತ್ತು ರಾಯರು ಮಾತಾಡೋಲ್ಲ. ಅವರ ಬದಲಾಗಿ ನಾನು ಮಾತಾಡುತ್ತೇನೆ ಎಂದಾಗ ರಾಮಮೂರ್ತಿ ಹೇಳಿದರು, "ಹಾಗೆಯೇ ಮಾಡಿ ನಿಮ್ಮನ್ನು ಟೊಮ್ಯಾಟೋ ಮೂಲಂಗಿ, ಬೀಟ್‌ರೂಟ್ ಎಲ್ಲ ತರಕಾರಿಗಳಿಂದ ತದಕ್ತಾರೆ" ಎಂದರು. ಅದಕ್ಕೆ ನಾಡಿಗೇರ್ 'ನನಗೆ ಬೇಕಾದ್ದೂ ಅದೆ. ನಾಳೆ ನಮ್ಮ ಮನೆಗೆ ಬೀಗರು ನೆಂಟರು ಬರುತ್ತಾರೆ. ತರ್ಕಾರಿ ಜಾಸ್ತಿ ಬೇಕಾಗಿದೆ' ಎಂದರು. ಆಗ ಕೃಷ್ಣರಾಯರು "ಒಳ್ಳೇದು, ನಾಡಿಗೇರ್ ಹಾಗೇ ಮಾಡಿ" ಎಂದರು. ಆಗ ರಾಮಮೂರ್ತಿ "ತರಕಾರಿ ಅವರ ಮೇಲೆ ಅಷ್ಟೊಂದು ಎಸೆದಾಗ ಗಾಯಗಳಾದಾಗ ಹಚ್ಚೋದಕ್ಕೆ ಅಷ್ಟೊಂದು ಮುಲಾಮು ಎಲ್ಲಿದೆ? ಎಂದರು ಎಲ್ಲರೂ ನಕ್ಕೆವು.

ಹೀಗೆ ಚಳುವಳಿ ಸಭೆಗಳಿಗೆ ಹೋಗುವಾಗ ದಾರಿಯುದ್ದಕ್ಕೂ ನಗೆ ಪ್ರಸಂಗಗಳು ಇರುತ್ತಿದ್ದವು. ಸಮಯ ನೋಡಿ ನಾಡಿಗೇರ್ ಪುಷ್ಪಾಸ್ತ್ರ ಪ್ರಯೋಗಿಸಿದಾಗ ರಾಮಮೂರ್ತಿ ಮಾತಿನ ರಾಮಬಾಣ ಬಿಡುತ್ತಿದ್ದರು.

ವಿಜಯಪುರದಲ್ಲಿ ಚಳುವಳಿ ಸಭೆಗೆ ಹೋದಾಗ ಮಲ್ಲೇಶ್ವರಂನ ಪಿ. ರಾಮದೇವ್ ಜೊತೆಗೆ ಬಂದಿದ್ದರು. ಯಥಾ ಪ್ರಕಾರ ನಾನು, ಅನಕೃ, ರಾಮಮೂರ್ತಿ, ನಾಡಿಗೇರ್, ರಾಮದೇವ್ ಒಟ್ಟಿಗೆ ಸಾಲಾಗಿ ನಡೆಯುತ್ತಿದ್ದೆವು. ಸಭಾ ಮಂಟಪದ ಬಳಿಗೆ ಬರುವ ವೇಳೆಗೆ ರಾಮದೇವ್‌ರವರಿಗೆ ಯಾರೋ ದೊಡ್ಡದೊಂದು ಹಾರವನ್ನು ಹಾಕಲು ತಂದರು. ರಾಮದೇವ್‌ರವರು "ನನಗಲ್ಲ, ರಾಯರಿಗೆ (ಅನಕೃಗೆ) ಹಾಕಿ" ಎಂದು ಕೈ ತೋರಿಸಿದರು. ಅನಕೃರವರು "ಹಾರಕ್ಕೆ ತಕ್ಕ ಆಸಾಮಿ ಇರಬೇಕು, ರಾಮಮೂರ್ತಿಗೆ ಹಾಕಿ" ಎಂದರು.ಆಗ ನಾಡಿಗೇರ್ "ರಾಂದೇವ್ ರೇ ರಾಮಮೂರ್ತಿಗೆ ಹಾಕಿ ಹಾಕಿ" ಎಂದರು. ರಾಮಮೂರ್ತಿಯವರು, "ನಾಡಿಗೇರ್, ನಿಮಗೆ ಹಾಕಿಸಿದರೆ ಹೇಗೆ?"ಎಂದರು. "ಅದರ ಭಾರಕ್ಕೆ ಧರೆಗೆ ಉರುಳಿದರೆ ಏನು ಗತಿ?" ಎಂದರು ಅನಕೃ. "ಪಕಡೋಜನ ಬೇಕು " ಎಂದರು ರಾಮದೇವ್. ಕೂಡಲೇ ನಾಡಿಗೇರ್ ಪಕಡೋಜನ ಎಂದ್ರಾ ಸಂತೋಷ. ಪಕೋಡಾ ನಮಗೆಲ್ಲಾ ಕಾದಿದೆ. ಬಿಸಿಬಿಸಿಯಾಗಿದೆ ತಾನೆ?" ಎಂದರು.

ರಾಮಮೂರ್ತಿಯವರದು ಭೀಮಕಾಯ, ಭೀಮಕಂಠ. ಭೀಮಪರಾಕ್ರಮ. ಅವರು ಒಮ್ಮೆ ಮಿಥಿಕ್ ಸೊಸೈಟಿಯ ಸಕಲ ಸದಸ್ಯರ ಅಧಿವೇಶನದಲ್ಲಿ ಗರ್ಜಿಸಿದರು. ಸೊಸೈಟಿಗೆ ಸಲ್ಲುತ್ತಿದ್ದ ಸಹಾಯಧನ ಹಲವು ವರ್ಷಗಳಿಂದ ಬಂದಿರಲಿಲ್ಲ. ಅದರ ಬಗ್ಗೆ ಸಭೆಯಲ್ಲಿ ಸಾತ್ವಿಕ ಚರ್ಚೆ ಮಾಡುತ್ತಿದ್ದರು. ಆಗ ನೀರಸದ ನುಡಿಗಳನ್ನು ಕೇಳಿದ ರಾಮಮೂರ್ತಿಯವರು ಎದ್ದು ಸಿಂಹಗರ್ಜನೆಯಲ್ಲಿ ಹೇಳಿದರು. "ಮೊದಲು ಇಲ್ಲಿಂದ ಎದ್ದೇಳಿ. ನಡೆಯಿರಿ, ಮಂತ್ರಿಗಳ ಬಳಿಗೆ. ಇಲ್ಲಿ ಕುಳಿತು ಗೋರ್ಕಲ್ಲ ಮೇಲೆ ಮಳೆ ಏಕೆ ಸುರಿಸುತ್ತೀರಿ? ಮಂತ್ರಿಸಿದರೆ ಮಾವಿನ ಕಾಯಿ ಉದುರದು. ಮಂತ್ರಿಗಳನ್ನೇ ಭೇಟಿ ಮಾಡಿ ಕೇಳೋಣ" ಎಂದು ಗರ್ಜಿಸಿದರು. ಸಭೆ ಬರಖಾಸ್ತ್ ಆಯಿತು. ನಂತರ ಅನಕೃ ಅವರೊಡನೆ ಎಸ್.ಆರ್.ಕಂಠಿಯವರನ್ನು ಕಂಡು ವಸ್ತುಸ್ಥಿತಿ ತಿಳಿಸಿ ಸೊಸೈಟಿಗೆ ಬಾಕಿ ಅನುದಾನ ಕೊಡಿಸಿದರು.

ಮ. ರಾಮಮೂರ್ತಿಯವರ ಹೋರಾಟ ಕೇವಲ ಮೆರವಣಿಗೆ ಘೋಷಣೆ ಸಭೆ ವಾಗ್ವಾದಗಳಿಗಷ್ಟೆ ಸೀಮಿತವಾಗಿರಲಿಲ್ಲ. ಯುವಕರನ್ನು ಚಳುವಳಿಗೆ ತೊಡಗಿಸುತ್ತಿದ್ದರು. ವಿಶೇಷವಾಗಿ ಕಾರ್ಖಾನೆಗಳಲ್ಲಿ ಇದ್ದ ಕನ್ನಡಿಗರನ್ನು ಜಾಗೃತಗೊಳಿಸುತ್ತಿದ್ದ ಕನ್ನಡ ಕಾರ್ಮಿಕ ನಾಯಕರಾಗಿದ್ದರು. ಕನ್ನಡಿಗರನ್ನು ಬೆದರಿಸುತ್ತಿದ್ದ ತಮಿಳರನ್ನು ಬಗ್ಗು ಬಡಿದರು. ಕಾರ್ಖಾನೆಗಳಲ್ಲಿ ಕನ್ನಡದ ಪ್ರಭಾವ ಜಾಸ್ತಿ ಆಯಿತು. ಕನ್ನಡ ಹೋರಾಟದಲ್ಲಿ, ಚಳುವಳಿಯಲ್ಲಿ ಭಾಗವಹಿಸಿದವರು ದಸ್ತಗಿರಿ ಆದಾಗ ಅವರ ಮನೆಗೆ ಹೋಗಿ ಮನೆಯವರಿಗೆ ಧೈರ್ಯಹೇಳಿ ಅವರಿಗೆ ಸಹಾಯ ಮಾಡುತ್ತಿದ್ದರು. ಇದು ಅವರ ಹೋರಾಟದ ರೀತಿ ಆಗಿತ್ತು.

ರಾಮಮೂರ್ತಿಅವರ ಮಕ್ಕಳಿಬ್ಬರು ದಿನಕರ(೧೨ ವರ್ಷ) ಮಂಜುನಾಥ (೯ವರ್ಷ) ಮುದ್ದಾಗಿದ್ದರು, ಪ್ರತಿಭಾವಂತರಾಗಿದ್ದರು. ಚಿಕ್ಕಣ್ಣಗಾರ್ಡನ್‌ನಲ್ಲಿದ್ದ ರಾಮಮೂರ್ತಿಅವರ ಮನೆಗೆ ಪದೇ ಪದೇ ಹೋಗುತ್ತಿದ್ದ ನನ್ನ ಜೊತೆ ಅವರು ನಲಿದಾಡುತ್ತಿದ್ದರು. ಒಮ್ಮೆ ದಿನಕರ ಪ್ರಶ್ನೆಯೊಂದನ್ನು ನನ್ನನ್ನು ಕೇಳಿದ್ದ. “ಮಾಮ, (ಹಾಗೆಂದು ಕರೆಯುತ್ತಿದ್ದ) ಆಕಾಶದಲ್ಲಿ ಏರೋಪ್ಲೇನ್ ಹಾರುತ್ತಲ್ಲ, ಅದು ಕಾಗೆ ಹಾಗೆ ಚಿಕ್ಕದಾಗಿದೆಯಲ್ಲಾ ಅದು ನಮ್ಮನೆ ಒಳಕ್ಕೆ ಬರುತಾ” ಅಂತ. ನಾನು, ಅವನಿಗೆ ಹೇಳಿದೆ, “ ಅದು ತುಂಬಾ ದೂರದಲ್ಲಿದೆ, ಆಕಾಶದಲ್ಲಿ. ಅದು ನಿಮ್ಮನೆಗಿಂತ ತುಂಬಾ ದೊಡ್ಡದು.” ಅದಕ್ಕೆ ಅವನು “ಅದು ಚಿಕ್ಕದು ದೊಡ್ಡದು ಆಗೋದಕ್ಕೆ ಅದು ಮಾಯಾವಿ ರಾಕ್ಷಸಾನ?” ಅಂತ ಕೇಳಿದ್ದ. ಮುಗ್ಧಮಾತಿನ ಚುರುಕು ಬುದ್ಧಿಯ ಮಕ್ಕಳಾಗಿದ್ದರು.

ಹೀಗೆ ಹತ್ತಾರು ನೆನಪುಗಳು ನನ್ನಲ್ಲಿ ಸುಳಿಯುತ್ತವೆ. ಆದರೆ ಅತಿ ದಾರುಣ ಸಂಗತಿ ಎಂದರೆ ೧೯೬೭ ಡಿಸೆಂಬರ್ ೨೫, ಕ್ರಿಸ್ಮಸ್ ದಿನದ ದುರಂತ.

ದಿನಾಂಕ ೨೪ರಂದು ಸಂಜೆ ವಾಣಿವಿಲಾಸ ಆಸ್ಪತ್ರೆ ಬಳಿ ರಾಮಮೂರ್ತಿಯವರು ತಮ್ಮ ಇಬ್ಬರು ಮಕ್ಕಳನ್ನು ಕರೆದುಕೊಂಡು ತಲಘಟ್ಟಪುರದಲ್ಲಿ ತಮ್ಮ ತೋಟದಲ್ಲಿ ತೋಡಿಸುತ್ತಿದ್ದ ಬಾವಿಯ ಕೆಲಸ

ಎಷ್ಟಾಗಿದೆ ಎಂಬುದನ್ನು ನೋಡಲು ಹೊರಟಿದ್ದರು. ಮಕ್ಕಳಿಗೆ ತೋಟ ತೋರಿಸಲು ಕರೆದುಕೊಂಡು ಹೋದರು, ಸಂಜೆ ಬಸ್‌ಗೆ ಹೊರಟು. ಕನ್ನಡ ಸಾಹಿತ್ಯ ಪರಿಷತ್‌ನ ಬಳಿ ನಾನೂ ಮತ್ತು ನನ್ನ ಜೊತೆಗಾರ, ಕನ್ನಡದ ಸದ್ದಿಲ್ಲದ ಹೋರಾಟಗಾರ ಶ್ರೀವತ್ಸ ಇಬ್ಬರೂ ಭೇಟಿಯಾಗಿ ಅವರೊಡನೆ ಮಾತನಾಡುತ್ತಾ ವಾಣಿವಿಲಾಸ ಆಸ್ಪತ್ರೆ ಬಳಿಗೆ ಬಂದೆವು. ಅಲ್ಲಿ ತಲಘಟ್ಟಪುರಕ್ಕೆ ಹೋಗುವ ಬಸ್ ಬರುತ್ತಿತ್ತು. ಚಳುವಳಿ ವಿದ್ಯಮಾನಗಳ ಬಗ್ಗೆ ಮಾತನಾಡುತ್ತಾ ಬಸ್‌ಗೆ ಕಾಯುತ್ತಿದ್ದ ರಾಮಮೂರ್ತಿ "ನನ್ನ ಮಕ್ಕಳಿಗೆ ತೋಟ ತೋರಿಸಲು ಹೊರಟಿದ್ದೇನೆ. ನೀವೂ ಬನ್ನಿ ಹೋಗೋಣ' ಎಂದರು. ನಾವಿಬ್ಬರೂ, ಅಂದು ನಮ್ಮ ಮನಸ್ಸಿಗೆ ಏನನ್ನಿಸಿತೋ ನೆನಪಿಲ್ಲ, ಯಾಕೋ ಏನೋ ಬೇಡ ಅನಿಸಿ "ನಾವು ಇಂದು ಬರೋದಿಲ್ಲ, ಇನ್ನೊಂದು ದಿನ ಖಂಡಿತ ಬರುತ್ತೇವೆ. ನಾವು ನಿಮ್ಮ ತೋಟ ನೋಡಿದ ದಿನ ಊಟಾನೇ ಮಾಡೋಲ್ಲ. ತೋಟದ ಹಣ್ಣು ಹಂಪಲುಗಳನ್ನೇ ತಿಂದು ಫಲಹಾರದ ರೂಪದಲ್ಲಿ ವನಭೋಜನ ಮಾಡುತ್ತೇವೆ" ಎಂದು ವಿನೋದವಾಗಿ ಹೇಳಿದೆವು.

"ಅದೆಲ್ಲಾ ಹಾಗಿರಲಿ ಇನ್ನೊಂದು ದಿನವೂ ಬನ್ನಿ, ಬೇಡ ಅಂದವರಾರು? ಸಂತೋಷಾನೆ, ಆದರೆ ಇಂದೂ ಬರಲೇ ಬೇಕು" ಎಂದು ಒತ್ತಾಯ ಮಾಡತೊಡಗಿದರು. ನಾವಿಬ್ಬರೂ ಇಂದು ಸಾಧ್ಯವೇ ಇಲ್ಲ ಮನೆಯಲ್ಲಿ ನಾವು ಹೇಳಿಬಂದಿಲ್ಲ. ಎಂದು ಹಠ ಹಿಡಿದೆವು. ನಮ್ಮ ಕಾಲದಲ್ಲಿ ನಮ್ಮ ಮನೆಗಳಲ್ಲಿ ಎಲ್ಲೇ ಇದ್ದರೂ ಹಗಲಲ್ಲಿ ಸಂಜೆ ವೇಳೆಗೆ ಬರುತ್ತಿದ್ದೆವು. ಬರಲಾಗದಿದ್ದಲ್ಲಿ ಇಂಥ ಕಡೆ ಹೋಗುತ್ತಿದ್ದೇವೆ ಎಂದು ತಿಳಿಸಿ ತಡವಾಗಿ ಮನೆಗೆ ಬರುತ್ತಿದ್ದೆವು. ಆದರೆ ರಾಮಮೂರ್ತಿ ನಾವು ವಾದ ಮಾಡುತ್ತಲೇ ಹೋದೆವು. ಅಷ್ಟು ಹೊತ್ತಿಗೆ ಕನಕಪುರದ ಕಡೆಗೆ ಹೋಗುವ ಒಂದೆರಡು ಬಸ್ ಗಳು ಹೊರಟು ಹೋದವು. ಕೊನೆಯ ಬಸ್ ಬಂದಾಗ "ಇರಲಿ ನಿಮ್ಮನ್ನು ವಿಚಾರಿಸಿಕೊಳ್ಳುತ್ತೇನೆ" ಅಂತ ಹೇಳಿ ಮಕ್ಕಳೊಡನೆ ಬಸ್ ಹತ್ತಿದರು. ಮಾರನೆಯ ದಿನ ಬೆಳಿಗ್ಗೆ ಡಿಸೆಂಬರ್ ೨೫ ಮಣ್ಣು ಜಾರಿ ಬಾವಿಗೆ ತಂದೆ ಮಕ್ಕಳು ಬಿದ್ದು ಸಾವನ್ನಪ್ಪಿದ ಸುದ್ದಿ ತಿಳಿದು

ದಿಗ್ಭ್ರಾಂತರಾದೆವು.ನಮಗೂ ಅವರ ಮೂಲಕ ಯಮ ಧರ್ಮರಾಯ ಸಾವಿನ ಆಹ್ವಾನವನ್ನು ಕೊಡುತ್ತಿದ್ದ ಎನ್ನಿಸಿತು.ಅದನ್ನು ನೆನೆದು ಎದೆ ಝಲ್ಲೆಂದಿತು. ಅವರು ನಮ್ಮನ್ನು ವಿಚಾರಿಸಿಕೊಳ್ಳುವ ದಿನ ಬರಲೇ ಇಲ್ಲ.

ಅಂದು ಸಂಜೆ ಆತ್ಮೀಯವಾಗಿ ಒತ್ತಾಯಪೂರ್ವಕವಾಗಿ ಅವರು ನಮ್ಮನ್ನು ತೋಟಕ್ಕೆ ಕರೆಯುತ್ತಾ ವಾಗ್ವಾದ ನಡೆಸಿದ ವೈಖರಿ, ಅವರಿಗೆ ಇದ್ದ ಅತಿಥ್ಯದ ಆಸಕ್ತಿ, ಮಿತ್ರರ ಬಗ್ಗೆ ಕಳಕಳಿ, ಅಂತಃಕರಣಪೂರ್ವಕ ನುಡಿಗಳನ್ನು ಜಬರ್‌ದಸ್ತಿನಿಂದ ನಮ್ಮೊಂದಿಗೆ ಮಾತಾಡುತ್ತಿದ್ದ ಮಾತುಗಳೂ ಇಂದಿಗೂ ನನ್ನ ಕಣ್ಮುಂದೆ ಧುತ್ತೆಂದು ಬಂದು ನಿಲ್ಲುತ್ತದೆ.

ಜಿ.ಪಿ.ರಾಜರತ್ನಂ ರವರು ಒಮ್ಮೆ ಹೇಳಿದ್ದರು: "ಕಾಸಿಗಾಗಿ ಕನ್ನಡ ಹೋರಾಟಮಾಡಬಾರದು, ಕನ್ನಡ causeಗಾಗಿ ಮಾಡಬೇಕು" ಎಂಬುದಾಗಿ. ಆದರೆ ಕನ್ನಡ ಚಳುವಳಿಯನ್ನು ಇಂದು ಹಲವಾರು ಮಂದಿ ಕಾಸಿಗಾಗಿ ಮಾಡುತ್ತಿದಾರೆ. ಕನ್ನಡದ causeಗಾಗಿ ಮಾಡುತ್ತಿಲ್ಲ. ಆದರೆ ಮ. ರಾಮಮೂರ್ತಿಯವರು ಸ್ವಾತಂತ್ರ್ಯ ಹೋರಾಟಗಾರ, ಪತ್ರಿಕೋದ್ಯಮಿ, ವಿದ್ವಾಂಸರಾದ ತಂದೆಯ ಹಾಗೆ ಹೋರಾಟ, ಪತ್ರಿಕೋದ್ಯಮ, ವಿದ್ವತ್ತಿನ ರಂಗಗಳಲ್ಲಿ ಶ್ರಮಿಸಿ, ತಾಯಿಯಂತೆ ಮಗಳು ಎಂಬ ಗಾದೆಯಂತೆ ತಂದೆಯಂತೆ ಮಗ ಎನಿಸಿಕೊಂಡ ಅಪರೂಪ ತಂದೆ ಮಗ ಜೋಡಿ ವೀರಕೇಸರಿ ರಾಮಮೂರ್ತಿಅವರದು.

ರಾಮಮೂರ್ತಿ ಅವರು ಕಾಲುವೆಮನೆ ಪತ್ತೇದಾರಿ ಕಾದಂಬರಿಯಿಂದ ಪ್ರಾರಂಭಮಾಡಿ ನೂರಾರು ಕಾದಂಬರಿಗಳನ್ನು ಬರೆದು ಸಾಹಿತಿ ಅಷ್ಟೇ ಆಗಿರಲಿಲ್ಲ. ಕನ್ನಡವನ್ನು ಆಳವಾಗಿ ಅಭ್ಯಾಸಮಾಡುತ್ತಿದ್ದರು. ರಾಮಾಯಣದ ಬಗ್ಗೆ ತಂದೆಯಿಂದ ಪ್ರಭಾವಿತರಾಗಿದ್ದರು. ವೀರಕೇಸರಿಯವರು ಸಮಗ್ರ ರಾಮಾಯಣ ವನ್ನು ಕಾದಂಬರಿ ರೂಪದಲ್ಲಿ ಅನುವಾದಿಸಿದ್ದಾರೆ. ಆ ಸಂದರ್ಭದಲ್ಲಿ ತಂದೆಯೊಡನೆ ರಾಮಾಯಣ ಗ್ರಂಥಗಳನ್ನು ಅಧ್ಯಯನ ಮಾಡಿ ಅನಕೃ ಅವರ ಬಳಿ ಚರ್ಚಿಸುತ್ತಿದ್ದರು. ಅವರ ಗಂಭೀರಚಿಂತನೆಗಳನ್ನು ಕೇಳಿ ಬೆರಗಾಗಿದ್ದೇನೆ. ಆ ಸಮಯದಲ್ಲಿ ರಾಮಾಯಣದ ಬಗ್ಗೆ ಸಮಗ್ರ ಕಾದಂಬರಿ ಮಾಲೆಯನ್ನು

ಬರೆಯಬೇಕೆಂದು ರಾಮಾಯಣದ ಅಧ್ಯಯನವನ್ನು ಅನಕೃ ಮಾಡುತ್ತಿದ್ದರು. ರಾಮಮೂರ್ತಿ ಅವರು ಕೇವಲ ಕನ್ನಡ ಹೋರಾಟಗಾರ, ಪುಸ್ತಕ ಪ್ರಕಟಣೆಗಾರ, ಪತ್ರಿಕಾ ಸಾಹಿತಿ ಅಷ್ಟೇ ಅಲ್ಲ, ಕನ್ನಡದ ಆಳವಾದ ಅಧ್ಯಯನ ಕಾರ ಸಹ ಆಗಿದ್ದರು ಎಂಬುದು ಅನೇಕರಿಗೆ ತಿಳಿಯದ ಸಂಗತಿ ಆಗಿದೆ. ಕರ್ಲಮಂಗಲಂ ಶ್ರೀಕಂಠಯ್ಯನವರ ಬಳಿ ಗಹನ ಚರ್ಚೆಮಾಡುತ್ತಿದ್ದರು. ಆ ಸಂದರ್ಭಗಳಲ್ಲಿ ರಾಮಮೂರ್ತಿ ಅವರ ವಿಚಾರಧಾರೆ ಕಂಡು ಬೆರಗಾಗಿದ್ದೇನೆ. ಕರ್ಲಮಂಗಲಂ ಶ್ರೀಕಂಠಯ್ಯನವರ ಬಳಿ ಗಹನ ಚರ್ಚೆ ಮಾಡುತ್ತಿದ್ದರು. ಆ ಸಂದರ್ಭಗಳಲ್ಲಿ ರಾಮಮೂರ್ತಿ ಅವರ ವಿಚಾರಧಾರೆ ಕಂಡು ಬೆರಗಾಗಿದ್ದೇನೆ.

ಇಂಥ ಭವ್ಯ ವ್ಯಕ್ತಿತ್ವದ ಕನ್ನಡದ ಅಪೂರ್ವ ಚಳುವಳಿಗಾರ, ದಟ್ಟಿಪಂಚೆ ಜುಬ್ಬಾಧಾರಿ, ಸಿಂಹಧ್ವನಿಯ ಕನ್ನಡ ಜೀವಿಯ ಸಹವಾಸ ಹಲವು ವರ್ಷಗಳು ನಿಕಟವಾಗಿ ದೊರೆತಿದ್ದು ನನ್ನ ಜೀವನದ ಅಪೂರ್ವ ಭಾಗ್ಯಗಳಲ್ಲಿ ಒಂದಾಗಿದೆ.

ಇವರನ್ನು ಕುರಿತು ಎನ್. ಆನಂದರಾಮ ರಾವ್ ಅವರು ಉಪಯುಕ್ತ ಮಾಹಿತಿಗಳಿಂದ ಕೂಡಿದ ಪುಟ್ಟ ಗ್ರಂಥವನ್ನು ಸರಳವಾಗಿ ಮನ ಮುಟ್ಟುವಂತೆ ಬರೆದಿದ್ದಾರೆ. ಇದು ಅವರ ಬಗ್ಗೆ ದೊಡ್ಡ ಅಧಿಕೃತ ಗ್ರಂಥ ಬರಲು ನಾಂದಿ ಆಗಲಿ ಎಂದು ಆಶಿಸುತ್ತೇನೆ.

ಅನಕೃ, ರಾಮಮೂರ್ತಿಗಳ ಕನ್ನಡ ಚಳುವಳಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ, ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯಲ್ಲಿ ಅಧಿಕಾರಿಯಾಗಿದ್ದು ಅಲ್ಲಿನ ಕಾರ್ಮಿಕರನ್ನು ಕನ್ನಡ ಚಳುವಳಿಗೆ ತೊಡಗಿಸಿದವರಲ್ಲಿ ಆನಂದ ರಾಮರಾವ್‌ರವರು ಪ್ರಮುಖರಾಗಿದ್ದಾರೆ. ಕನ್ನಡ ಚಳುವಳಿಗೆ ಸಂಬಂಧಿಸಿದಂತೆ "ಇಟ್ಟ ಹೆಜ್ಜೆ ಪಟ್ಟ ಶ್ರಮ" ಗ್ರಂಥ, "ನಿವೃತ್ತಿಗಾಗಿ ಯೋಜನೆ" ಗ್ರಂಥಗಳನ್ನು ರಚಿಸಿ ನಿವೃತ್ತಿ ನೆಮ್ಮದಿ ಅಂಕಣಕಾರರಾದ ಆನಂದ ರಾಮರಾವ್‌ರವರು "ವಿಶಾಲ ಉಲುಚುಕಮ್ಮೆ" ತ್ರೈಮಾಸಿಕ ಪತ್ರಿಕೆಯ ಸಂಪಾದಕರಾಗಿ ಕನ್ನಡ ಸೇವೆ ಮಾಡುತ್ತಿದ್ದಾರೆ. ಕನ್ನಡ ಸೇನಾನಿ ಮ.ರಾಮಮೂರ್ತಿಯವರನ್ನು ಕುರಿತು ಕನ್ನಡ ಅಭಿಮಾನದಿಂದ ಅವರು

ಬರೆದಿರುವ ಗ್ರಂಥವನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗು ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ಪ್ರಕಟಿಸುತ್ತಿರುವುದು ಶ್ಲಾಘನೀಯವಾಗಿದೆ.

ರಾಮಮೂರ್ತಿ ಅವರ ಕನ್ನಡ ಸೇವೆ, ಚಳುವಳಿ, ಸಾಹಿತ್ಯ ಕನ್ನಡಿಗರನ್ನು ಪುಳಕಿತಗೊಳಿಸಲು ಇಂಥ ಗ್ರಂಥಗಳು ಹೊರಬರುತ್ತಿರಲಿ. ಅವರ ಗ್ರಂಥಗಳು ಪುನರ್ಮುದ್ರಣವಾಗಲಿ ಎಂದು ಆಶಿಸುತ್ತೇನೆ.

ಪ್ರೊ.ಜಿ. ಅಶ್ವತ್ಥನಾರಾಯಣ
ನಿವೃತ್ತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು



ಲೇಖಕರ ಮಾತು

"ಕನ್ನಡಿಗರೇ ಏಳಿ, ಎಚ್ಚರಗೊಳ್ಳಿ, ಆರಂಭ ಮಾಡಿ, ಹಿಂದೆ ಯೂರೋಪಿನಲ್ಲಿ ರಿನೇ ಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ ಒಬ್ಬ ಮಹಾ ಪಂಡಿತನು 'ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗುತ್ತೇವೆ'. ಎಂದು ಘೋಷಿಸಿದನು. "ನಾವು ಕನ್ನಡಿಗರು ಇಂದು ಸತ್ತವರನ್ನು ಎಬ್ಬಿಸುವುದೇ ಅಲ್ಲ, ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು." – ಹೀಗೆಂದು ಹೇಳಿದವರು "ಕನ್ನಡದ ಕಣ್ವ"ರೆಂದೇ ಖ್ಯಾತರಾದ ಆಚಾರ್ಯ ಬಿ.ಎಂ.ಶ್ರೀಕಂಠಯ್ಯ ನವರು.

ಕನ್ನಡ ಚಳುವಳಿಗೆ ಬೀಜ ಬಿತ್ತಿದವರೇ ಬಿ.ಎಂ.ಶ್ರೀ. ಎಂದೆನ್ನಬಹುದು. ಮೈಸೂರಿನ ಅಗ್ರಹಾರ ರಸ್ತೆಯಲ್ಲಿ ಜಾಗಟೆ ಹೊಡೆದುಕೊಂಡು ಕನ್ನಡಕ್ಕೆ ಜಯವಾಗಲಿ ಎಂದು ಕೂಗಿಕೊಂಡು ಹೋಗುತ್ತಿದ್ದುದೇ ಕನ್ನಡ ಚಳುವಳಿಯ ಪ್ರಾರಂಭ ಎಂದು ಪರಿಗಣಿಸಲಾಗಿದೆ. ಮೈಸೂರಿನಲ್ಲಿ ಅವರು ಕಾಸಿನ ಸಂಘ ಎಂದು ಸ್ಥಾಪಿಸಿದರು. ಈ ಸಂಘದ ವಿಶೇಷತೆ ಎಂದರೆ ಸಂಘದ ಸದಸ್ಯರು ಮಾತನಾಡುವಾಗ ಇಂಗ್ಲಿಷ್ ಬಳಸುವಂತಿರಲಿಲ್ಲ. ಅಪ್ಪಿತಪ್ಪಿ ಬಳಸಿದರೆ ಒಂದು ಇಂಗ್ಲಿಷ್ ಶಬ್ದಕ್ಕೆ ಒಂದು ಕಾಸು ದಂಡ ತೆರಬೇಕಾಗುತ್ತಿತ್ತು.

ಹೀಗೆ ಕಳೆದ ಶತಮಾನದ ಆರಂಭದಲ್ಲಿ ಕನ್ನಡ ಜಾಗೃತಿಯನ್ನು ಹುಟ್ಟುಹಾಕಿದ ಬಿ.ಎಂ.ಶ್ರೀ.ಯವರ ನಂತರ ೧೯೩೦ರ ದಶಕದಲ್ಲಿ

ಕನ್ನಡನಾಡಿನಲ್ಲಿ ಕನ್ನಡ ಚಳುವಳಿಗೆ ನಾಂದಿ ಹಾಡಿ ಕನ್ನಡಿಗರನ್ನು ಎಚ್ಚರಿಸಿ ಅವರ ಹೃದಯದಲ್ಲಿ ಕನ್ನಡದ ಕಿಚ್ಚು-ಕೆಚ್ಚಿನ ಜ್ಯೋತಿಯನ್ನು ಬೆಳಗಿಸಿ ಕ್ರಾಂತಿ ಮಂತ್ರವನ್ನು ಘೋಷಿಸಿದವರಲ್ಲಿ ಪ್ರಮುಖರಾದವರು ಕನ್ನಡದ ವೀರಸೇನಾನಿ ಎಂದೇ ಪ್ರಖ್ಯಾತರಾದ ಮ.ರಾಮಮೂರ್ತಿಯವರು.

ರಾಮಮೂರ್ತಿಯವರು ಜನಿಸಿ ೧೦೦ವರ್ಷಗಳಾಗಿವೆ. (ಜನನ ೧೧.೦೩.೧೯೧೮). ಈ ವರ್ಷ ಅವರ ಜನ್ಮ ಶತಾಬ್ದಿಯ ವರ್ಷ. ಅದರ ಅಂಗವಾಗಿ ಕರ್ನಾಟಕ ಕೈಗಾರಿಕಾ ವಾಣಿಜ್ಯೋದ್ಯಮಗಳ ಕನ್ನಡ ಸಂಘಗಳ ಒಕ್ಕೂಟ ಅವರ ಜನ್ಮಶತಾಬ್ದಿಯನ್ನು ಸಾರ್ಥಕ ರೂಪದಲ್ಲಿ ನಡೆಸಲು ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದೆ. ಅವುಗಳಲ್ಲಿ ಒಂದು ಅವರ ಹೋರಾಟಗಳ ವಿವರಗಳನ್ನೊಳಗೊಂಡಂತೆ ಒಂದು ಪುಸ್ತಕವನ್ನು ಪ್ರಕಟಿಸಿ ಇಂದಿನ ಯುವ ಜನತೆಗೆ ಅವರು ಅಂದು ಕೈಗೊಂಡ ಚಳುವಳಿಯ ಹೋರಾಟಗಳನ್ನು ತಿಳಿಯಪಡಿಸುವುದು. ಈ ಸಂಬಂಧ ಒಕ್ಕೂಟದ ಕಾರ್ಯಾಧ್ಯಕ್ಷರಾದ ಶ್ರೀಸಿದ್ದಯ್ಯನವರು ಹಾಗೂ ಕಾರ್ಯದರ್ಶಿ ಶ್ರೀ ಶ್ರೀಧರ್ ರವರು ಕೆಲವು ದಿನಗಳ ಹಿಂದೆ ನನ್ನನ್ನು ಭೇಟಿ ಮಾಡಿ ರಾಮಮೂರ್ತಿಯವರ ಬಗೆಗೆ ಒಂದು ಪುಸ್ತಕವನ್ನು ಬರೆದು ಕೊಡಬೇಕೆಂದು ಕೇಳಿದರು. ರಾಮಮೂರ್ತಿ ಯವರ ನೇತೃತ್ವದಲ್ಲಿ ನಡೆದ ಸಂಯುಕ್ತ ರಂಗದ ಎಲ್ಲ ಹೋರಾಟಗಳಲ್ಲಿಯೂ ನಾನು ಪ್ರತ್ಯಕ್ಷವಾಗಿ ಕ್ರಿಯಾತ್ಮಕವಾಗಿ ಭಾಗವಹಿಸಲಾಗದಿದ್ದರೂ ಪ್ರೇಕ್ಷಕನಾಗಿ ಬಹುತೇಕ ಎಲ್ಲ ಹೋರಾಟಗಳನ್ನೂ ನೋಡುವ ಅವಕಾಶ ನನ್ನದಾಗಿತ್ತು. ಸಂಯುಕ್ತ ರಂಗದ ಎಲ್ಲ ಬಹಿರಂಗ ಸಭೆಗಳಲ್ಲಿಯೂ ಹಾಜರಿರುತ್ತಿದ್ದೆ. ಕನ್ನಡ ಯುವಜನ ಪತ್ರಿಕೆಯನ್ನು ಕೊಂಡು ಓದುವ ಖಾಯಂ ಓದುಗನಾಗಿದ್ದೆ. ಹೀಗಾಗಿ ಚಳುವಳಿಯ ಸಾಕಷ್ಟು ಮಾಹಿತಿ ನನ್ನ ಮನದಲ್ಲಿ ಮೂಡಿತ್ತು.

ರಾಮಮೂರ್ತಿಯವರ ಬಗೆಗೆ ಪುಸ್ತಕ ಬರೆಯಲು ನನ್ನ ಸ್ನೇಹಿತರು ಸಲಹೆ ನೀಡಿದಾಗ ರಾಮಮೂರ್ತಿಯವರ ಬಗೆಗಿನ ಗೌರವ ಹಾಗು ಕನ್ನಡದ ಬಗ್ಗೆ ನನಗಿದ್ದ ಅಭಿಮಾನದಿಂದ ಸಂತೋಷವಾಗಿಯೇ ಒಪ್ಪಿಕೊಂಡೆ. ಈ ಸಂದರ್ಭದಲ್ಲಿ ಹಿಂದೆ ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯ

ಕನ್ನಡ ಹಿತ ರಕ್ಷಕ ಸಮಿತಿಯ ರಜತೋತ್ಸವ ಸಮಾರಂಭದ ನೆನಪಿಗಾಗಿ ಗೆಳೆಯರಾದ ಮಂ.ಅ ವೆಂಕಟೇಶ್ ಹಾಗೂ ಮು.ಪಾರ್ಥಸಾರಥಿ ಯವರ ಜೊತೆಗೂಡಿ ರಚಿಸಿದ್ದ "ಇಟ್ಟ ಹೆಜ್ಜೆ ಪಟ್ಟ ಶ್ರಮ" ಗ್ರಂಥಕ್ಕಾಗಿ ಸಂಗ್ರಹಿಸಿದ್ದ ಕೆಲವೊಂದು ಮಾಹಿತಿಗಳು ನನ್ನ ನೆರವಿಗೆ ಬಂತು. ಅಲ್ಲದೆ ಕನ್ನಡ ಗೆಳೆಯರ ಬಳಗದ ಶ್ರೀ ರಾ.ನಂ.ಚಂದ್ರಶೇಖರ್‌ರವರನ್ನು ಸಂಪರ್ಕಿಸಿದಾಗ ಅಂದಿನ ಕನ್ನಡ ಯುವಜನ ಪತ್ರಿಕೆಯ ಹಲವಾರು ಪತ್ರಿಕೆಗಳನ್ನು ಅವರು ನೀಡಿದರು. ರಾಮಮೂರ್ತಿಯವರ ಬಗೆಗೆ ಈ ಹಿಂದೆ ಅನೇಕ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಲೇಖನಗಳು ಹಾಗೂ ನನ್ನ ನೆನಪಿನಲ್ಲಿ ದಾಖಲಾಗಿದ್ದ ಹಲವಾರು ಸಂಗತಿಗಳೂ ಸಹ ಈ ಪುಸ್ತಕದ ರಚನೆಯಲ್ಲಿ ನನ್ನ ನೆರವಿಗೆ ಬಂದಿತು. ಅವುಗಳೆಲ್ಲವನ್ನು ಒಳಗೊಂಡಂತೆ ಆದಷ್ಟು ವಿಶದವಾಗಿ ವಿವರವಾಗಿ ರಾಮಮೂರ್ತಿಯವರ ಬಗೆಗೆ ಬರೆಯಲು ಒಂದು ಕಿರು ಪ್ರಯತ್ನವನ್ನು ಮಾಡಿದ್ದೇನೆ. ಆದರೂ ಸಹ ರಾಮಮೂರ್ತಿಯವರ ಸಂಗಡವಿದ್ದು ಅವರಿಗೆ ಬೆಂಬಲವಾಗಿದ್ದ ಅನೇಕ ಜನ ಚಳುವಳಿಗಾರರ ಹೆಸರು ಈ ಪುಸ್ತಕದಲ್ಲಿ ಬಿಟ್ಟುಹೋಗಿರಬಹುದು. ಅದಕ್ಕಾಗಿ ಕ್ಷಮೆಯಿರಲಿ.

ಈ ಪುಸ್ತಕಕ್ಕಾಗಿ ಮುನ್ನುಡಿಯನ್ನು ಬರೆದುಕೊಡಬೇಕೆಂದು ರಾಮಮೂರ್ತಿಯವರೊಡನೆ ನಿಕಟ ಸಂಬಂಧ ಹೊಂದಿದ್ದವರೂ ಅಲ್ಲದೆ ಆ ಹೋರಾಟದಲ್ಲಿ ಸಕ್ರಿಯರಾಗಿದ್ದವರೂ ಆದ, ವಿಶ್ರಾಂತ ಕನ್ನಡ ಪ್ರಾಧ್ಯಾಪಕರೂ, ಉತ್ತಮ ಲೇಖಕರೂ, ವಾಗ್ಮಿಗಳೂ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳೂ ಆಗಿದ್ದ ಪ್ರೊ. ಜಿ. ಅಶ್ವತ್ಥನಾರಾಯಣ ರವರನ್ನು ಕೋರಿದಾಗ ಅವರು ತಕ್ಷಣವೇ ಸ್ಪಂದಿಸಿ ತಮ್ಮ ಮತ್ತು ರಾಮಮೂರ್ತಿಯವರ ಒಡನಾಟದ ಹಲವಾರು ಸ್ವಾರಸ್ಯಕರ ಘಟನೆಗಳ ವಿವರಗಳನ್ನುಳ್ಳ ಮುನ್ನುಡಿಯನ್ನು ಬರೆದುಕೊಟ್ಟಿದ್ದಾರೆ. ಅವರಿಗೆ ನನ್ನ ವಂದನೆಗಳು.

ಕನ್ನಡ ಯುವಜನ ಪತ್ರಿಕೆಯ ಹಿಂದಿನ ಪ್ರತಿಗಳನ್ನು ನೀಡಿ

ಸಹಕರಿಸಿದ ಶ್ರೀ ರಾ.ನಂ.ಚಂದ್ರಶೇಖರ್ ರವರಿಗೂ, ಹಾಗೂ ತಮ್ಮ ಪತ್ರಿಕಾ ಸಂಗ್ರಹದಿಂದ ಸಾಕಷ್ಟು ಮಾಹಿತಿಯನ್ನು ಒದಗಿಸಿದ ಶ್ರೀ ಮಂ.ಅ ವೆಂಕಟೇಶ್‌ರವರಿಗೂ ನಾನು ಆಭಾರಿಯಾಗಿದ್ದೇನೆ.


ರಾಮಮೂರ್ತಿಗಳ ಜನ್ಮಶತಾಬ್ದಿಕಾರ್ಯಕ್ರಮವನ್ನು ನಡೆಸುತ್ತಿರುವ ಈ ಸಂದರ್ಭದಲ್ಲಿ ಅವರ ಬಗ್ಗೆ ಈ ಕಿರು ಪುಸ್ತಕವನ್ನು ರಚಿಸಲು ಅವಕಾಶವನ್ನು ಮಾಡಿಕೊಟ್ಟು ಅವರನ್ನು ನೆನಪಿಸಿಕೊಳ್ಳುವ ಸುಯೋಗವನ್ನು ನನಗೆ ದೊರಕಿಸಿಕೊಟ್ಟ ಕರ್ನಾಟಕ ಕೈಗಾರಿಕಾ ವಾಣಿಜ್ಯೋದ್ಯಮಗಳ ಕನ್ನಡ ಸಂಘಗಳ ಒಕ್ಕೂಟದ ಕಾರ್ಯಾಧ್ಯಕ್ಷರಾದ ಶ್ರೀ ಸಿದ್ದಯ್ಯ, ಅಧ್ಯಕ್ಷರಾದ ಶ್ರೀ ಎಂ ತಿಮ್ಮಯ್ಯ ಕಾರ್ಯದರ್ಶಿಗಳಾದ ಶ್ರೀ ನ. ಶ್ರೀಧರ ರವರಿಗೆ ನನ್ನ ವಂದನೆಗಳು.

ಪುಸ್ತಕದ ಅಕ್ಷರ ಜೋಡಣೆಯನ್ನು ಸುಂದರವಾಗಿ ಮಾಡಿಕೊಟ್ಟ ರಚನಾ ಕ್ರಿಯೇಷನ್ಸ್‌ನ ಶ್ರೀ ಚಂದ್ರಶೇಖರ ವೃಣ್ಣಿಮನಿಯವರಿಗೂ ಹಾಗೂ ಶ್ರೀಮತಿ ಶ್ರೀದೇವಿಯವರಿಗೂ, ಪುಸ್ತಕಕ್ಕೆ ಅಂದವಾದ ರಕ್ಷಾಪುಟವನ್ನು ವಿನ್ಯಾಸಗೊಳಿಸಿದ ಶ್ರೀ ಚಂದ್ರಕಾಂತ ಪಟ್ಟಣ ಇವರಿಗೂ. ಮುದ್ರಿಸಿಕೊಟ್ಟ ಶ್ರೀ ಉಜ್ವಲ ಮುದ್ರಣಾಲಯದವರಿಗೂ ನನ್ನ ವಂದನೆಗಳು.

ಎಂದಿನಂತೆ ನನ್ನ ಬರಹಗಳಿಗೆ ಸದಾ ಬೆನ್ನೆಲುಬಾಗಿರುವ ಮಡದಿ ಉಷಾಳಿಗೆ ವಂದನೆಗಳು.

– ಎನ್. ಆನಂದರಾಮರಾವ್

ಅಧ್ಯಕ್ಷರ ನುಡಿ



ಕನ್ನಡ ಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳಿಗೂ ಅಧಿಕ ಇತಿಹಾಸವಿದೆ. ಹಾಗೆಯೇ ಕರ್ನಾಟಕದ ಉದ್ದಗಲಕ್ಕೂ ಕಂಡುಬಂದಿರುವ ಪ್ರಾಗೈತಿಹಾಸಿಕ ಮಾನವ ನೆಲೆಗಳನ್ನು ನೋಡಿದರೆ ಆದಿಮಾನವನ ಕಾಲದಿಂದಲೂ ನಮ್ಮ ರಾಜ್ಯದಲ್ಲಿ ಜನವಸತಿ ಇತ್ತೆಂದು ಸ್ಪಷ್ಟವಾಗುತ್ತದೆ. ಅಂದಿನಿಂದಲೂ ಈ ಭಾಷೆ, ನೆಲ, ಜಲ, ಗಡಿಗಳನ್ನು ಕುರಿತು ಅನೇಕ ಯುದ್ಧಗಳು, ಹೋರಾಟಗಳು, ಚಳುವಳಿಗಳು, ನಡೆದು ಬಂದಿರುವುದನ್ನು ಕಾಣುತ್ತೇವೆ. ಆಗಾಗ ಅನ್ಯರಾಜರ, ಅನ್ಯ ಭಾಷೆಯ, ಅನ್ಯಭಾಷಿಕರ ದಬ್ಬಾಳಿಕೆಯನ್ನು ಪ್ರಭಾವ ಪರಿಣಾಮಗಳನ್ನು ಎದುರಿಸಿಕೊಂಡೇ ಮುಂದೆ ಸಾಗಿಬಂದಿರುವುದು ಅಚ್ಚರಿಯೇನಲ್ಲ. ಯಾವುದೇ ಭಾಷೆ, ನೆಲ, ಜಲಗಳನ್ನು ಕುರಿತು ಯೋಚಿಸುವಾಗ ಅದು ಸ್ವಾಭಿಮಾನ, ದೇಶಾಭಿಮಾನ, ಆತ್ಮಗೌರವದ ಪ್ರತಿಷ್ಠೆಯಾಗಿ ಸ್ವಾಭಿಮಾನದ ಸಂಕೇತವಾಗುತ್ತದೆ. ಅದಕ್ಕೆ ಧಕ್ಕೆಯಾದಾಗ ನಿಜವಾದ ಆ ಪ್ರದೇಶದ ವ್ಯಕ್ತಿ ಸಹಿಸುವುದಿಲ್ಲ. ಅವನು ಹೋರಾಟಕ್ಕೆ ಇಳಿಯುತ್ತಾನೆ. ಅಂತಹುದೇ ವ್ಯಕ್ತಿಗಳನ್ನು ಕರ್ನಾಟಕದ ಉದ್ದಗಲಕ್ಕೂ ಅನೇಕರನ್ನು ಕಾಣಬಹುದು. ಅವರಲ್ಲಿ ಬೆಂಗಳೂರು ಸಂದರ್ಭವನ್ನು ನೆನಪಿಸಿಕೊಂಡರೆ ಥುತ್ತನೆ ಕಂಡುಬರುವುದು ಮ.ರಾಮಮೂರ್ತಿ ಅವರ ಹೆಸರು. ಅಂದು ಬೆಂಗಳೂರಿನಲ್ಲಿ ನಡೆಯುತ್ತಿದ್ದ ಭಾಷಿಕ ಚಳುವಳಿಯ ಮುಂಚೂಣಿಯಲ್ಲಿರುತ್ತಿದ್ದ ಅಪ್ಪಟ ಸ್ವಾಭಿಮಾನದ ಸಂಕೇತವಾಗಿದ್ದರು.

ರಾಜ್ಯದ ರಾಜಧಾನಿಯಾದ ಬೆಂಗಳೂರು ಮಹಾನಗರದಲ್ಲಿ ಅನ್ಯಭಾಷೆ ಮತ್ತು ಭಾಷಿಕರ ಪ್ರಭಾವ ಸ್ವತಂತ್ರಪೂರ್ವದಲ್ಲಿ ದಟ್ಟವಾಗಿಯೇ ಇತ್ತು. ಇದಕ್ಕೆ ಕಾರಣ ಹಲವಾರು. ಅದರಲ್ಲಿ ಪ್ರಮುಖ ಕಾರಣ ಉದ್ಯೋಗ ಮತ್ತು ವಲಸೆ. ಅಂದಿನ ಬ್ರಿಟೀಷ್ ಸರ್ಕಾರ ಮದರಾಸು ಪ್ರಾಂತ್ಯದಿಂದ ತಮಿಳರನ್ನು ಕರೆತಂದು ಬೆಂಗಳೂರು ದಂಡು ಪ್ರದೇಶದಲ್ಲಿದ್ದ ಸೇನಾ ತುಕಡಿಗಳಲ್ಲಿ ನೇಮಕ ಮಾಡಿಕೊಂಡರು. ಕನ್ನಡಿಗರು ಮತ್ತು ತಮಿಳರು ಪಾರಂಪರಿಕ ವೈರಿಗಳೆಂದು ಮನಗಂಡಿದ್ದ ಬ್ರಿಟೀಷರು ಕನ್ನಡಿಗರ ಮೇಲೆ ತಮಿಳರನ್ನು ಎತ್ತಿಕಟ್ಟಲು ಕಾರ್ಯ ಮಾಡಿದರು. ಇದರ ಪರಿಣಾಮದಿಂದ ದಂಡು

ಪ್ರದೇಶದಲ್ಲಿ ತಮಿಳು ಜನರ ಪ್ರಾಬಲ್ಯ ಅಧಿಕವಾಯಿತು. ಇದರಿಂದ ಹೆಚ್ಚು ಹೆಚ್ಚು ತಮಿಳರು ಕರ್ನಾಟಕದ ಬೆಂಗಳೂರಿನಲ್ಲಿ ನೆಲೆಗೊಂಡರು. ನಂತರ ಮೈಸೂರಿನ ದಿವಾನರೂ ಸಹ ತಮಿಳರನ್ನು ಹೆಚ್ಚು ಹೆಚ್ಚು ಉದ್ಯೋಗದಲ್ಲಿ ಸೇರ್ಪಡೆಗೊಳಿಸಿದರು. ಈ ಕಾರಣದಿಂದ ಬೆಂಗಳೂರಿನ ಕೇಂದ್ರೋದ್ಯಮ ಕಾರ್ಖಾನೆಗಳಾದ ಐಟಿಐ, ಎಚ್‌ಎಂಟಿ, ಬಿಇಎಲ್, ಬಿಎಚ್‌ಇಎಲ್, ಬಿಇಎಂಎಲ್, ಎಚ್‌ಎಎಲ್ ಹಾಗೆಯೇ ಖಾಸಗಿ ಕಾರ್ಖಾನೆಗಳಾದ ಮೈಕೋ, ಬಿನ್ನಿಮಿಲ್, ಮಿನರ್ವಮಿಲ್, ರಾಜಾಮಿಲ್, ರಾಜ್ಯ ಸರ್ಕಾರಿ ಒಡೆತನದ ಮೈಸೂರು ಲ್ಯಾಂಪ್ಸ್, ಸರ್ಕಾರಿ ಸಾಬೂನು ಕಾರ್ಖಾನೆ, ವಿದ್ಯುತ್ ಕಾರ್ಖಾನೆ, ಎನ್‌ಜಿಎಫ್, ಮೊದಲಾದ ಎಲ್ಲಾ ಕಾರ್ಖಾನೆಗಳ ಆಯಕಟ್ಟಿನ ಅಧಿಕಾರಿಗಳು ತಮಿಳು ಭಾಷಿಕರಿಗೆ ಹೆಚ್ಚು ಅವಕಾಶ ಮಾಡಿಕೊಟ್ಟರು ಈ ಕಾರಣದಿಂದ ಬೆಂಗಳೂರಿನಲ್ಲಿ ತಮಿಳರ ಅಟ್ಟಹಾಸ ಹೆಚ್ಚಾಯಿತು. ಅದು ತೀರಾ ವಿಪರೀತವಾದಾಗ ಅದನ್ನು ಮಟ್ಟ ಹಾಕಲು ಕನ್ನಡ ಸಂಘಟನೆಗಳು ಹುಟ್ಟಿಕೊಂಡವು.

ಅಂಥವುಗಳಲ್ಲಿ ಮೈಸೂರಿನ "ಕನ್ನಡ ಯುವ ಜನ ಸಭಾ" ಮೊದಲು ಅಸ್ತಿತ್ವಕ್ಕೆ ಬಂದಿತು ಅದರಂತೆಯೇ ಬೆಂಗಳೂರಿನಲ್ಲಿ ಅನಕೃ, ಕೋಣಂದೂರು ಲಿಂಗಪ್ಪ, ಮ.ರಾಮಮೂರ್ತಿ, ಮಂಗಳವೇಡೆ ಶ್ರೀನಿವಾಸ್ ಮೊದಲಾದವರು ಮಾತನಾಡಿಕೊಂಡು. ಬೆಂಗಳೂರಿನಲ್ಲಿ ಕನ್ನಡ ಉಳಿಯದಿದ್ದರೆ ಕನ್ನಡಿಗರಿಗೆ ಉಳಿಗಾಲವಿಲ್ಲವೆಂದು ತಿಳಿದು ಮೈಸೂರಿನ "ಕನ್ನಡ ಯುವಜನ ಸಭಾದ" ವತಿಯಿಂದ ಬೆಂಗಳೂರಿನಲ್ಲಿ ಒಂದು ಸಮಾವೇಶ ಮಾಡಿದರು. ಕೆಂಗಲ್ ಹನುಮಂತಯ್ಯ, ಶ್ರೀರಂಗ, ಮುಂತಾದವರಿಂದ ಉದ್ಘಾಟಿಸಿದರು. ಮುಂದೆ ಆ ಸಂಘ ಬೆಂಗಳೂರಿನಲ್ಲಿಯೇ ಕಾರ್ಯನಿರತವಾಯಿತು. ಕೋಣಂದೂರು ಲಿಂಗಪ್ಪ, ಮ.ರಾಮಮೂರ್ತಿ, ಬಂಡಗದ್ದೆ ರಮೇಶ್, ಶಾಂತವೇರಿ ಗೋಪಾಲಗೌಡ ಮುಂತಾದವರು ಅದರ ನೇತೃತ್ವವಹಿಸಿದರು. ಮ.ರಾಮಮೂರ್ತಿ ಅವರು "ಕನ್ನಡ ಯುವಜನ" ಎಂಬ ಪತ್ರಿಕೆಯ ಸಂಪಾದಕರೂ ಆಗಿದ್ದರು. ಅಂದಿನಿಂದ ತಮಿಳು ಭಾಷೆ ಹಾಗೂ ತಮಿಳರ ವಿರುದ್ಧ ಹಲವಾರು ಹೋರಾಟಗಳನ್ನು ಸಂಘಟಿಸಿದರು. ಕನ್ನಡ ರಾಜ್ಯೋತ್ಸವ, ಕನ್ನಡಪರ ಕಾರ್ಯಕ್ರಮಗಳು, ನಾಡಹಬ್ಬ, ಡಬ್ಬಿಂಗ್ ಚಿತ್ರಗಳ ವಿರುದ್ಧ ಹೋರಾಟ, ಈಗ ಬಳಕೆಯಲ್ಲಿರುವ ಕನ್ನಡ ಬಾವುಟವೂ ಇವರ ಕೊಡುಗೆಯೇ ಆಗಿದೆ.

ಮುಂದೆ ರಾಮಮೂರ್ತಿ ಅವರು ಮತ್ತು ಸ್ನೇಹಿತರು "ಕನ್ನಡ ಪಕ್ಷ"ವನ್ನು ಕಟ್ಟಿಕೊಂಡರು. ಈ ರಾಜಕೀಯ ಬ್ಯಾನರ್ ಮುಖಾಂತರ ಹಲವಾರು ಕನ್ನಡ ಪರ ಹೋರಾಟವನ್ನು ನಡೆಸಿ ಬೆಂಗಳೂರಿನಲ್ಲಿ ಕನ್ನಡ ನೆಲೆಗೊಳ್ಳಲು, ಕನ್ನಡಿಗರು ಶಾಂತಿಯಿಂದ ಇರಲು ಕಾರಣಕರ್ತರಾದರು.

ಮ.ರಾಮಮೂರ್ತಿಯವರ ಶತಮಾನೋತ್ಸವ ಸಂದರ್ಭವನ್ನು ವಿಶಿಷ್ಟವಾಗಿ

ಆಚರಿಸಬೇಕೆಂದು ನಮ್ಮ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಗೆಳೆಯರು ಯೋಚಿಸುವಾಗ "ಅವರ ನೆನಪಿನಲ್ಲಿ ಒಂದು ಕೃತಿ ಹೊರತರಬೇಕೆಂದು ತೀರ್ಮಾನಿಸಿದೆವು. ಆಗ ಎನ್. ಆನಂದರಾಮರಾವ್ ಅದರ ಜವಾಬ್ದಾರಿಯನ್ನು ವಹಿಸಿಕೊಂಡು ಸಕಾಲದಲ್ಲಿ "ಮರೆಯಲಾರದ ಕನ್ನಡದ ವೀರಸೇನಾನಿ ಮ.ರಾಮಮೂರ್ತಿ" ಎನ್ನುವ ಕೃತಿಯನ್ನು ರಚಿಸಿಕೊಟ್ಟಿದ್ದಾರೆ. ಇದೊಂದು ಅತ್ಯುತ್ತಮ ಕೃತಿ ಎಂದೇ ಹೇಳಬೇಕು. ಮ.ರಾಮಮೂರ್ತಿ ಅವರ ಹುಟ್ಟು, ಬೆಳವಣಿಗೆ, ಹೋರಾಟ, ಬರವಣಿಗೆ ಎಲ್ಲವನ್ನೂ ಈ ಕೃತಿಯಲ್ಲಿ ಓದುಗರಿಗೆ ಅಪ್ಯಾಯಮಾನ ವಾಗುವಂತೆ ಬರೆದುಕೊಟ್ಟಿದ್ದಾರೆ. ಅವರಿಗೆ ಒಕ್ಕೂಟದ ಪರವಾಗಿ ಹೃದಯ ಪೂರ್ವಕ ಧನ್ಯವಾದಗಳನ್ನು ಹೇಳಬಯಸುತ್ತೇನೆ.

ಹಾಗೆಯೇ ಇಂಥ ಕೆಲಸ ಮಾಡಲು ನನ್ನೊಂದಿಗೆ ಸಹಕರಿಸಿದ ಅನುಗಾಲದ ಸಂಘಟನೆಯ ಸಂಗಾತಿಗಳಾದ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮಾಯಣ್ಣ, ಶ್ರೀ ಸಿದ್ಧಯ್ಯ, ಶ್ರೀ ನಾ.ಶ್ರೀಧರ, ಎಂ ಗೌಡಯ್ಯ, ಬಿ.ಜಿ.ರಾಜೇಶ್ ಅವರನ್ನು ನೆನೆಯುವುದು ನನ್ನ ಆದ್ಯ ಕರ್ತವ್ಯವೆಂದೇ ಭಾವಿಸುತ್ತೇನೆ. ಇವರು ನನ್ನ ಎಲ್ಲಾ ಕಾರ್ಯಚಟುವಟಿಕೆಗಳ ಹಿಂದೆ ಸದಾ ಬೆನ್ನೆಲುಬಾಗಿ ನಿಸ್ವಾರ್ಥವಾಗಿ ದುಡಿಯುತ್ತಿರುವುದು ನನಗೆ ಸಂತಸದ ಸಂಗತಿಯಾಗಿದೆ.

ಹಾಗೆಯೇ ಈ ಕೃತಿಗೆ ಸುಂದರವಾದ ಮುಖಪುಟ ಮಾಡಿಕೊಟ್ಟ ಕಲಾವಿದ ಶ್ರೀ ಚಂದ್ರಕಾಂತ್, ಡಿಟಿಪಿ ಮಾಡಿದ ಶ್ರೀ ಚಂದ್ರಶೇಖರ್ ವುಣ್ಣಿಮನಿ ಅವರಿಗೆ, ಅಂದವಾಗಿ ಪುಸ್ತಕವನ್ನು ಮುದ್ರಿಸಿಕೊಟ್ಟ ಶ್ರೀಉಜ್ವಲ ಪ್ರಿಂಟರ್ಸ್‌ನ ಸಿಬ್ಬಂದಿವರ್ಗಕ್ಕೂ, ಕೈಗಾರಿಕಾ ಒಕ್ಕೂಟದ ಸಂಯೋಜಿತಗೊಂಡಿರುವ ಕನ್ನಡ ಸಂಸ್ಥೆಗಳಿಗೆ ಹಾಗೂ ಈ ಕೃತಿ ಹೊರತಲು ಒಪ್ಪಿದ ಒಕ್ಕೂಟದ ಎಲ್ಲಾ ಮಿತ್ರರಿಗೂ ನಾನು ಆಭಾರಿಯಾಗಿದ್ದೇನೆ.

ಎಂ. ತಿಮ್ಮಯ್ಯ
ಅಧ್ಯಕ್ಷರು,
ಕ.ಕೈ ಮತ್ತು ವಾ ಕ. ಸಂಘಗಳ ಒಕ್ಕೂಟ
ಬೆಂಗಳೂರು

ಉದಯವಾಯಿತು ಚೆಲುವ ಕನ್ನಡ ನಾಡು

60ರ ದಶಕದ ಆರಂಭದ ದಿನಗಳು ಬೆಂಗಳೂರಿನಲ್ಲಿ ಕನ್ನಡಕ್ಕೆ ಸೂಕ್ತ ಸ್ಥಾನಮಾನ ದೊರಕಬೇಕೆಂಬ ಆಗ್ರಹದಿಂದ ನಾನಾ ಸಂಘಟನೆಗಳು ತಮ್ಮದೇ ಆದ ರೀತಿಯಲ್ಲಿ ಹೋರಾಟದಲ್ಲಿ ತೊಡಗಿಕೊಂಡಿದ್ದವು.

ಫೆಬ್ರವರಿ 1962ರಲ್ಲಿ ನಡೆದ ಎಲ್ಲಾ ಕನ್ನಡ ಸಂಘಟನೆಗಳ ಸಮಾವೇಶದ ಫಲವಾಗಿ ಆ ಎಲ್ಲಾ ಸಂಘಟನೆಗಳ ಪ್ರಾತಿನಿಧಿಕ ಸಂಸ್ಥೆಯಾಗಿ ಕನ್ನಡ ಸಂಯುಕ್ತ ರಂಗವು ರೂಪುಗೊಂಡು ಹೋರಾಟಕ್ಕೆ ಸ್ಪಷ್ಟ ತಿರುವು ದೊರಕಿತು. ಆ ಸಮಯದಲ್ಲಿ ಸಂಯುಕ್ತರಂಗಕ್ಕೆ ಮುಂಚೂಣಿಯ ನಾಯಕರಾಗಿ ದಕ್ಕಿದ್ದು ಮ.ರಾಮಮೂರ್ತಿ. ತಮ್ಮ ದಕ್ಷ ನಾಯಕತ್ವದ ಗುಣ, ನಿಸ್ವಾರ್ಥ ಸೇವೆ, ಛಲ, ಕಿಚ್ಚು, ಕೆಚ್ಚುಗಳಿಂದ ಯುವ ಹೋರಾಟಗಾರರ ಧೀಮಂತ ನಾಯಕರಾಗಿ ಮೂಡಿ ಬಂದವರು ಮ. ರಾಮಮೂರ್ತಿ.

ಸಮ್ಮೇಳನದೊಂದಿಗೆ ಕನ್ನಡದ ಹೋರಾಟಕ್ಕೆ ಅಂದಿನ ಸಾಹಿತ್ಯ ಗಣ್ಯರಾಗಿದ್ದ ಕಾದಂಬರಿಸಾರ್ವಭೌಮರೆಂದು ಖ್ಯಾತರಾಗಿದ್ದ ಅ. ನ. ಕೃಷ್ಣರಾಯರು. ಪತ್ತೇದಾರಿ ಕಾದಂಬರಿಗಳಿಂದ ಚಿರಪರಿಚಿತರಾಗಿದ್ದ ಎಂ. ರಾಮಮೂರ್ತಿಯವರೂ ಹಾಗೂ ಇನ್ನಿತರ ಸಾಹಿತಿಗಳು. ಪ್ರವೇಶಿಸಿ ಕನ್ನಡಿಗರಲ್ಲಿ ಕನ್ನಡತನದ ಪ್ರಜ್ಞೆಯನ್ನು ಮೂಡಿಸುವ ಮಹಾಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

1.11.1956 ರಂದು ಕನ್ನಡಿಗರ ಬಹುದಿನಗಳ ಕನಸಾಗಿದ್ದ ಕರ್ನಾಟಕ ರಾಜ್ಯ ಉದಯವಾಯಿತು. ಕನ್ನಡಿಗರ ಸಮಸ್ಯೆ ಪರಿಹಾರವಾದೀತು. ರಾಜ್ಯದಲ್ಲಿ ಕನ್ನಡದ ಸ್ಥಾನಮಾನ ಹೆಚ್ಚೀತು. ಕನ್ನಡಿಗರು ಉದ್ಧಾರವಾದಾರು ಎಂದು ನಂಬಿಕೆ ಹೊಂದಿದ್ದ ಕನ್ನಡಿಗರಿಗೆ ಭ್ರಮನಿರಸನವಾಗಲು ಬಹುಕಾಲ ಬೇಕಾಗಲಿಲ್ಲ. ವಿಶಾಲಮೈಸೂರೆಂಬ ಹೆಸರಿನಲ್ಲಿ ಕರ್ನಾಟಕವೆಂದಾದರೂ ರಾಜ್ಯದ ಭಾಷೆ ಕನ್ನಡವಾಗಲಿಲ್ಲ. ಕನ್ನಡಿಗರಿಗೆ ಉದ್ಯೋಗ ದಕ್ಕಲಿಲ್ಲ. ಕನ್ನಡಿಗರಲ್ಲಿ ಅಸಮಾನತೆಯ ಅಸಮಾಧಾನ ಹೆಚ್ಚಾಯಿತು.

ಮೊದಲಿನಿಂದಲೂ ಕನ್ನಡಿಗರು ಮೃದುಸ್ವಭಾವದವರು. ಕಾನಾಯಿತು ತಮ್ಮದಾಯಿತು ಎನ್ನುವ ಮನೋಭಾವದವರು. ಉದಾರ

ಹೃದಯಿಗಳು. ಪರಮತಸಹಿಷ್ಣುಗಳು, ಪರಭಾಷಾಸಹಿಷ್ಣುಗಳು, ಹೀಗಾಗಿ ಕರ್ನಾಟಕಕ್ಕೆ ಭಾರತದ ಎಲ್ಲ ಭಾಷೆಯ ಜನರೂ ಎಲ್ಲ ಪ್ರದೇಶಗಳ ಜನರೂ ಬಂದರು. ಇಲ್ಲಿ ನೆಲೆ ಊರಿದರು. ಇಲ್ಲಿಯ ನೆಲವನ್ನು ಕೊಂಡರು. ಆದರೆ ಇಲ್ಲಿಯ ಜನರೊಂದಿಗೆ ಬೆರೆಯಲಿಲ್ಲ. ಇಲ್ಲಿಯ ಭಾಷೆ ಕಲಿಯಲಿಲ್ಲ. ಅದಕ್ಕೆ ತಕ್ಕ ಹಾಗೆ ನಮ್ಮವರೂ ಅವರಿಗೆ ಹೊಂದಿಕೊಂಡು ತಮ್ಮತನವನ್ನೇ ಮರೆತರು ಹೀಗಾಗಿ ಬಂದವರು ಪ್ರಬಲವಾದರು. ಇಲ್ಲಿಯವರು ಸೊರಗಿದರು.

ಅದರಲ್ಲಿಯೂ ರಾಜಧಾನಿ ಬೆಂಗಳೂರಿನಲ್ಲಿ ಕನ್ನಡಿಗ ನಿರ್ಲಕ್ಷ್ಯಕ್ಕೊಳಗಾದ. ಕೇಂದ್ರಸರ್ಕಾರದ ಹಲವಾರು ಕೈಗಾರಿಕೆಗಳು ಬೆಂಗಳೂರಲ್ಲಿ ಸ್ಥಾಪಿತವಾದವು. ಅದಕ್ಕಾಗಿ ನೆಲ, ಜಲ, ವಿದ್ಯುತ್ ಮುಂತಾದ ಸೌಲಭ್ಯಗಳನ್ನು ರಾಜ್ಯದಿಂದ ಒದಗಿಸಿದರೂ ಉದ್ಯೋಗ ಮಾತ್ರ ಕನ್ನಡಿಗರಿಗೆ ದಕ್ಕಲಿಲ್ಲ. ಕೇಂದ್ರಸರ್ಕಾರದ ಕಛೇರಿಗಳಲ್ಲಿಯೂ ಪರಭಾಷೆಯವರಿಗೆ ಅಧಿಕ ಸಂಖ್ಯೆಯಲ್ಲಿ ಉದ್ಯೋಗ ದೊರಕಿ ಕನ್ನಡಿಗರ ಪಾಲಿಗೆ ಅದು ಸಾಕಷ್ಟು ಪ್ರಮಾಣದಲ್ಲಿ ದಕ್ಕಲಿಲ್ಲ.


ಇನ್ನು ಕನ್ನಡ ಚಿತ್ರರಂಗದ ಪರಿಸ್ಥಿತಿಯಾದರೂ ಮತ್ತಷ್ಟು ಸಂಕಷ್ಟ ಪರಿಸ್ಥಿತಿಯಲ್ಲಿತ್ತು. ಪರಭಾಷಾ ಚಿತ್ರಗಳು ಹೆಚ್ಚು ಹೆಚ್ಚು ಪ್ರದರ್ಶಿತವಾಗುತ್ತಿದ್ದರೆ ಕನ್ನಡಚಿತ್ರಗಳಿಗೆ ಚಿತ್ರಮಂದಿರಗಳು ಸಿಗುವುದೇ ದುರ್ಲಭವಾಗುತ್ತಿತ್ತು. ಪರಭಾಷಾ ಸಂಗೀತಗಾರರಿಗೆ, ಕಲಾವಿದರಿಗೆ ಅಗ್ರಮನ್ನಣೆ, ಸನ್ಮಾನ. ಕನ್ನಡ ಸಂಗೀತಗಾರರು, ಕಲಾವಿದರಿಗೆ ನಂತರದ ಸ್ಥಾನ. ವಾಣಿಜ್ಯ ಸಂಸ್ಥೆಗಳ ನಾಮಫಲಕಗಳಲ್ಲಿ ಪರಭಾಷೆಗಳೇ ಪ್ರಧಾನವಾಗಿದ್ದರೆ, ಕನ್ನಡಕ್ಕೆ ಎಲ್ಲೋ ಒಂದು ಮೂಲೆಯಲ್ಲಿ ಕಂಡೂ ಕಾಣದಂತಹ ಜಾಗ ಅಥವಾ ಅದೂ ಇಲ್ಲವೇ ಇಲ್ಲ.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ತಮ್ಮ ತವರು ನೆಲದಲ್ಲಿಯೇ ಕನ್ನಡ ಕನ್ನಡಿಗರು ಉಪೇಕ್ಷೆಗೆ ಒಳಪಟ್ಟಾಗ ಅಸಮಾಧಾನದ ಅಲೆ ಸಹಜವಾಗಿಯೇ ಏರತೊಡಗಿತು. ಸಣ್ಣದಾಗಿ ಆರಂಭವಾದ ಕಿಡಿ ಮೆಲ್ಲನೆ ಹಬ್ಬತೊಡಗಿ ಕಾಳ್ಗಿಚ್ಚಾಗುವ ಸಮಯ ಬಂದೇ ಬಂದಿತು.

ಕನ್ನಡಿಗರಲ್ಲಿ ಜನ ಜಾಗೃತಿ ಮೂಡಿಸಲು ಅನೇಕ ಸಂಘಸಂಸ್ಥೆಗಳು ಸ್ಥಾಪನೆಯಾಗಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾದವು. ಇವರೆಲ್ಲರ ಪ್ರಯತ್ನದಿಂದ ದಿನಾಂಕ 4.2.1962 ರಂದು ಬೆಂಗಳೂರಿನಲ್ಲಿ ಕನ್ನಡ ಯುವ ಜನ ಸಭಾದ ಅಧಿವೇಶನವನ್ನು ನಡೆಸಲಾಯಿತು. ನಾಡಿನ ಎಲ್ಲ ಕಡೆಯಿಂದಲೂ ಪ್ರತಿನಿಧಿಗಳು ಆಗಮಿಸಿದ್ದು ಬೆಂಗಳೂರಿನ ಕೆಂಪೇಗೌಡ ರಸ್ತೆಯ ಮೈಸೂರು ವಾಣಿಜ್ಯ ಭವನದಲ್ಲಿ ತುಂಬಾ ಉತ್ಸಾಹ ಸಂಭ್ರಮ ಸಡಗರಗಳಿಂದ ಈ ಅಧಿವೇಶನ ನಡೆಯಿತು. ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದವರು ಸುಪ್ರಸಿದ್ಧ ಸಾಹಿತಿಗಳಾಗಿದ್ದ ಶ್ರೀ ಶ್ರೀರಂಗರು. ಉದ್ಘಾಟಿಸಿದವರು ರಾಜ್ಯದ ಮಾಜಿಮುಖ್ಯಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯನವರು.

ಕನ್ನಡ ಕನ್ನಡಿಗರ ಹಿತರಕ್ಷಣೆಗಾಗಿ ಏರ್ಪಟ್ಟ ಈ ಸಮ್ಮೇಳನದಲ್ಲಿ ನಾಡಿನ ಸಂಗೀತಗಾರರು, ಕಲಾವಿದರು, ಅವಕಾಶವಂಚಿತರಾಗುವುದನ್ನು ತಪ್ಪಿಸಲು, ಕನ್ನಡವು ಆಡಳಿತ ಭಾಷೆ ಆಗುವುದರ ಬಗ್ಗೆ, ಗೋವಾ. ಕರ್ನಾಟಕದೊಂದಿಗೆ ವಿಲೀನವಾಗುವ ಬಗ್ಗೆ, ಬೇರೆ ರಾಜ್ಯದಲ್ಲಿರುವ ಕನ್ನಡ ಪ್ರದೇಶಗಳು ರಾಜ್ಯದೊಂದಿಗೆ ಸೇರುವ ಬಗ್ಗೆ, ಕನ್ನಡ ಚಿತ್ರರಂಗದ ಏಳಿಗೆ ಡಬ್ಬಿಂಗ್ ವಿರೋಧಿ ನೀತಿ, ರಾಜ್ಯಕ್ಕೆ ಕರ್ನಾಟಕ ಎಂದು ಪುನರ್ನಾಮ ಕರಣವಾಗುವ ಬಗ್ಗೆ – ಹೀಗೆ ಹಲವಾರು ಮಹತ್ವದ ನಿರ್ಣಯಗಳನ್ನು ಈ ಅಧಿವೇಶನದಲ್ಲಿ ತೆಗೆದುಕೊಳ್ಳಲಾಯಿತು.

ಅಂದಿನ ಪರಿಸ್ಥಿತಿಯಲ್ಲಿ ಈ ಸಮ್ಮೇಳನ ಕನ್ನಡಿಗರ ಮನಸ್ಸಿನಲ್ಲಿ ಸುಪ್ತವಾಗಿದ್ದ ಕನ್ನಡದ ಅಭಿಮಾನವನ್ನು ಹೊರಹೊಮ್ಮಿಸುವಲ್ಲಿ ಸಫಲವಾಯಿತೆಂದು ಹೇಳಬಹುದು. ಈ ಸಮ್ಮೇಳನದ ಫಲಶ್ರುತಿಯಾಗಿ ಹೊರಹೊಮ್ಮಿದವರೇ ಮುಂದೆ ವೀರಸೇನಾನಿ ಎನಿಸಿಕೊಂಡು ಕನ್ನಡದ ಹೋರಾಟಗಾರರಿಗೆ ಗಟ್ಟಿ ನಾಯಕತ್ವವನ್ನು ದೊರಕಿಸಿಕೊಟ್ಟ ಮ. ರಾಮಮೂರ್ತಿಯವರು.



ರಾಮಮೂರ್ತಿಯವರ ಮನೆತನ

ವೀರಕೇಸರಿ ಸೀತಾರಾಮ ಶಾಸ್ತ್ರಿಗಳು

ಮದ್ದೂರು ಸೀತಾರಾಮ ಶಾಸ್ತ್ರಿಗಳು ಮದ್ದೂರಿನ ಪುರೋಹಿತ ಮನೆತನದವರು. ಅವರು ಹುಟ್ಟಿದ್ದು 1893ನೇ ಜನವರಿ 7 ರಂದು ನಂಜನಗೂಡಿನಲ್ಲಿ.

ಅವರ ಮೊದಲಿನ ಹೆಸರು ಸೀತಾರಾಮ ಜೋಯಿಸರು ಎಂದು ಆಗಿದ್ದರೂ ಕಾಲಾನಂತರದಲ್ಲಿ ಅವರ ಹೆಸರಿನಲ್ಲಿದ್ದ ಜೋಯಿಸ್ ಮರೆಯಾಗಿ ಶಾಸ್ತ್ರಿ ಎಂಬುದು ಸೇರಿಕೊಂಡಿತು. ಇದಕ್ಕೆ ಕಾರಣವೆಂದರೆ ಅವರ ಇಬ್ಬರ ಸೋದರ ಮಾವಂದಿರು (ಅವರ ತಾಯಿಯ ತಮ್ಮಂದಿರು) ಯಜ್ಞೇಶ್ವರ ಶಾಸ್ತ್ರಿ ಮತ್ತು ಕೃಷ್ಣಶಾಸ್ತ್ರಿಗಳು. ಆಗಿನ ಕಾಲದಲ್ಲಿ ಸಮಾಜದಲ್ಲಿ ಅತ್ಯಂತ ಗೌರವಾನ್ವಿತ ವ್ಯಕ್ತಿಗಳಾಗಿದ್ದರು. ಶ್ರೀಕಂಠಶಾಸ್ತ್ರಿಗಳು ಶ್ರೀ ಶೃಂಗೇರಿ ಮಠದ ಸರ್ವಾಧಿಕಾರಿಯಾಗಿದ್ದರು. ಕೃಷ್ಣಶಾಸ್ತ್ರಿಗಳು ಮೈಸೂರು ಅರಮನೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಳ್ವಿಕೆಯಲ್ಲಿ ಧರ್ಮಾಧಿಕಾರಿಗಳಾಗಿದ್ದರು. ಹೀಗೆ ಗುರುಮನೆ, ಅರಮನೆಗಳಲ್ಲಿ ಮಾನ್ಯರಾಗಿದ್ದ ಸೋದರಮಾವಂದಿರೇ ಸೀತಾರಾಮ ಶಾಸ್ತ್ರಿಗಳಿಗೆ ಆದರ್ಶ ಪುರುಷರಾಗಿದ್ದರು. ಅವರಂತೆಯೇ ವಿದ್ವಾಂಸರೂ ಪ್ರಭಾವಿಗಳೂ ಆಗ ಬೇಕೆಂದು ಅವರ ಹಂಬಲ. ಹಾಗಾಗಿ ಜೋಯಿಸರ ಬದಲಿಗೆ ಶಾಸ್ತ್ರಿ ಎಂದು ತಮ್ಮ ಹೆಸರಿಗೆ ಸೇರಿಸಿಕೊಂಡರು.

ಶೃಂಗೇರಿಯಲ್ಲಿ ಸೋದರ ಮಾವನ ಮನೆಯಲ್ಲಿ ಬೆಳೆದ ಶಾಸ್ತ್ರಿಗಳ ವಿದ್ಯಾಭ್ಯಾಸ ನಡೆದದ್ದು ಶೃಂಗೇರಿಯ ವಿದ್ಯಾಪೀಠದಲ್ಲಿ. ಅತ್ಯಂತ ಚುರುಕು ವಿದ್ಯಾರ್ಥಿ ಎನಿಸಿಕೊಂಡಿದ್ದರು. ಶೃಂಗೇರಿ ಶಾರದ ಪೀಠದ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು ತಮ್ಮ ಪೂರ್ವಾಶ್ರಮದಲ್ಲಿ ಶಾಸ್ತ್ರಿಗಳ ಸಹಪಾಠಿಗಳಾಗಿದ್ದರು.

ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದ ಸೀತಾರಾಮ ಶಾಸ್ತ್ರಿಗಳು 19ನೇ ವಯಸ್ಸಿಗೆ ನಾಟಕಾಂತ ಸಾಹಿತ್ಯ ಮತ್ತು ತರ್ಕ ಶಾಸ್ತ್ರದಲ್ಲಿ ವಿದ್ವತ್

ಶ್ರೇಣಿಯನ್ನುಗಳಿಸಿದ್ದರು.

ಶ್ರೀ ಶೃಂಗೇರಿ ಮಠದ ವಾತಾವರಣ, ಭಾರತೀಯ ಶಾಸ್ತ್ರಗಳಲ್ಲಿನ ಅಗ್ರಗಣ್ಯ ವಿದ್ವಾಂಸರುಗಳ ಸಾಮೀಪ್ಯ ಮತ್ತು ಶೃಂಗೇರಿಯ ಶ್ರೀ ಗುರುಗಳ ಅನುಗ್ರಹ, ಸೋದರ ಮಾವಂದಿರುಗಳ ವಾತ್ಸಲ್ಯ ಪೂರಕದಲ್ಲಿ ಶಾಸ್ತ್ರಿಗಳು ವಿದ್ವಾಂಸರೆನಿಸಿಕೊಂಡಿದ್ದು ಅತಿಶಯೋಕ್ತಿಯೇನಲ್ಲ. ಆದರೆ ಖಡ್ಗದಂತೆ ಹರಿತವಾದ ಬುದ್ಧಿಶಕ್ತಿ, ಅವರ ತಾರ್ಕಿಕ ವಾದಸರಣಿ, ಸಂಸ್ಕೃತ ಭಾಷೆಯ ಮೇಲಿನ ಪ್ರಭುತ್ವ ಇವು ಅತಿಶಯವಾದುದು.

ಶಾಸ್ತ್ರಿಗಳ ಮೇಲೆ ತಿಲಕರ ಪ್ರಭಾವ

ಸೀತಾರಾಮ ಶಾಸ್ತ್ರಿಗಳ ಜೀವನದಲ್ಲಿ ರಾಜಕೀಯ ಪ್ರಭಾವ ಉತ್ತಮವಾಗಿ ಬೀರಿತು. ಅವರು ಶೃಂಗೇರಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಭಾರತ ಸ್ವಾತ್ಯಂತ್ರ ಹೋರಾಟದಲ್ಲಿ ಅಗ್ರಗಣ್ಯನಾಯಕರಾಗಿದ್ದ ಬಾಲಗಂಗಾಧರ ತಿಲಕರು ಶೃಂಗೇರಿಗೆ ಬಂದಿದ್ದರು. ಅವರು ಅಲ್ಲಿಗೆ ಬರುವಾಗ ಒಂದು ಮಗುವನ್ನು ಕರೆದುಕೊಂಡು ಬಂದಿದ್ದರು.

ಆ ಮಗು ಯಾವುದು ಗೊತ್ತೇ? ಝಾನ್ಸಿ ರಾಣಿ ಲಕ್ಷ್ಮೀಬಾಯಿಯು ಬ್ರಿಟಿಷರನ್ನು ಎದುರಿಸಿ ಯುದ್ಧ ಮಾಡುತ್ತಿದ್ದ ಸಂದರ್ಭದಲ್ಲಿ ಮಗುವೊಂದನ್ನು ತನ್ನ ಬೆನ್ನಿಗೆ ಕಟ್ಟಿಕೊಂಡು ಯುದ್ಧ ಮಾಡುತ್ತಿದ್ದ ಆ ಮಗುವನ್ನೇ ತಿಲಕರು ಶೃಂಗೇರಿಗೆ ಗುರುಗಳ ದರ್ಶನಕ್ಕೆ ಬಂದಾಗ ಕರೆದುಕೊಂಡು ಬಂದದ್ದು ಆ ದತ್ತು ಮಗುವೇ ದಾಮೋದರ.

ಶೃಂಗೇರಿಯಲ್ಲಿಯೇ ಇದ್ದ ಶಾಸ್ತ್ರಿಗಳು ಆ ಸಂದರ್ಭದಲ್ಲಿ ತಿಲಕರ ಪ್ರಭಾವಕ್ಕೆ ಒಳಗಾದರು. ಅವರ ಮನಸ್ಸು ದೇಶಸೇವೆಗೆ ತಮ್ಮನ್ನು ತೊಡಗಿಸಿಕೊಳ್ಳಬೇಕೆಂಬ ಪ್ರೇರಣೆಗೆ ಒಳಗಾದರು.

ಕಾಲಾನಂತರದಲ್ಲಿ ಬೆಂಗಳೂರು ಶಂಕರಮಠದ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತ ಇವರು ಶಂಕರ ಮಠಕ್ಕೆ ಬಂದರು. ಶಂಕರಮಠದ ಶ್ರೀಗೀರ್ವಾಣ ಭಾರತಿ ಮಹಾ ವಿದ್ಯಾಲಯವು ಆಗಿನ ಕಾಲದ ವಿದ್ಯಾಕೇಂದ್ರಗಳಲ್ಲಿ ಬಹಳ

ಹೆಸರುವಾಸಿಯಾಗಿತ್ತು.

ವಿಶ್ವಕವಿ ರವೀಂದ್ರನಾಥ ಠಾಗೂರ್ ರವರು ಬೆಂಗಳೂರಿಗೆ ಭೇಟಿ ಇತ್ತಾಗ ಗೀರ್ವಾಣಶಾಲೆಗೆ ಭೇಟಿ ನೀಡಿದ್ದರು. ಅಲ್ಲಿ ಅವರು ಗೀರ್ವಾಣ ಶಾಲೆಯ ವಿದ್ವಾಂಸರು ಮತ್ತು ಶಿಷ್ಯವೃಂದದವರೊಂದಿಗೆ ಸುಮಾರು ಮೂರು ಘಂಟೆಗಳ ಕಾಲ ಕಳೆದರು. ಆಗ ಅವರು ಹೇಳಿದ ಮಾತು, "ನನ್ನ ಕಲ್ಪನೆಯ ಗುರುಕುಲವನ್ನು ಭಾರತವನ್ನೆಲ್ಲಾ ಸುತ್ತಿ ಬಂದ ನಾನು ಬೆಂಗಳೂರಿನ ಗೀರ್ವಾಣ ಭಾರತಿ ವಿದ್ಯಾಲಯದಲ್ಲಿ ಕಂಡೆ" ಎಂದು ಬರೆದರು.

ಕಾಲಾನಂತರದಲ್ಲಿ ರಾಜಕೀಯ ಹಾಗೂ ಪತ್ರಿಕಾರಂಗದ ಕಡೆ ಆಕರ್ಷಿತರಾದ ಶಾಸ್ತ್ರಿಗಳು ಆ ಕ್ಷೇತ್ರದಲ್ಲಿ ಪ್ರವೇಶಿಸಿದರು. ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ 2.5.1920ರಲ್ಲಿ ದೇಶಾಭಿಮಾನದ "ವೀರಕೇಸರಿ" ಪತ್ರಿಕೆಯನ್ನು ಪ್ರಾರಂಭಿಸಿದರು. ಆ ಪತ್ರಿಕೆಯ ಪ್ರಸಾರವಿದ್ದುದು ಬಹುತೇಕವಾಗಿ ಹಿಂದಿನ ಹಳೆ ಮೈಸೂರು ಪ್ರಾಂತ್ಯದಲ್ಲಿ. ಪತ್ರಿಕೆ ಪ್ರಾರಂಭವಾದ ನಂತರ ಅವರ ಹೆಸರಿನ ಜೊತೆಗೆ ಪತ್ರಿಕೆಯ ಹೆಸರೂ ಸೇರಿ "ವೀರಕೇಸರಿ ಸೀತಾರಾಮಶಾಸ್ತ್ರಿ"ಗಳೆಂದು ಪ್ರಸಿದ್ಧಿಯಾದರು. ಸರ್ಕಾರ ಪತ್ರಿಕೆಯನ್ನು ಮುಟ್ಟುಗೋಲು ಹಾಕಿಕೊಂಡು ವೀರಕೇಸರಿಯವರನ್ನು ಜೈಲಿಗೆ ಹಾಕಿದಾಗ ಪತ್ರಿಕೆ ಕೆಲಕಾಲ ನಿಂತು 1933ರಲ್ಲಿ ಮತ್ತೆ ಮದ್ರಾಸಿನಿಂದ ಪ್ರಾರಂಭವಾಯಿತು.

ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಸ್ಥಾಪನೆಗೆ ಕಾರಣರಾದ ಹಲವಾರು ಕಾರ್ಯಕರ್ತರಲ್ಲಿ ಸೀತಾರಾಮಶಾಸ್ತ್ರಿಗಳು ಒಬ್ಬರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಅವರು ಜೈಲುವಾಸವನ್ನು ಅನುಭವಿಸಿದ್ದರು. ಶಾಸ್ತ್ರಿಗಳು ಕೇವಲ ಸ್ವಾತಂತ್ರ್ಯ ಹೋರಾಟಗಾರನೋ, ಪತ್ರಿಕೋದ್ಯಮಿಯೋ ಮಾತ್ರವೇ ಅಲ್ಲದೇ ಸಾಹಿತ್ಯ ರಚನೆಯಲ್ಲಿಯೂ ಸಹ ಪ್ರತಿಭಾ ಸಾಮರ್ಥ್ಯವನ್ನು ಪಡೆದಿದ್ದರು. ಹಾಗೂ ಆ ಕ್ಷೇತ್ರದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದ್ದರು. ಅವರ ಪ್ರಸಿದ್ಧ ಐತಿಹಾಸಿಕ ಕಾದಂಬರಿ ದೌಲತ್. ಈ ಕಾದಂಬರಿ ಅವರಿಗೆ ಅಪಾರ ಹೆಸರನ್ನು ತಂದುಕೊಟ್ಟಿತು.

ಅಲ್ಲದೆ ಆ ಕಾಲದಲ್ಲಿಯೇ ಅದು ಆರೇಳು ಮುದ್ರಣಗಳನ್ನು ಕಂಡಿತ್ತೆಂದರೆ ಅದು ಎಷ್ಟು ಜನಪ್ರಿಯವಾಗಿತ್ತೆಂದು ಊಹಿಸಬಹುದು. ಅವರ ಇತರೇ ಜನಪ್ರಿಯ ಸಾಹಿತ್ಯ ಕೃತಿಗಳೆಂದರೆ ಬಿದನೂರು ರಾಣಿ, ಛತ್ರಪತಿ ಶಿವಾಜಿ, ಆದಿಲ್ ಷಾಯಿಯ ಕಡೆಯ ದಿನಗಳು ಮುಂತಾದವು.

ಮೈಸೂರಿನ ಜವಾಬ್ದಾರಿ ಸರ್ಕಾರದ ಕಡೆಯ ಹೋರಾಟ ಕಾಲದಲ್ಲಿ ಅಂದರೆ 1947ರಲ್ಲಿ ಬೆಂಗಳೂರಿನಿಂದ ಅಚ್ಚಿನಮೊಳೆಗಳನ್ನು, ಕನ್ನಡ ಟೈಪುಗಳನ್ನು ಜೊತೆಗೆ ಮೊಳೆಜೋಡಿಸುವವರನ್ನು ಕರೆದುಕೊಂಡು ಮದ್ರಾಸ್‌ಗೆ ಹೋಗಿ ಅಲ್ಲಿಂದ "ವೀರಕೇಸರಿ" ಪತ್ರಿಕೆಯನ್ನು ಮುದ್ರಿಸುವ ಸಾಹಸಕ್ಕೆ ಕೈ ಹಾಕಿದರು. 1950ರವರೆಗೂ ಪತ್ರಿಕೆ ನಡೆಸಿದರು. ಕಲ್ಕಿ, ಧೂಮಕೇತು ಎಂಬ ಗುಪ್ತ ನಾಮದಲ್ಲಿ ಬರೆಯುತ್ತಿದ್ದ ಶಾಸ್ತ್ರಿಗಳು ಅಂಜದೆ ಅಳುಕದೆ ತಮ್ಮ ಬರಹದಲ್ಲಿ ಛಾಪಿಸುತ್ತಿದ್ದರು. ಹೀಗೆ 22 ವರ್ಷಗಳ ಕಾಲ ಛಲದಿಂದ ಪತ್ರಿಕೆಯ ಮೂಲಕ ಕರ್ನಾಟಕದ ಕನ್ನಡ ಹೋರಾಟ ಮಾಡಿದರು. ಸರ್.ಎಂ.ವಿಶ್ವೇಶ್ವರಯ್ಯನವರನ್ನು ತಮ್ಮ ವಾದದಲ್ಲಿ ಮಣಿಸಿದ್ದರು.

ತಮ್ಮ ಕಡೆಯ ಕಾಲದಲ್ಲಿ ಕನ್ನಡ ಸಂಯುಕ್ತ ರಂಗದ ಕನ್ನಡ ಪರ ಚಟುವಟಿಕೆಗಳಲ್ಲಿಯೂ ಸಹ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿದ್ದರು. ಸಂಯುಕ್ತರಂಗವು ಏರ್ಪಡಿಸುತ್ತಿದ್ದ ಬಹಿರಂಗ ಸಭೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿ ಭಾಷಣವನ್ನು ನೀಡುತ್ತಿದ್ದರು.

ಮೇಧಾವಿ ಸಾಹಿತಿಗಳೂ, ಪತ್ರಕರ್ತರೂ ಸ್ವಾತಂತ್ರ್ಯ ಹೋರಾಟಗಾರರೂ ಅಪ್ರತಿಮ ಕನ್ನಡ ಪ್ರೇಮಿಯೂ ಆದ ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿಗಳು 1971ರ ಜನವರಿ ಏಳನೆಯ ತಾರೀಕಿನಂದು ತಮ್ಮ 79ನೆಯ ವಯಸ್ಸಿನಲ್ಲಿ ನಿಧನರಾದರು. ಇಂತಹ ಮೇಧಾವಿಗಳ ಹಿರಿಯ ಪುತ್ರರಾಗಿ ಜನಿಸಿದವರೇ ಮ. ರಾಮಮೂರ್ತಿಯವರು.

ಮ. ರಾಮಮೂರ್ತಿ ಜನಿಸಿದ್ದು ಮಾರ್ಚ್ 11, 1918ರಲ್ಲಿ. ವೀರಕೇಸರಿ ಸೀತಾರಾಮ ಶಾಸ್ತ್ರಿ, ಸುಬ್ಬಮ್ಮ ದಂಪತಿಗಳವರ ಮಗನಾಗಿ ಜನಿಸಿದ ರಾಮಮೂರ್ತಿಗೆ ತಂದೆಯವರಿಂದಲೇ ಸಾಹಿತ್ಯ ಹಾಗೂ ಪತ್ರಿಕಾ

ವೃತ್ತಿಯ ಗೀಳು ಅಂಟಿಕೊಂಡಿತ್ತೆನ್ನಬಹುದು.

ಸೀತಾರಾಮ ಶಾಸ್ತ್ರಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲು ಸೇರಿದ್ದ ಸಂದರ್ಭದಲ್ಲಿ ಬಾಲಕ ರಾಮಮೂರ್ತಿ ಬೆಂಗಳೂರಿನ ಆರ್ಯವಿದ್ಯಾ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ. ಆಗ ಅವರಿಗೆ ಅಲ್ಲಿ ವಿದ್ಯಾ ಗುರುಗಳಾಗಿದ್ದವರು ದೇವುಡು ನರಸಿಂಹಶಾಸ್ತ್ರಿಗಳು. ದೇವುಡುಅವರು ಕನ್ನಡದ ಪ್ರಮುಖ ಕಾದಂಬರಿಕಾರರಲ್ಲಿ ಒಬ್ಬರೆಂದು ಹೆಸರುವಾಸಿ ಯಾಗಿದ್ದರು. ಅವರನ್ನು ಕನ್ನಡ ನವೋದಯದ ಅಗ್ರಮಾನ್ಯ ಕಾದಂಬರಿಕಾರರೆಂದು ಹೇಳಬಹುದು. ಅವರ ಪ್ರಸಿದ್ಧ ಹಾಗೂ ಮಹತ್ವದ ಕೃತಿ ಮಯೂರ. ಕರ್ನಾಟಕದಲ್ಲಿ ಆಳಿದ ಮೊದಲನೆಯ ರಾಜವಂಶದ ಮೂಲ ಪುರುಷ ಮಯೂರವರ್ಮ ಇದರ ನಾಯಕ. ಈ ಕಾದಂಬರಿಯನ್ನು ಆಧಾರವಾಗಿಟ್ಟುಕೊಂಡು ತಯಾರಿಸಿದ ಡಾ. ರಾಜಕುಮಾರ್ ನಾಯಕ ನಟನಾಗಿ ಅಭಿನಯಿಸಿದ್ದ ಮಯೂರ ಚಲನಚಿತ್ರ ಯಶಸ್ವಿಯಾಗಿ ಚಲನಚಿತ್ರ ಪ್ರೇಮಿಗಳ ಮೆಚ್ಚುಗೆಯನ್ನು ಪಡೆದಿದೆ. ಇಂತಹ ಸಾಹಿತ್ಯಶ್ರೇಷ್ಠರ ಪ್ರಭಾವ ಬಾಲಕ ರಾಮಮೂರ್ತಿಯಲ್ಲಿ ಸಹಜವಾಗಿಯೇ ಪರಿಣಾಮ ಬೀರಿತೆನ್ನಬಹುದು.

ಬಾಲಕನಾಗಿದ್ದಾಗಲೇ ರಾಮಮೂರ್ತಿಯವರಿಗೆ ಸಾಹಿತ್ಯದ ಅಭಿರುಚಿ ಬೇರೂರಿತು. ತಂದೆಯುವರ ಸಾಹಿತ್ಯಾಭಿರುಚಿಗಳ ಮಾರ್ಗದರ್ಶನ ಇವರಲ್ಲಿ ಮೈಗೂಡಿತ್ತು. ಇವರಿಗೆ ಕನ್ನಡದ ದೀಕ್ಷೆ ಕೊಟ್ಟಿದ್ದು ನಂಜನಗೂಡಿನ ಕನ್ನಡಾಭಿಮಾನಿಗಳಾಗಿದ್ದ ಸುಬ್ರಮಣ್ಯ ಅಯ್ಯರ್‌ರವರು.

ಬಾಲಕ ರಾಮಮೂರ್ತಿಗೆ ಕರ್ನಾಟಕದ ಗತವೈಭವ, ಕನ್ನಡದ ಸಿರಿ ಸಂಪತ್ತಿನ ಸ್ಥೂಲದರ್ಶನವನ್ನು ಅಯ್ಯರ್‌ರವರು ಮೂಡಿಸಿದ್ದರು. ಇವೆಲ್ಲದರ ಪ್ರಭಾವ ರಾಮಮೂರ್ತಿಯವರಲ್ಲಿ ಅಚ್ಚೊತ್ತಿದಂತೆ ಮೂಡಿತ್ತು. ಹಾಗಾಗಿ ಬಾಲಕನಾಗಿದ್ದಾಗಲೇ ಅವರು ಕನ್ನಡದಲ್ಲಿ ಕಥೆ ಬರೆಯಲಾರಂಭಿಸಿದರು. ಅವರು ಬರೆದ ಮೊದಲ ಕಥೆ ಗುರುದಕ್ಷಿಣೆ. ಅದು ಪ್ರಕಟವಾಗಿದ್ದು ಅಂದು ಪ್ರಕಟವಾಗುತ್ತಿದ್ದ ಮಕ್ಕಳ ಪುಸ್ತಕದಲ್ಲಿ. ಈ ಕಥೆ ಅ. ನ. ಸುಬ್ಬರಾಯರ ಗಮನಕ್ಕೆ ಬಂದು ಅವರು ಆ ಕಥೆಯನ್ನು

ಬಹಳವಾಗಿ ಮೆಚ್ಚಿಕೊಂಡರು. ಅಲ್ಲದೆ ಅವರು ಪ್ರಕಟಿಸುತ್ತಿದ್ದ "ಕಲಾ" ಎಂಬ ಪತ್ರಿಕೆಯಲ್ಲಿ ಮತ್ತೊಮ್ಮೆ ಪ್ರಕಟಿಸಿದರು.

ಹಾಗಾಗಿ ಬಾಲಕ ರಾಮಮೂರ್ತಿ ಬರೆದ ಕಥೆ ಅಂದಿನ ಇಬ್ಬರು ಹಿರಿಯರ ಗಮನ ಸೆಳೆಯಿತು. ಅವರಿಬ್ಬರ ಮೆಚ್ಚುಗೆಯನ್ನು ಪಡೆಯಿತು. ಬಾಲಕನಾಗಿದ್ದಲೇ ರಾಮಮೂರ್ತಿಗಳು ಸಾಹಿತಿ ಎನಿಸಿಕೊಳ್ಳುವ ಯೋಗವು ದಕ್ಕಿತು.

ರಾಮಮೂರ್ತಿಗಳ ಮೇಲೆ ಅವರ ತಂದೆಯ ಪಾಂಡಿತ್ಯ, ದೇಶಾಭಿಮಾನ, ರಾಜಕೀಯ ಹೋರಾಟಗಳು ಅಪಾರವಾದ ಪ್ರಭಾವವನ್ನು ಬೀರಿತ್ತು. ರಾಮಮೂರ್ತಿಯವರಿಗೆ ಬಾಲ್ಯದಲ್ಲಿ ವಿದ್ಯಾಭ್ಯಾಸದಲ್ಲಿ ಅಷ್ಟೊಂದು ಆಸಕ್ತಿ ಇರಲಿಲ್ಲ. ತಂದೆ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದ ಕಾರಣ ಅವರನ್ನು ಜೈಲಿಗೆ ಕಳಿಸಿದ್ದರು. ಅವರನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ರಾಮಮೂರ್ತಿ ಯವರು ತಂದೆಯನ್ನು ಕರೆದುಕೊಂಡು ಬರಲು ಜೈಲಿಗೆ ಹೋಗಿದ್ದರು. ಜೈಲಿನಿಂದ ಹೊರಬಂದ ತಂದೆಗೆ ರಾಮಮೂರ್ತಿ ಮೊದಲಿಗೆ ಹೇಳಿದ್ದು "ಅಪ್ಪಾ, ನಾನು ಇನ್ನು ಮೇಲೆ ಸ್ಕೂಲಿಗೆ ಹೋಗುವುದಿಲ್ಲ. ನನ್ನ ಕೈಲಿ ಆ ಪಾಠಗಳನ್ನು ಓದುವುದಕ್ಕಾಗುವುದಿಲ್ಲ".

ಮಗನಿಗೆ ಶಾಲೆಯ ವಿದ್ಯಾಭ್ಯಾಸದಲ್ಲಿ ಆಸಕ್ತಿಯಿಲ್ಲವೆಂದು ತಿಳಿದ ಶಾಸ್ತ್ರಿಗಳು ಅವನಿಗೆ ಶಾಲೆಯ ಬಲವಂತ ಮಾಘಸ್ನಾನ ಮಾಡಿಸಿದರೆ ಯಾವ ಪ್ರಯೋಜನವೂ ಇಲ್ಲ ಎಂದು ತಿಳಿದು "ನಿನ್ನ ಇಷ್ಟ ಬಂದ ಹಾಗೆ ಮಾಡು" ಎಂದು ಹೇಳಿಬಿಟ್ಟರು.

ಶಾಲೆಯನ್ನು ಬಿಟ್ಟ ರಾಮಮೂರ್ತಿಗೆ ಸಾಂಪ್ರದಾಯಿಕ ಶಿಕ್ಷಣವು ದೂರವಾಯಿತಾದರೂ ಶಾಲೆಯ ಹೊರಗಿನ ವಿದ್ಯಾಭ್ಯಾಸ ಹತ್ತಿರ ವಾದಂತಾಯಿತು. ಕೈಗೆ ಸಿಕ್ಕಿದ ಕನ್ನಡ ಪುಸ್ತಕ, ಕನ್ನಡ ಪತ್ರಿಕೆ ಓದುವುದನ್ನು ಹವ್ಯಾಸವಾಗಿ ಮಾಡಿಕೊಂಡರು. ಶಾಲೆಯ ಶಿಸ್ತುಬದ್ಧ ಓದಿಗಿಂತ ಹೊರಗಿನ ಮುಕ್ತ ವಾತಾವರಣದಲ್ಲಿ ಕನ್ನಡಸಾಹಿತ್ಯವನ್ನು ಓದುವ ಅಭಿರುಚಿಯನ್ನು ಬೆಳೆಸಿಕೊಂಡ ಅವರಿಗೆ ಬರೆಯುವ ಹವ್ಯಾಸ ತನ್ನಿಂದ ತಾನೇ ಬೆಳೆಯಿತು.

ಆ ಸಮಯದಲ್ಲಿ ಅವರಿಗೆ ಗುರುವಾಗಿ, ಮಾರ್ಗದರ್ಶಕರಾಗಿ ದೊರಕಿದ್ದು ಕರ್ಲಮಂಗಲಂ ಶ್ರೀಕಂಠಯ್ಯನವರು. ಅವರು ರಾಮಮೂರ್ತಿಗಳಿಗೆ ಕನ್ನಡ ಸಾಹಿತ್ಯ ಪ್ರಪಂಚ ದರ್ಶನವನ್ನು ಮಾಡಿಸಿದರು. ಪಂಪ. ರನ್ನ, ಲಕ್ಷ್ಮೀಶ, ಕುಮಾರವ್ಯಾಸರ ಸಾಹಿತ್ಯಗಳನ್ನು ಪರಿಚಯಿಸಿದರು. ಬಸವಣ್ಣನವರ ವಚನಸಾಹಿತ್ಯ, ಪುರಂದರದಾಸರ ದಾಸಸಾಹಿತ್ಯದ ಬಗ್ಗೆ ಅರಿವು ಮೂಡಿಸಿದರು. ರಾಮಮೂರ್ತಿಗೆ ಬರೆಯಲು ಪ್ರೇರಕರಾದರು, ಗುರುಗಳಾಗಿ ಮಾರ್ಗದರ್ಶನ ಮಾಡಿದರು.

ರಾಮಮೂರ್ತಿಗಳಿಗೆ ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗವಹಿಸುವ ಹುಮ್ಮಸ್ಸು. ಹಾಗಾಗಿ ಆ ಸಂಬಂಧ ನಡೆಯುತ್ತಿದ್ದ ಸಾರ್ವಜನಿಕಸಭೆಗಳಲ್ಲಿಯೂ ಅತೀವ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ಅಲ್ಲದೆ ಭಾಷಣಗಳನ್ನು ಮಾಡಿ ಉತ್ತಮಭಾಷಣಕಾರರೆಂದೆನಿಸಿಕೊಂಡಿದ್ದರು.

ಒಂದು ಸಲ ಗಾಂಧಿ ಮೈದಾನದಲ್ಲಿ (ಈಗಿನ ಕನ್ನಡ ಸಾಹಿತ್ಯ ಪರಿಷತ್‌ನ ಜಾಗ) ದಿವಂಗತ ಬಾಲಗಂಗಾಧರ ತಿಲಕರ ಗೌರವಾರ್ಥ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ಅಲ್ಲಿಯ ಭಾಷಣಕಾರರಾಗಿ ಸೀತಾರಾಮಶಾಸ್ತ್ರಿಗಳು ಭಾಷಣ ಮಾಡಿದರು. ಅವರ ಜೊತೆಯಲ್ಲಿ ಹೋಗಿದ್ದ ಬಾಲಕ ರಾಮಮೂರ್ತಿಗೆ ತಂದೆಮಾಡಿದ ಭಾಷಣದಿಂದ ಅದೇನು ಸ್ಫೂರ್ತಿ ಸಿಕ್ಕಿತೋ ತಾನೂ ಭಾಷಣ ಮಾಡಬೇಕೆಂದು ಮನಸ್ಸು ಮಾಡಿದ. ಆಯೋಜಕರನ್ನು ತನಗೂ ಭಾಷಣ ಮಾಡಲು ಅವಕಾಶ ನೀಡಬೇಕೆಂದು ಕೇಳಿಕೊಂಡ ಬಾಲಕನ ಉತ್ಸಾಹ ಮತ್ತು ಸ್ಫೂರ್ತಿಯನ್ನು ಗಮನಿಸಿ ಅವನಿಗೂ ಭಾಷಣ ಮಾಡಲು ಅವಕಾಶವನ್ನು ನೀಡಿದರು. ಭಾರೀ ಸಂಖ್ಯೆಯಲ್ಲಿ ಸೇರಿದ್ದ ಆ ಸಭೆಯಲ್ಲಿ ಯಾವ ವಿಧವಾದ ಅಂಜಿಕೆಯೂ ಅಳುಕೂ ಇಲ್ಲದೆ ನಿರರ್ಗಳವಾಗಿ ಭಾಷಣ ಮಾಡಿಯೇ ಬಿಟ್ಟ. ಬಾಲಕ ರಾಮಮೂರ್ತಿಯ ಮಾತುಗಳಿಗೆ ಇಡೀ ಸಭೆಯೇ ಕೊಂಡಾಡಿತು.

ಮೈಸೂರಿನ ಒಂದು ಸಾರ್ವಜನಿಕಸಭೆಯಲ್ಲಿ ಭಾಷಣ ಮಾಡಿದಾಗ ಆ ಸಭೆಯ ಅಧ್ಯಕ್ಷತೆ ವಹಿಸಿದ್ದ ಎಂ ವೆಂಕಟಕೃಷ್ಣಯ್ಯನವರು ಅರ್ಥಾತ್

ಮೈಸೂರು ತಾತಯ್ಯನವರು, ರಾಮಮೂರ್ತಿಯ ಭಾಷಣಕ್ಕೆ ಬೆರಗಾಗಿ ಅವರನ್ನು ಪ್ರಚಂಡ ಬಾಲಕ ಎಂದು ಶ್ಲಾಘಿಸಿ ಹರಸಿದರು.

ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿದ್ದ ರಾಮಮೂರ್ತಿಗಳನ್ನು ಅಂದಿನ ಬ್ರಿಟೀಷ್ ಸರ್ಕಾರ ಒಂದುಸಲ ಬಂಧಿಸಿ ಸೆರೆಮನೆಗೂ ಕಳಿಸಿದ್ದರು.

ಪತ್ರಿಕಾ ವೃತ್ತಿಗೆ ಪ್ರವೇಶ

ರಾಮಮೂರ್ತಿಗೆ ಆಗ 17–18ರ ವಯಸ್ಸು. ಏನಾದರೂ ಹೊಸತು ಮಾಡಬೇಕು ಬರೆಯಬೇಕು ಎನ್ನುವ ಉತ್ಸಾಹ ಹುಮ್ಮಸ್ಸು. ತಂದೆಯವರು ನಡೆಸುತ್ತಿದ್ದ "ವೀರಕೇಸರಿ" ಪತ್ರಿಕಾ ಕಛೇರಿಗೆ ಹೋದರು. ಆಗ ಅಲ್ಲಿ ಲಕ್ಷ್ಮೀಕಾಂತ ಅಯ್ಯಂಗಾರ್ ಅನ್ನುವವರು ಉಪ ಸಂಪಾದಕರಾಗಿದ್ದರು. ರಾಮಮೂರ್ತಿಯವರು ಅವರ ಬಳಿಗೆ ಹೋಗಿ "ನಾನು ಈ ಪತ್ರಿಕೆಯ ಸಂಪಾದಕನಾಗುತ್ತೇನೆ" ಎಂದು ಹೇಳಿದರು. ಬಾಲಕನ ದಾಷ್ಟಿಕತನಕ್ಕೆ ಮೆಚ್ಚಿದ ಅಯ್ಯಂಗಾರ್‌ರವರು ಇಂಗ್ಲೀಷ್‌ನಲ್ಲಿದ್ದ ಬರಹವೊಂದನ್ನು ನೀಡಿ ಅದನ್ನು ಕನ್ನಡಕ್ಕೆ ಭಾಷಾಂತರಿಸಲು ಹೇಳಿದರು.

ಆದರೆ ರಾಮಮೂರ್ತಿಗೆ ಇಂಗ್ಲೀಷ್ ಭಾಷಾ ಜ್ಞಾನವಿರಲಿಲ್ಲ. ಹಾಗಾಗಿ ಮುಚ್ಚು ಮರೆಯಿಲ್ಲದೆ ಅಳುಕಿಲ್ಲದೆ "ನನಗೆ ಇಂಗ್ಲೀಷ್ ಬರುವುದಿಲ್ಲ" ಎಂದು ಸ್ಪಷ್ಟವಾಗಿ ಹೇಳಿಕೊಂಡರು.

ಆಗ ಅಯ್ಯಂಗಾರ್‌ರವರು ಇಂಗ್ಲೀಷ್ ಭಾಷಾ ಜ್ಞಾನವಿಲ್ಲದಿದ್ದರೆ ಸಂಪಾದಕನಾಗಲು ಆಗುವುದಿಲ್ಲ. ಒಂದು ಪತ್ರಿಕೆಯ ಸಂಪಾದಕನಾಗಲು ಇಂಗ್ಲೀಷ್ ಭಾಷೆಯ ತಿಳುವಳಿಕೆ ಅತ್ಯಗತ್ಯವೆಂದು ರಾಮಮೂರ್ತಿಗೆ ತಿಳಿಹೇಳಿದರು. ಅವರ ಮಾತುಗಳನ್ನೇ ಸವಾಲಾಗಿ ತೆಗೆದುಕೊಂಡ ರಾಮಮೂರ್ತಿ "ಹಾಗಾದರೆ ನಾನು ಇಂಗ್ಲೀಷ್ ಕಲಿತುಕೊಂಡೇ ಬರುತ್ತೇನೆ" ಎಂದು ಅಲ್ಲಿಂದ ಹೊರಟವರೇ ಸೀದಾ ಮನೆಗೆ ಬಂದರು. ತಂದೆಯವರ ಬಳಿಗೆ ಹೋಗಿ ತಮ್ಮ ಇಂಗ್ಲೀಷ್ ಕಲಿಯುವ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಆಗ ಸೀತಾರಾಮಶಾಸ್ತ್ರಿಗಳು ಮಗನನ್ನು ಕಳಿಸಿದ್ದು ನಾರಾಯಣ ಅಯ್ಯರ್ ಎನ್ನುವವರ ಬಳಿಗೆ. ನಾರಾಯಣ

ಅಯ್ಯರ್‌ರವರು ಆಗ 'ಟ್ರೂತ್' ಎಂಬ ಇಂಗ್ಲೀಷ್ ಪತ್ರಿಕೆಯನ್ನು ನಡೆಸುತ್ತಿದ್ದರು.

ಉತ್ಸಾಹ, ಆಸಕ್ತಿ ಶ್ರದ್ಧೆಗಳಿಂದ ಕೂಡಿದ್ದ ತರುಣ ರಾಮಮೂರ್ತಿಯವರಲ್ಲಿರುವ ಇಂಗ್ಲೀಷ್‌ಕಲಿಕೆಯ ಆಸಕ್ತಿಯನ್ನು ಗಮನಿಸಿದ ನಾರಾಯಣಅಯ್ಯರ್‌ರವರು ದಿನವೂ ಸ್ವಲ್ಪಹೊತ್ತು ಇಂಗ್ಲೀಷ್ ಭಾಷೆಯನ್ನು ಹೇಳಿ ಕೊಡಲಾರಂಭಿಸಿದರು. ಅಯ್ಯರ್‌ರವರು ಇಂಗ್ಲೀಷ್ ಭಾಷೆಯನ್ನು ಹೇಳಿ ಕೊಡಲು ಉಪಯೋಗಿಸುತ್ತಿದ್ದ ಪಠ್ಯ ಪುಸ್ತಕ ಯಾವುದು ಗೊತ್ತೇ? ಅಂದಿನ ಕಾಲದ ಪ್ರಸಿದ್ಧ ಆಂಗ್ಲ ಪತ್ರಿಕೆಯಾಗಿದ್ದ ಹಿಂದೂ ಪತ್ರಿಕೆ.

ಛಲ ಹೊತ್ತು ಇಂಗ್ಲೀಷ್ ಕಲಿಯಲು ಆರಂಭಿಸಿದ್ದ ರಾಮಮೂರ್ತಿ ಕೆಲವೇ ತಿಂಗಳುಗಳ ಅವಧಿಯಲ್ಲಿ ಇಂಗ್ಲೀಷ್ ಭಾಷೆಯನ್ನು ಸಂಪೂರ್ಣವಾಗಿ ಕಲಿತರು. ಅಷ್ಟೇ ಅಲ್ಲ ಇಂಗ್ಲೀಷಿನಿಂದ ಕನ್ನಡಕ್ಕೆ ಸಮರ್ಪಕವಾಗಿ ಅನುವಾದ ಮಾಡುವುದನ್ನೂ ಕಲಿತುಕೊಂಡರು.

ಹೀಗಾಗಿ "ವೀರಕೇಸರಿ" ಪತ್ರಿಕಾಕಛೇರಿಯೇ ಅವರ ಇಂಗ್ಲೀಷ್ ಹಾಗೂ ಪತ್ರಿಕೋದ್ಯಮದ ಕಲಿಕಾಕೇಂದ್ರವಾಗಿ ಕೆಲಸ ನಿರ್ವಹಿಸಲು ಅನುಕೂಲವಾಯಿತು. ಪತ್ರಿಕೋದ್ಯಮ ಶಿಕ್ಷಣವನ್ನು ಪಡೆದರು. ಈ ಶಿಕ್ಷಣದ ಫಲವಾಗಿ ಅವರು ಉತ್ತಮಪತ್ರಕರ್ತರಾಗಿ ಪತ್ರಿಕಾರಂಗದಲ್ಲಿ ಹಲವಾರು ಹುದ್ದೆಗಳನ್ನು ನಿರ್ವಹಿಸಿದರು. 'ದೇಶಬಂಧು' ಪತ್ರಿಕೆಯ ವರದಿಗಾರ ಹಾಗೂ ಉಪಸಂಪಾದಕರಾಗಿ ಸೇವೆ ಸಲ್ಲಿಸಿದರು. 'ವಾರ್ತೆ' ಎಂಬ ಪತ್ರಿಕೆಯನ್ನು ಹೊರಡಿಸಿದರು. ಮಕ್ಕಳಿಗಾಗಿ 'ಬಾಲವಾಣಿ' ಎಂಬ ಪತ್ರಿಕೆಯನ್ನು ಪ್ರತಿ ತಿಂಗಳು ಪ್ರಕಟಿಸಿದರು.

1961ರ ಕನ್ನಡ ಚಳುವಳಿಯಲ್ಲಿ ತಮ್ಮನ್ನೇ ಸಕ್ರಿಯವಾಗಿ ತೊಡಗಿಸಿಕೊಂಡ ರಾಮಮೂರ್ತಿಯವರು ಕನ್ನಡಯುವಜನ ಪತ್ರಿಕೆಯನ್ನು ಸ್ಥಾಪಿಸಿ ಕನ್ನಡ ಚಳುವಳಿಯ ಮುಖವಾಣಿಯನ್ನಾಗಿ ರೂಪಿಸಿದರು.

ಬಾಲ್ಯದಿಂದಲೂ ಧೈರ್ಯ ಸಾಹಸಗಳಿಗೆ ಹೆಸರುವಾಸಿಯಾಗಿದ್ದ ರಾಮಮೂರ್ತಿಯವರ ಬದುಕು ಸದಾ ಹೋರಾಟದ್ದು. ತಾತ್ವಿಕ ದೃಷ್ಟಿಯಿಂದ ಕೂಡಿದ್ದು ತನಗೆ ಸರಿ ಎನಿಸಿದ್ದನ್ನು ನಿಷ್ಠುರವಾಗಿ ಖಂಡ

ತುಂಡವಾಗಿ ಹೇಳುವ ದಿಟ್ಟತನ ಮನೋಭಾವ ಅವರದಾಗಿತ್ತು. ಲೈಂಗಿಕ ವಿಜ್ಞಾನವನ್ನು ಕನ್ನಡ ಜನತೆಗೆ ಸರಳಭಾಷೆಯಲ್ಲಿ ತಿಳಿಸಬೇಕೆಂಬ ಉದ್ದೇಶದಿಂದ 'ಕಾಮಕಲಾ' ಎಂಬ ಮಾಸ ಪತ್ರಿಕೆಯನ್ನು ಆರಂಭಿಸಿದರು. ಈ ಸಂದರ್ಭದಲ್ಲಿ ಅವರು ನಡೆಸುತ್ತಿದ್ದ 'ಕಾಮಕಲಾ' ಪತ್ರಿಕೆಯನ್ನು ಅಶ್ಲೀಲ ಸಾಹಿತ್ಯದ ಗುಂಪಿಗೆ ಸೇರಿಸಿದ ಸರ್ಕಾರ ಅದನ್ನು ನಡೆಸಬಾರದೆಂಬ ಕಟ್ಟಪ್ಪಣೆ ವಿಧಿಸಿತು. ಆದರೆ ರಾಮಮೂರ್ತಿಯವರ ನಿಲುವು ವಿಭಿನ್ನವಾಗಿತ್ತು. ಸರಕಾರದ ಈ ಕ್ರಮವನ್ನು ಪ್ರಶ್ನಿಸಿ ಕೋರ್ಟಿನ ಮೆಟ್ಟಿಲನ್ನೇರಿದರು.

"ಕಾಮಕಲಾ" ಅಶ್ಲೀಲ ಗುಂಪಿಗೆ ಸೇರಿದ್ದಲ್ಲ. ಅದು ವಿಜ್ಞಾನ ಎಂದು ಸರ್ಕಾರದ ವಿರುದ್ಧ ಸೆಡ್ಡುಹೊಡೆದು ನಿಂತರು. ಹೈಕೋರ್ಟಿನಲ್ಲಿ ವಾದಿಸಿದರು. ಇದು ಅವರ ದಿಟ್ಟತನಕ್ಕೆ ಒಂದು ಉದಾಹರಣೆ. ಕೋರ್ಟಿನ ತೀರ್ಪು ಇವರ ಪರವಾಗಿಯೇ ಬಂದಿತು. ಪ್ರಕಟಣೆಗೆ ಇದ್ದ ಅಡೆ ತಡೆ ದೂರವಾಯಿತು. ಆದರೆ ಅವರ ದುರದೃಷ್ಟ. ಮುಂದೆ ಅವರಿಗೆ ಆ ಪತ್ರಿಕೆ ನಡೆಸಲು ಆಗಲಿಲ್ಲ.

ಈ ಮಧ್ಯೆ ಅವರ ಗಮನ ಸಾಹಿತ್ಯಲೋಕದತ್ತ ಸೆಳೆಯಿತು. ಅವರ ಮಹತ್ತ್ವಾಕಾಂಕ್ಷೆ ಇದ್ದಿದು ಸಾಹಿತ್ಯದಲ್ಲಿ. ತಾನು ಎಲ್ಲರಿಗಿಂತ ಭಿನ್ನವಾಗಿರಬೇಕು ಹೊಸಬಗೆಯ ಸಾಹಿತ್ಯವನ್ನು ಕನ್ನಡಜನತೆಗೆ ನೀಡಬೇಕು ಎಂಬುದಾಗಿತ್ತು. ಕೂಲಿ ಕಾರ್ಮಿಕರು, ಹೋಟೆಲ್ ಮಾಣಿಗಳು ಮುಂತಾದ ಜನ ಸಾಮಾನ್ಯರೂ ಸಹ ಕನ್ನಡಸಾಹಿತ್ಯವನ್ನು ಓದಬೇಕು. ಅಂತಹವರಲ್ಲಿ ಸಾಹಿತ್ಯದ ಅಭಿರುಚಿ ಮೂಡಬೇಕಾದರೆ ಮೊದಲಿಗೆ ಅವರನ್ನು ಓದುವ ಕಡೆಗೆ ಆಕರ್ಷಿತರನ್ನಾಗಿ ಮಾಡಬೇಕು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಹಾಗಾಗಿ ಅವರು ವಿಶಿಷ್ಟವಾದ ಪತ್ತೇದಾರಿ ಕಾದಂಬರಿಗಳನ್ನು ಬರೆಯುವ ಸಾಹಸ ಕಾರ್ಯಕ್ಕೆ ಕೈ ಹಾಕಿದರು. ಹಾಗೂ ಅದರಲ್ಲಿ ಸಫಲತೆಯನ್ನೂ ಪಡೆದರು. ಪತ್ತೇದಾರಿ ರಾಮಮೂರ್ತಿ ಎಂದೇ ಪ್ರಖ್ಯಾತಿ ಪಡೆದರು. ರಾಮಮೂರ್ತಿಯವರು ಈ ಸಾಹಿತ್ಯ ಪ್ರಕಾರದಲ್ಲಿ ರಚಿಸಿದ್ದು ಸುಮಾರು 150 ಕಾದಂಬರಿಗಳನ್ನು. ಅವರ ಕಾದಂಬರಿಗಳಲ್ಲಿ ಪತ್ತೇದಾರನಾಗಿ ಜನಪ್ರಿಯತೆಯನ್ನು ಪಡೆದಿದ್ದು ಚಲಂ ಪಾತ್ರ. ಅವರಿಗೆ

ತುಂಬಾ ಪ್ರಸಿದ್ಧಿಯನ್ನು ತಂದು ಕೊಟ್ಟ ಕಾದಂಬರಿ ಎಂದರೆ 'ಕಾಲುವೆ ಮನೆ.'

ಅವರು ರಚಿಸಿದ ಇನ್ನಿತರ ಪ್ರಮುಖ ಕಾದಂಬರಿಗಳೆಂದರೆ ಐದು ದಿನಗಳು , ಮಾಟಗಾತಿ, ಜುಲೇಕ, ಲಗುಮಿಯ ಹೆಣ, ಮತ್ತೆ ಜುಲೇಕ, ಅಶ್ಲೀಲ ಪತ್ರಗಳು, ರಕ್ತ ಚುಂಬನ, ಸಾಗರಿ, ಮರೆಯಾಗಿದ್ದ ವಜ್ರಗಳು, ಭಾಗ್ಯಳ ಮದುವೆ, ಅಪರಾಧಿಯ ಆತ್ಮಕಥೆ, ಕಣ್ಮರೆಯಾಗುತ್ತಿದ್ದ ಪ್ರೇಯಸಿ, ಪ್ರೇಮ ಮಂದಿರ ಮುಂತಾದವು.

ಇವರು ಸೃಷ್ಟಿಸಿದ ಪಾತ್ರಗಳಾದ ಖಾಸಗಿ ಪತ್ತೇದಾರ ಚಲಂ, ಆತನ ಸಹಾಯಕರಾದ ಉಷೆ, ಕುಪ್ಪುಸ್ವಾಮಿ ಪೋಲೀಸ್ ಅಧಿಕಾರಿ ವೆಂಕಟೇಶಮೂರ್ತಿ, ಇಬ್ರಾಹಿಂ ಬಹಳ ಜನಪ್ರಿಯ ಪಾತ್ರಗಳಾದವು.

ಪತ್ತೆದಾರಿ ಕಾದಂಬರಿಗಳೇ ಅಲ್ಲದೆ ಚಾರಿತ್ರಿಕ ಕಾದಂಬರಿಗಳನ್ನು ಸಹ ಅವರು ಬರೆದಿದ್ದಾರೆ. ನಾಡಿನ ಇತಿಹಾಸದ ಬಗ್ಗೆ, ಗತ ವೈಭವದ ಬಗ್ಗೆ ಅವರಿಗೆ ಹೆಚ್ಚು ಒಲವಿತ್ತು. ಭಾಗ್ಯಳ ಮದುವೆ, ಪ್ರೇಮಮಂದಿರ, ಇಬ್ಬರು ರಾಣಿಯರು, ರಾಜದಂಡ ಮುಂತಾದವು ಇವರ ಜನಪ್ರಿಯ ಚಾರಿತ್ರಿಕ ಕಾದಂಬರಿಗಳು.

ಸಾಹಿತ್ಯ ಕ್ಷೇತ್ರದಲ್ಲಿ ಪತ್ತೇದಾರಿ ಕಾದಂಬರಿಗಳಿಗೆ ಒಂದು ವಿಶಿಷ್ಟ ಸ್ಥಾನವನ್ನು ದೊರಕಿಸಿ ಕೊಟ್ಟ ಹಿರಿಮೆ ರಾಮಮೂರ್ತಿಯವರಿಗೆ ಸಲ್ಲುತ್ತದೆ.

ತಾವು ಬರೆದ ಕಾದಂಬರಿಗಳು ಜನ ಸಾಮಾನ್ಯರನ್ನು ಮುಟ್ಟಬೇಕು. ಹೆಚ್ಚು ಹೆಚ್ಚು ಜನ ತಮ್ಮ ಸಾಹಿತ್ಯವನ್ನು ಓದಬೇಕು ಎಂಬ ಹಂಬಲವನ್ನು ರಾಮಮೂರ್ತಿಯವರು ಹೊಂದಿದ್ದರು. ಆ ಕಾರಣಕ್ಕಾಗಿ ತಾವು ಬರೆದು ಪ್ರಕಟಿಸಿದ ಕಾದಂಬರಿಗಳನ್ನು ಸುಲಭ ಬೆಲೆಗೆ ಎಲ್ಲರಿಗೂ ತಲುಪುವಂತೆ ಅಗ್ಗದ ಬೆಲೆಗೆ ಪ್ರಕಟಿಸಿದರು. ಅವರು ಒಂದೊಂದು ಪುಸ್ತಕವು ಸರಿ ಸುಮಾರು 120 ಪುಟಗಳಷ್ಟಿರುತ್ತಿತ್ತು. ಅಂದಿನ ದಿನಗಳಲ್ಲಿ ಪುಸ್ತಕಕ್ಕೆ 9 ಆಣೆಗೆ (ಅಂದರೆ ಈಗಿನ ದರ 56 ಪೈಸೆಗಳು) ನಿಗದಿ ಮಾಡಿದರು. ಅವರು ತಮ್ಮ ಪುಸ್ತಕಗಳನ್ನು ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮುದ್ರಿಸಿದರು. ಮಾರಾಟ ಮಾಡಿದರು ಈ ದಿಶೆಯಲ್ಲಿ ಅವರು ವಿಕ್ರಮವನ್ನೇ ಸಾಧಿಸಿದರು

ಎಂದರೆ ಅತಿಶಯೋಕ್ತಿಯಾಗಲಾರದು.

ಅವರು ತಮ್ಮ ಎಲ್ಲಾ ಪುಸ್ತಕಗಳ ಹೊರ ರಕ್ಷಾಪುಟದಲ್ಲಿ 'ರಾಮಮೂರ್ತಿಯ ಪುಸ್ತಕ ನಿಮ್ಮನ್ನೆಂದೂ ವಂಚಿಸುವುದಿಲ್ಲ' ಎಂಬ ಭರವಸೆಯನ್ನು ಓದುಗರಿಗೆ ನೀಡುತ್ತಿದ್ದುದು ವಿಶಿಷ್ಟವಾಗಿತ್ತು.

ಹಾಗೆಯೇ ಅವರು ತಮ್ಮ ಪುಸ್ತಕಗಳ ಮೇಲೆ ಹಾಕುತ್ತಿದ್ದ ಲಾಂಛನ "ಆಷ್‌ಟ್ರೇಯ ಮೇಲೆ ಉರಿಯುತ್ತಿರುವ ಸಿಗಾರು" ರಾಮಮೂರ್ತಿಯವರ ಅಭಿಲಾಷೆಗೆ ತಕ್ಕಂತೆ ಕನ್ನಡದ ಓದುಗರಲ್ಲಿ ಅವರ ಕಾದಂಬರಿಗಳು ಓದುವ ಚಟವನ್ನು ಹುಟ್ಟಿಸಿತು.

ಬಾಂಬೆ ಷೋ ಏರ್ಪಡಿಸಿದ ರಾಮಮೂರ್ತಿ

1940ರ ದಶಕದಲ್ಲಿ ರಾಮಮೂರ್ತಿ ಬಾಂಬೆ ಷೋ ಎಂಬ ಪ್ರದರ್ಶನವನ್ನು ಏರ್ಪಡಿಸುವ ಸಾಹಸಕ್ಕೂ ಕೈ ಹಾಕಿದರು. ಅದಕ್ಕೆ ತಕ್ಕ ವೇಷಭೂಷಣಗಳನ್ನು ಧರಿಸಿದರು. ಎರಡು ವರ್ಷಕ್ಕೂ ಹೆಚ್ಚುಕಾಲ ಈ ಷೋವನ್ನು ನಡೆಸಿದರು.

ಹೀಗೆ ಜೀವನದ ಹಲವಾರು ರಂಗಗಳಲ್ಲಿ ಪ್ರಯೋಗಗಳನ್ನು ಮಾಡಿದ್ದ ರಾಮಮೂರ್ತಿಯವರು ಸಾಹಸಶೀಲರಾಗಿದ್ದರು. ಒಂದು ಕ್ಷೇತ್ರದಲ್ಲಿ ವಿಫಲವಾದರೆ ಹಿಂಜರಿಯದೆ ಮತ್ತೊಂದು ಕ್ಷೇತ್ರಕ್ಕೆ ಕೈ ಹಾಕುತ್ತಿದ್ದರು. ಅಲ್ಲಿ ಸಾಫಲ್ಯವನ್ನು ಕಾಣಲು ತಮ್ಮೆಲ್ಲ ಪ್ರಯತ್ನಗಳನ್ನು ನಿಷ್ಠೆಯಿಂದ ಮಾಡುತ್ತಿದ್ದರು.

ರಾಮಮೂರ್ತಿಯವರಿಗೆ 1942ರಲ್ಲಿ ವಿವಾಹವಾಯಿತು. ಇವರನ್ನು ಕೈಹಿಡಿದಾಕೆ ಕಮಲಮ್ಮ ಎಂಬ 15 ವರ್ಷದ ಯುವತಿ. ರಾಮಮೂರ್ತಿಯವರಿಗೆ ಆಗ 24ರ ವಯಸ್ಸು. ಇವರ ವಿವಾಹವು ಹೆಣ್ಣಿನ ತವರೂರಾದ ನಂಜನಗೂಡಿನಲ್ಲಿ ನಡೆಯಿತು.

ಕಮಲಮ್ಮನವರು ರಾಮಮೂರ್ತಿಯವರ ಎಲ್ಲಾ ಹೋರಾಟಗಳಲ್ಲಿಯೂ ಸಂಪೂರ್ಣವಾಗಿ ಸಹಕರಿಸಿ ಆದರ್ಶ ಪತ್ನಿಯೆನಿಸಿಕೊಂಡರು. "ಪ್ರತಿ ಯಶಸ್ವಿ ಪುರುಷನ ಹಿಂದಿನ ಪ್ರೇರಕ ಶಕ್ತಿ ಸ್ತ್ರೀ" ಎಂಬ ಉಕ್ತಿಗೆ ಅನುಸಾರವಾಗಿ ನಡೆದುಕೊಂಡರು. ಅವರ ದಾಂಪತ್ಯ

ಜೀವನದಲ್ಲಿ ಮಂಜುನಾಥ ಹಾಗೂ ದಿನಕರ ಎಂಬ ಇಬ್ಬರು ಗಂಡುಮಕ್ಕಳು ಜನಿಸಿದರು.

ಅರವತ್ತರ ದಶಕದ ಕನ್ನಡ ಚಳುವಳಿಯತ್ತ ಹೊರಳಿದ ರಾಮಮೂರ್ತಿ

ಅರವತ್ತರ ದಶಕದ ಕಾಲ ಕನ್ನಡ ಚಳುವಳಿಯ ಆರಂಭದ ಕಾಲವೆನ್ನಬಹುದು. ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಸೂಕ್ತ ಸ್ಥಾನ ದೊರಕಿಸಲು, ಕನ್ನಡಿಗರು ತಲೆ ಎತ್ತಿ ಆತ್ಮಾಭಿಮಾನದಿಂದ ಬಾಳಲು ಇಡೀ ಕನ್ನಡ ನಾಡಿನಲ್ಲಿ ಕನ್ನಡಜಾಗೃತಿಯನ್ನುಂಟುಮಾಡಿದ ಸನ್ನಿವೇಶವನ್ನುಂಟು ಮಾಡಿದ್ದು 1960ರ ಆರಂಭದ ಕಾಲ.

ಕನ್ನಡ ಜನ ಜಾಗೃತಿಗಾಗಿ ದಿನಾಂಕ 4.2.1962ರಲ್ಲಿ ಕನ್ನಡಿಗರ ಸಮಾವೇಶವೊಂದನ್ನು ಏರ್ಪಡಿಸಲಾಯಿತು. ಬೆಂಗಳೂರಿನ ಕೆಂಪೇಗೌಡ ರಸ್ತೆಯ ಚೇಂಬರ್ ಆಫ್ ಕಾಮರ್ಸ್ ಮೈಸೂರು ವಾಣಿಜ್ಯ ಭವನದಲ್ಲಿ ಅತ್ಯಂತ ಉತ್ಸಾಹ ಸಂಭ್ರಮ ಸಡಗರಗಳಿಂದ ನಡೆದ ಈ ಸಮಾವೇಶದಲ್ಲಿ ಕನ್ನಡದ ಹಿರಿಯ ಸಾಹಿತಿಗಳು, ಕಲಾವಿದರು, ಜನಪ್ರತಿನಿಧಿಗಳು, ಕನ್ನಡ ಸಂಘಸಂಸ್ಥೆಗಳ ಪ್ರತಿನಿಧಿಗಳು, ಕನ್ನಡಪ್ರೇಮಿಗಳು ಅತ್ಯಧಿಕವಾಗಿ ನೆರೆದಿದ್ದರು.

ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದವರು ನಾಟಕಕಾರರಾದ ಶ್ರೀರಂಗರು. ಉದ್ಘಾಟಿಸಿದವರು ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರು.

ಈ ಸಮಾರಂಭದಲ್ಲಿಯೇ ಕನ್ನಡ ಚಳುವಳಿಯ ಧ್ಯೇಯೋದ್ದೇಶಗಳನ್ನು ಪ್ರಚುರಪಡಿಸುವ ಉದ್ದೇಶಕ್ಕಾಗಿ ಕನ್ನಡ ಯುವಜನ ಎಂಬ ವಾರಪತ್ರಿಕೆಯನ್ನು ಆರಂಭಿಸಿದ್ದು ಕನ್ನಡ ಚಳುವಳಿಯ ಇತಿಹಾಸದಲ್ಲಿ ಈ ಪತ್ರಿಕೆ ವಹಿಸಿದ್ದ ಪಾತ್ರ ಮಹತ್ತರವಾದುದು. ಈ ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿ ಹೊತ್ತವರೇ ಮ.ರಾಮಮೂರ್ತಿಯವರು.

ಕರ್ನಾಟಕ ಸಂಯುಕ್ತ ರಂಗ ರಚನೆಗೊಂಡಾಗ, ರಂಗದ ಎಲ್ಲಾ ನಿತ್ಯ ಚಟುವಟಿಕೆಗಳನ್ನು ಚಳುವಳಿಗಾರರಿಗೆ ತಲುಪಿಸುತ್ತಿದ್ದ ವಾರ್ತಾವಾಹಿನಿ

ಯಾಗಿ ಯುವಜನ ಪತ್ರಿಕೆ ತನ್ನ ಕಾರ್ಯ ನಿರ್ವಹಿಸಿತು. ಕನ್ನಡಕ್ಕೆ ಎಲ್ಲೇ ಏನೇ ಅನ್ಯಾಯವಾದರೂ ತೀಕ್ಷ್ಣವಾಗಿ ಖಂಡಿಸಿ ಬರೆಯುತ್ತಿದ್ದ ರಾಮಮೂರ್ತಿಯವರ ಲೇಖನಗಳನ್ನು ಓದಲು ಜನ ತವಕದಿಂದ ಕಾಯುತ್ತಿದ್ದರು. ಅಲ್ಲದೆ ಇಡೀ ಭಾರತದಲ್ಲಿ ಮೊಟ್ಟಮೊದಲ ಭಾಷಾಚಳುವಳಿಯ ಮುಖವಾಣಿ ಪತ್ರಿಕೆ ಎಂದೂ ಹೆಸರನ್ನೂ ಸಹ ಯುವಜನ ಪಡೆಯಿತು. ಆದರೇನಂತೆ ಪತ್ರಿಕೆಯ ಆಯಸ್ಸು ಬಹಳ ದಿನ ಸಾಗಲಿಲ್ಲವೆಂಬುದು ದುರದೃಷ್ಟಕರ ಸಂಗತಿ.

ಇದುವರೆವಿಗೂ ಪತ್ತೇದಾರಿ ರಾಮಮೂರ್ತಿಗಳಾಗಿದ್ದ ಅವರು ಚಳುವಳಿ ರಾಮಮೂರ್ತಿಗಳಾಗಿ ಕನ್ನಡವಿರೋಧಿ ಧೋರಣೆಗಳನ್ನು ಖಂಡತುಂಡವಾಗಿ ತಮ್ಮ ಹರಿತ ಲೇಖನಿಯಿಂದ ಟೀಕಿಸಲಾರಂಭಿಸಿದರು. ಕನ್ನಡ, ಕನ್ನಡಿಗರ ಹಿತರಕ್ಷಣೆಗಾಗಿ ಏರ್ಪಟ್ಟ ಈ ಸಮ್ಮೇಳನ ಕನ್ನಡನಾಡಿನ, ಕನ್ನಡಿಗರ ಹಲವಾರು ಸಮಸ್ಯೆಗಳತ್ತ ಕ್ಷ ಕಿರಣ ಬೀರುವ ಹಲವಾರು ನಿರ್ಣಯಗಳನ್ನು ಕೈಗೊಂಡಿತು.

ಅಂದಿನ ಪರಿಸ್ಥಿತಿಯಲ್ಲಿ ಈ ಸಮ್ಮೇಳನ ಕನ್ನಡಿಗರ ಮನಸ್ಸಿನಲ್ಲಿ ಸುಪ್ತವಾಗಿದ್ದ ಕನ್ನಡದ ಅಭಿಮಾನವನ್ನು ಹೊರಹೊಮ್ಮಿಸುವಲ್ಲಿ ಸಫಲವಾಯಿತು. ಅಲ್ಲದೆ ಮುಂದಿನ ದಿನಗಳಲ್ಲಿ ನಡೆದ ಅನೇಕ ಕನ್ನಡಪರ ಹೋರಾಟಗಳಿಗೆ ನಾಂದಿಯಾಯಿತೆನ್ನಬಹುದು.

ಕನ್ನಡ ಚಳುವಳಿಗೆ ರಾಮೋತ್ಸವದ ಪ್ರಭಾವ

ಅಂದಿನ ದಿನಗಳಲ್ಲಿ ಬೆಂಗಳೂರು ಹಾಗೂ ಇತರೇ ಪ್ರದೇಶಗಳಲ್ಲಿ ನಡೆಯುತ್ತಿದ್ದ ರಾಮೋತ್ಸವ ಗಣೇಶೋತ್ಸವಗಳಲ್ಲಿ ಸಂಗೀತ ಕಛೇರಿ ಹಾಗೂ ಇನ್ನಿತರ ಸಾಂಸ್ಕೃತಿಕ ಸಮಾರಂಭಗಳಲ್ಲಿ ಸ್ಥಳಿಯ ಕಲಾವಿದರಿಗೆ ಅವಕಾಶವೇ ಇರುತ್ತಿರಲಿಲ್ಲ. ಎಲ್ಲೋ ಕೆಲವು ಹೆಸರಾಂತ ಕಲಾವಿದರಿಗೆ ಮನ್ನಣೆ ಇತ್ತೇ ಹೊರತು ಬೇರೆ ಕಲಾವಿದರನ್ನು ಕೇಳುವವರೇ ಇರಲಿಲ್ಲ. ಹಿತ್ತಲಗಿಡ ಮದ್ದಲ್ಲ ಎಂಬ ಧೋರಣೆ ಹೊಂದಿದ್ದ ಸಮಾರಂಭಗಳ ವ್ಯವಸ್ಥಾಪಕರು ಕನ್ನಡದ ಸ್ಥಳೀಯ ಕಲಾವಿದರನ್ನು ಕ್ಯಾರೇ ಎನ್ನುತ್ತಿರಲಿಲ್ಲ. ಮದ್ರಾಸ್‌ನಿಂದ ಬಂದರೇ ಅವರು ಕಲಾವಿದರು. ಅವರು ಹೇಳಿದ್ದೇ ಸಂಗೀತ ಎಂಬಂತಿತ್ತು. ಅಂತಹ ಕಲಾವಿದರಿಗೆ ಅಗಮನವಷ್ಟೆ ಹೆಚ್ಚಿನ ಸಂಭಾವನೆ.

ಸ್ಥಳೀಯ ಕಲಾವಿದರಿಗೆ ಅವರು ಕೊಟ್ಟಷ್ಟು ಅವಕಾಶದಲ್ಲಿ ಹಾಗೂ ಸಂಭಾವನೆಯಲ್ಲಿ ಅಗಾಧ ವ್ಯತ್ಯಾಸ. ಸ್ವಂತ ನೆಲದಲ್ಲಿಯೇ ಕನ್ನಡ ಕಲಾವಿದರಿಗೆ ಸಂಗೀತಗಾರರಿಗೆ ತಾತ್ಸಾರದ ಅನಾದರಣೆ.

ಇಂತಹ ತಾತ್ಸಾರದ ಮನೋಭಾವನೆಯನ್ನು ತೊಡೆದು ಹಾಕಿ ಕನ್ನಡ ನಾಡಿನ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕನ್ನಡ ಕಲಾವಿದರಿಗೆ ಅಗ್ರಸ್ಥಾನ ನೀಡಬೇಕೆಂದು ಈ ಹೋರಾಟಕ್ಕೆ ಆರಿಸಿಕೊಂಡಿದ್ದು ಚಾಮರಾಜಪೇಟೆ ರಾಮಸೇವಾ ಮಂಡಲಿಯನ್ನು, ಅದರ ಕಾರ್ಯಕ್ರಮಗಳ ವೈಖರಿಯನ್ನು.

ಚಾಮರಾಜಪೇಟೆ ರಾಮಸೇವಾ ಮಂಡಲಿ ಮತ್ತು ಶೇಷಾದ್ರಿಪುರದ ರಾಮಸೇವಾ ಸಮಿತಿ ಈ ಎರಡೂ ಸಮಿತಿಗಳು ರಾಮೋತ್ಸವಗಳನ್ನು ಏರ್ಪಡಿಸುತ್ತಿದ್ದ ಪ್ರಮುಖ ಸಂಸ್ಥೆಗಳಾಗಿದ್ದವು.

ಕನ್ನಡ ಸಂಗೀತಗಾರರಿಗೆ ಪ್ರಾಧಾನ್ಯ ನೀಡಬೇಕೆಂದು ಈ ಎರಡು ಸಂಸ್ಥೆಗಳಿಗೆ ತಿಳಿಸಿದಾಗ ಶೇಷಾದ್ರಿಪುರದ ರಾಮಸೇವಾ ಸಮಿತಿಯು ಸಕಾರಾತ್ಮಕವಾಗಿ ಸ್ಪಂದಿಸಿತು. ಆದರೆ ಚಾಮರಾಜಪೇಟೆ ಶ್ರೀರಾಮಸೇವಾ ಮಂಡಲಿಯು ತನ್ನ ಪಕ್ಷಪಾತೀ ಧೋರಣೆಯನ್ನು ಮುಂದುವರೆಸಿ ರಾಜ್ಯದ ಕಲಾವಿದರನ್ನು ಅನಾದರಿಸಿತು.

ಇದರಿಂದ ಬೇಸತ್ತ ಚಳುವಳಿಯ ನಾಯಕರು ಸಮಿತಿಯ ಧೋರಣೆಯನ್ನು ಖಂಡಿಸಿ, ಪ್ರತಿಭಟಿಸುವ ತೀರ್ಮಾನವನ್ನು ಕೈಗೊಂಡರು.

ಚರಿತ್ರಾರ್ಹ ಪ್ರತಿಭಟನೆ

ದಿನಾಂಕ 27.4.1962 ಕನ್ನಡ ಚಳುವಳಿಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಬೇಕಾದ ದಿನ. ರಾಮಸೇವಾ ಮಂಡಲಿಯಲ್ಲಿ ಸಂಗೀತಸಾಮ್ರಾಜ್ಞೆ ಗಾನವಿಶಾರದೆ ಎಂ.ಎಸ್.ಸುಬ್ಬಲಕ್ಷ್ಮಿಯವರ ಸಂಗೀತ ನಡೆಯುತ್ತಿದ್ದರೆ ನಗರದ ಚಿಕ್ಕಲಾಲ್‌ಬಾಗ್‌ನಿಂದ ಹಲವಾರು ಕನ್ನಡ ಸಂಘಗಳ ಪ್ರತಿನಿಧಿಗಳು, ಕನ್ನಡ ಪ್ರೇಮಿಗಳು ನೂರಾರು ಸಂಖ್ಯೆಯಲ್ಲಿ ಕನ್ನಡ ಕಲಾವಿದರಿಗೇ ಅವಕಾಶ ನೀಡಬೇಕೆನ್ನುವ ಹಲವಾರು ಭಿತ್ತಿ ಪತ್ರಗಳೊಂದಿಗೆ ಕನ್ನಡ ಪರ ಘೋಷಣೆಗಳೊಂದಿಗೆ ಶಾಂತಿಯುತವಾಗಿ ಶಿಸ್ತಿನಿಂದ ಮೆರವಣಿಗೆಯಲ್ಲಿ ಸಾಗಿ ಬಂದರು.

ಮೆರವಣಿಗೆಯ ನಾಯಕತ್ವವನ್ನು ವಹಿಸಿ ಮುಂಚೂಣಿಯಲ್ಲಿದ್ದವರು ಅ.ನ.ಕೃ ಮತ್ತು ರಾಮಮೂರ್ತಿಯವರುಗಳು. ಇವರೊಂದಿಗೆ ನಾಡಿಗೇರ ಕೃಷ್ಣರಾವ್, ಶ್ರೀಧರಮೂರ್ತಿ ಕೋಣಂದೂರು ಲಿಂಗಪ್ಪ, ಎಂ.ವಿ.ಸುಬ್ಬರಾವ್, ಬೆನಿ ಈಶ್ವರಪ್ಪ, ಸೂರ್ಯನಾರಾಯಣ ಚಡಗ ಮುಂತಾದವರು.

ಚಿಕ್ಕಲಾಲ್‌ಬಾಗ್‌ನಿಂದ ಹೊರಟ ಮೆರವಣಿಗೆ ಅರಳೇಪೇಟೆ ಸೂಪರ್ ಟಾಕೀಸ್, ಮಿಂಟೋ ಕಣ್ಣಾಸ್ಪತ್ರೆ ಮುಖಾಂತರ ಸಮಾರಂಭ ನಡೆಯುತ್ತಿದ್ದ ಸಿಟಿ ಇನ್‌ಸ್ಟಿಟ್ಯೂಟ್ ಬಳಿಗೆ ಬಂದು ತಲುಪಿತು. ಯಾವುದೇ ಶಿಸ್ತಿನ ಭಂಗವಿಲ್ಲ ಆಕ್ರೋಶವಿಲ್ಲ, ಶಾಂತಿಯುತ ಮೆರವಣಿಗೆ, ಶಾಂತಿಯುತ ಪ್ರತಿಭಟನೆ.

ಆದರೆ ಕೆಲವು ಕಿಡಿಗೇಡಿಗಳು ಒಂದೆರಡು ಕಲ್ಲುಗಳನ್ನು ತೂರಿದರು. ಮಧ್ಯಪ್ರವೇಶಿಸಿದ ಪೊಲೀಸರು ಕೆಲವು ಕಾರ್ಯಕರ್ತರನ್ನು ಥಳಿಸಿದರು. ಕೆಲವರ ಬಂಧನವೂ ಆಯಿತು. ಈ ಸಂದರ್ಭದಲ್ಲಿ ಆದ್ಯರಾಮಾಚಾರ್, ಮೈ.ಸು.ಶೇಷಗಿರಿರಾವ್, ಯು.ಸಿ.ರಾಮದಾಸ್ ಅವರ ಮೇಲೆ ಪೊಲೀಸರು ಮೊಕದ್ದಮೆ ಹೂಡಿದರು. ಕನ್ನಡ ಚಳುವಳಿಯ ಇತಿಹಾಸದಲ್ಲಿ ಮೊಟ್ಟ ಮೊದಲ ಅಹಿತಕರ ಘಟನೆ ಇದೇ ಎನ್ನಬಹುದು.

ಹೊರಗೆ ಸೇರಿದ್ದ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮ.ರಾಮಮೂರ್ತಿ, ನಾಡಿಗೇರ ಕೃಷ್ಣರಾಯರು. ಅ.ನ.ಕೃ ಮುಂತಾದವರು ಮಾತನಾಡಿ ಪ್ರತಿಭಟನೆಯ ಉದ್ದೇಶವನ್ನು ವಿವರಿಸಿ ರಾಮಸೇವಾ ಮಂಡಲಿಯವರ ಹಟಮಾರಿತನವನ್ನು ಖಂಡಿಸಿದರು.

ರಾಮಮೂರ್ತಿಯವರು ಸುಮಾರು ಇಪ್ಪತ್ತು ನಿಮಿಷಗಳ ಕಾಲ ಮಾತನಾಡಿ ಕನ್ನಡ ನಾಡಿನಲ್ಲಿ ಕನ್ನಡ ಕಲಾವಿದರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಮಾತನಾಡಿದರು.

27ನೇ ತಾರೀಖಿನ ಪ್ರತಿಭಟನಾ ಕಾರ್ಯಕ್ರಮವೇನೋ ಮುಗಿಯಿತು. ಆದರೆ ಅದು ಬೀರಿದ 'ಪರಿಣಾಮ ಅನಿರೀಕ್ಷಿತ' ಅದ್ಭುತ. ನಮ್ಮವರೇ ಆದ ಕೆಲವರು ಇದು ಸಂಗೀತ ಶಾರದೆಗೆ ಮಾಡಿದ ಅವಮಾನ ಎಂದರು. ಕಲೆಗೆ

ಕಲಾವಿದರಿಗೆ ಭಾಷೆಯ ಗಡಿ ಇರಬಾರದೆಂದರು. ಕನ್ನಡಿಗರ ಈ ಪ್ರತಿಭಟನೆಯಿಂದ ಮಾಡಬಾರದ ಕೆಲಸ ಮಾಡಿಬಿಟ್ಟಿದ್ದಾರೆಂದು ಆಕ್ಷೇಪವೆತ್ತಿದರು.

ಇಂಗ್ಲೀಷ್ ಪತ್ರಿಕೆಗಳ ವಾಚಕರವಾಣಿ ವಿಭಾಗದಲ್ಲಿಯಂತೂ ಕನ್ನಡಿಗರ ಪ್ರತಿಭಟನೆಯನ್ನು ಕಟುವಾಗಿ ಟೀಕಿಸುವ ಪತ್ರಗಳು ಪುಂಖಾನುಪುಂಖವಾಗಿ ಪ್ರಕಟವಾದವು.

ಎಲ್ಲಾ ಪತ್ರಗಳಿಗೆ ಉತ್ತರವಾಗಿ ಯುನೈಟೆಡ್ ಫ್ರಂಟ್ ಆಫ್ ಕನ್ನಡ ಅಸೋಸಿಯೇಷನ್ಸ್ ಇನ್ ಬೆಂಗಳೂರು ಹೆಸರಿನಲ್ಲಿ ಪ್ರಧಾನ ಕಾರ್ಯದರ್ಶಿ ಸ್ಥಾನದಲ್ಲಿದ್ದ ಮ.ರಾಮಮೂರ್ತಿಯವರು ಸುದೀರ್ಘವಾದ ಪತ್ರವನ್ನು ಬರೆದು ಅದರಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದ ಉದ್ದೇಶವನ್ನು ಸಕಾರಣವಾಗಿ ವಿವರಿಸಿ, ರಾಜ್ಯದ ಪ್ರಮುಖ ಸಂಗೀತ ವಿದ್ವಾಂಸರಾದ ಶ್ರೀ ಬಿಡಾರಂ ಕೃಷ್ಣಪ್ಪನವರು ತಮಿಳುನಾಡಿನ ಸಂಗೀತ ವಿದ್ವನ್ಮಣಿಗಳನ್ನು ಮೈಸೂರಿಗೆ ಕರೆಯಿಸಿಕೊಂಡು ಅವರಿಗೆ ಮೈಸೂರಿನ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಹಾಡಲು ಅವಕಾಶಕೊಟ್ಟಿದ್ದು, ಅವರಿಗೆ ಮೈಸೂರು ಅರಮನೆಯಲ್ಲಿ ಆಶ್ರಯ ಕೊಟ್ಟು ಗೌರವಾನ್ವಿತ ಸ್ಥಾನ ಸಿಗುವಂತೆ ಮಾಡಿದ್ದು, ಶ್ರೀ ಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್ ಅಂಥವರು, ಅಂತಹ ವಿದ್ವತ್ಸಭೆಗಳ ಅಧ್ಯಕ್ಷತೆವಹಿಸಿ, ಆ ಕಲಾವಿದರಿಗೆ ರಾಜಮರ್ಯಾದೆ, ರಾಜಮನ್ನಣೆ ನೀಡಿ ಗೌರವಿಸಿದ್ದನ್ನು ಉಲ್ಲೇಖಿಸಿದರು. ಅಲ್ಲದೆ ಟೈಗರ್ ವರದಾಚಾರ್ಯರು ಮೈಸೂರಿನಲ್ಲಿ ಕಳೆದ ಅವರ ಜೀವನ, ಮುಂತಾದ ವಿವರಗಳನ್ನು ವಿವರಿಸಿ ಹೇಗೆ ತಮಿಳು ಕಲಾವಿದರಿಗೆ ಮೈಸೂರು ಜನ ಮತ್ತು ರಾಜಾಶ್ರಯ ಮನ್ನಣೆ ನೀಡಿತಾದರೂ ಸ್ಥಳೀಯ ಕಲಾವಿದರನ್ನು ಇಲ್ಲಿಯ ಸಂಗೀತ ಸಂಸ್ಥೆಗಳು ಹೇಗೆ ನಿರ್ಲಕ್ಷಿಸುತ್ತಿರುವರೆಂದೂ ಅದಕ್ಕಾಗಿ ಈ ಪ್ರತಿಭಟನೆ ಕೈಗೊಂಡಿದ್ದೇ ಹೊರತು ಇದು ಯಾವುದೇ ಕಲಾವಿದರ ವಿರುದ್ಧವೂ ಅಲ್ಲವೆಂದು ಸ್ಪಷ್ಟಪಡಿಸಿದರು. ಅಲ್ಲದೆ ತಮಿಳು ಕಲಾವಿದರು ನಮ್ಮ ರಾಜ್ಯದಲ್ಲಿ ಬಂದು ಕಾರ್ಯಕ್ರಮ ನಡೆಸುವಂತೆ ನಮ್ಮ ಕನ್ನಡ ಕಲಾವಿದರನ್ನು ಅವರ ರಾಜ್ಯಕ್ಕೂ ಆಹ್ವಾನಿಸಿ ಪರಸ್ಪರ ಸೌಹಾರ್ದತೆಯನ್ನು

ತೋರಿಸಬೇಕೆಂದು ಕರೆಕೊಟ್ಟರಲ್ಲದೆ ನಮ್ಮ ರಾಜ್ಯದಲ್ಲಿ ಅವರು ನಡೆಸುವ ಕಾರ್ಯಕ್ರಮಗಳಲ್ಲಿ ಶೇಕಡಾ ಐವತ್ತರಷ್ಟಾದರೂ ಕನ್ನಡದ ಹಾಡುಗಳನ್ನು ಹೇಳುವಂತೆ ತಿಳಿಸಿದರು.

United Front of Kannada Associations In Bangalore

206, Chickkanna Gardens. Bangalore 4.

Gen. Secretary	Associate Secretary
M.Ramamurthy	M.V.Subbarao
Editor Kannada Yuvajana	M.V Varadaiah

Brother and sister artists, writers, and publicists,

We write to you following information that we are victims of a tirade engineered against us for the past four months by certain Tamil news papers apparently as a" reply" to the healthy campaign we have sponsored for succoring Kannada artists.

It is a pity that our detractors have given an anti Tamil colour to this movement of ours. It is a greater pity that some of them have preferred to dub this as an auxillary to the separatist movement launched by the DMK in Madras State. We should like to declare categorically that we are averse to any kind of separatism and are always prepared to fight this tendency tooth and nail. We have never seen eye to eye with the Dravida Munnetra Kazagam and we don't propose to gang up with them.

All our movement stands for is to make the life of the average Kannadiga endurable and to create a respectable place for him in his own land. Surely, there is nothing reprehensible in this. We have programmed to prevail upon he State Government to declare Kannada as the State language, adopt Kannada as the language of the courts and also as the medium of instruction in educational institutions and to rename the State as Karnataka.

You will surely agree that this is well within the bounds of rationalism and also that there is no vestige of hatred for any other

linguistic group or State discernible any where in this programme.

It may well be asked why we have signed out an old institution like the Ramaseva Mandali in Bangalore for our attack on the cultural front. This needs some explanation. Just to give you a background, it was the late Sri Bidaram Krishnappa, doyen of Karnataka Music of the State, who first initiated the habit of inviting musicians from Tamilnad to the State and created platform for them in his glorious institution, Sri Prasanna Sitarama Mandira, Mysore. It was also Sri Krishnappa who took the Vidwans from Tamilnad to the Mysore Palace honours. No less a man His Highness Sri Krishnaraja Wodeyar, of revered memory, presided over these "vidwathsabhas" and suitably honoured the visiting virtuosi. We are sure that this service done by the late Sri Krishnappa to his brother artistes is too precious to be so easily forgotten.

Another doyen, the late Sri Tiger Varadachariar, spent a good number of years of his fruitful life in Mysore and readily reciprocated Sri Krishnappa's fine gesture and introduced a large number of Mysore musicians to Tamilnad. These, indeed, were days one would fondly cherish in one's memory.

But to the dismay of everybody interested in healthy interstate cultural relations, after the demise of the late Sri Krishnappa, the Gayana Samaja of Bangalore preferred a step-motherly attitude towards local artists flouting the noble traditions set up by the two doyens. The local artist became a pariah in the Samaja and the subsequent office-bearers of the institution faithfully took up the strings of this unfortunate hate-campaign.

While this happened in Bangalore, it found its echo in the Prasanna Sita Rama Mandira at Mysore also.

These two institutions then found a blind follower in the Ramaseva Mandali of Chamarajpet, Bangalore, a tiny group of people who started conducting music performances during the Ramanavami season in a small way. This institution took upon

itself to throw every Kannada artist overboard. Quite naturally, this suicidal policy adopted by this commercial-minded organization run in the name of art provoked the wrath of the local press and music lovers alike and the strong resentment of the attitude poured into the press in a stream. When, in his presidential address at the 42nd Kannada Sahitya Sammelana in Udupi in December 1960, Sri A.N.Krishna Rao , a famed Kannada writer and a member of our advisory board, made a pointed reference to this organized affront to Kannada art, the press widely hailed him. This show of righteous indignation came to a logical culmination when, at a conference of Bangalore Kannadigas, one of the most successful conferences convened in the in recent years, a strongly-worded resolution was passed crying halt to the policy persued by the Mandali, which, incidentally, has now grown into a big money-making cultural organization.

We requested the Mandali and similar institutions not to do away with the services of outside artistes - and we want this to be very clearly understood- but only to invite both local and outside artists on a fifty-fifty basis.

We should thankfully acknowledge here that the Rama Seva Samithi in another area of the city, Sheshadripuram, which happens to be much more well organised and more sincere institution than the Mandali has readily responded to our request and is treating both Mysore and outside artistes alike.

But not so our friends from the Mandali. They believe in their dogged obstinacy and have refused to budge from their most unreasonable stand. This being the case, we had no other alternative but to stage a peaceful demonstration against them and this we did on April 27. We should like you to get this clear, that we never resorted to any violence but only led a procession through the main streets of the city with black flags and banners. A public meeting was also held without any untoward incident. There was no reason whatever for our Mandali friends to get panicky, but

they did, and imported into the pandal precincts a whole posse of policemen, fully armed and led by senior officers. We were called hooligans and communists, but we never deserved this blame. In fact, nothing whatever happened from our end and Smt. Subbalakshmi did not have to stop singing even for a single second. Meanwhile, we had successfully lodged our peaceful protest.

This is not a piece of self aggrandisement, but we can assure you that our organization is not an offshoot of some disgruntled Kannadigas, as some of those who don't see eye to eye with us have made out. Ours is an organised, concerted movement voicing the concern, indignation and chagrin, of Kannadigas in their hour of agony. Our organization, far from being monoplised by communists and hooligans, is composed of some of the most outstanding men of letters, musicians, journalists, students, factory workers, corporators and members of the State Legislature. There are also office-bearers of over 50 organisations fighting for the legitimate rights and aspirations of the 20 million Kannadigas,

We need no hold apology for the cause we have espoused. But we would like to make one point very clear. We are not at all opposed to Tamil Artists performing on our soil - infact, they are most welcome - we are not prepared to tolerate the superior airs they chose to sport. This is most insulting and not even the traditionally tolerant Kannadiga can put up with this. The Tamil artists should bear in mind that it is their duty to share the destiny of their brother artists in Karnataka. They have no right to trample on the sentiment of the Kannada people by associating themselves with blatantly mercenary organissations.

We tell the Tamil artists: Don't have anything to do with such institutions: reciprocate the goodwill of Kannadigas by inviting Kannada artists in large numbers to your State and when you sing in our State, see that 50 percent of your repertoire consists

of Kannada songs.

We are sure this lengthy explanation convince you about the real facts of the case. All we are agitating for is the creation of a "live and let live" policy. After having said all this, would it be too presumptuous on our part to enlist your co-operation against oppression and low commercialism?

1st June 1962

ಕನ್ನಡ ಪತ್ರಿಕಾ ರಂಗದ ಭೀಷ್ಮ ಪಿತಾಮಹರೆನಿಸಿದ ಶ್ರೀ ತಿರುಮಲೆ ತಾತಾಚಾರ್ಯಶರ್ಮರವರು 6.6.1962ರಂದು ಪತ್ರಿಕೆಗೆ ಬರೆದ ಸುದೀರ್ಘವಾದ ಲೇಖನವೊಂದರಲ್ಲಿ ಕನ್ನಡಿಗರ ಪ್ರತಿಭಟನೆಗೆ ವಿರುದ್ಧವಾಗಿ ಕೆಲವರು ಬರೆದಿರುವ ಪತ್ರಗಳನ್ನು ಉಲ್ಲೇಖಿಸುತ್ತಾ ಬೆಂಗಳೂರಿನ ಕನ್ನಡ ಚಳುವಳಿ ಶ್ರೀಮತಿ ಸುಬ್ಬಲಕ್ಷ್ಮಿಯವರ ಸಂಗೀತ ಕಛೇರಿಯ ದಿನವೇ ನಡೆದ ಕಾರಣವನ್ನು ಸವಿವರವಾಗಿ ತಿಳಿಸಿ, ರಾಮಸೇವಾ ಮಂಡಳಿಯವರ ಹಟಮಾರಿತನದಿಂದ ಕಪ್ಪುಬಾವುಟ ಪ್ರದರ್ಶಿಸಬೇಕಾದ ಅನಿವಾರ್ಯತೆ ಉಂಟಾಯಿತೆಂದು ತಿಳಿಸಿದರು. ನಂತರ ಸ್ಕೌಟ್ ಮಂದಿರದ ಎದುರಿನ ಮೈದಾನದಲ್ಲಿ ಭಾಷಣಗಳು ನಡೆದಾಗ ತಾವೂ ಸಹ ಅದರಲ್ಲಿ ಪ್ರತ್ಯಕ್ಷವಾಗಿದ್ದುದನ್ನು ಉಲ್ಲೇಖಿಸಿ ಸಂಗೀತ ಕಛೇರಿಯು ಸಾಂಗವಾಗಿ ಸುಸೂತ್ರವಾಗಿ ನಡೆದುದನ್ನು ಪ್ರಸ್ತಾಪಿಸಿದರು.

ಸಂಯಕ್ತ ರಂಗದ ಅಧ್ವರ್ಯು ರಾಮಮೂರ್ತಿ

ಈ ಘಟನೆಯ ನಂತರ ಸಂಯುಕ್ತರಂಗದ ಆಶ್ರಯದಲ್ಲಿ ಬೆಂಗಳೂರಿನ ಹಲವಾರು ಭಾಗಗಳಲ್ಲಿ ಚಳುವಳಿಯ ಬಹಿರಂಗ ಸಭೆಗಳನ್ನು ನಡೆಸಲಾಯಿತು. ಈ ಎಲ್ಲ ಸಭೆಗಳಲ್ಲಿ ಶ್ರೀ ತಿರುಮಲೆ ತಾತಾಚಾರ್ಯ ಶರ್ಮ, ವೀರಕೇಸರಿ ಸೀತಾರಾಮಶಾಸ್ತ್ರಿಗಳು, ಅ.ನ.ಸುಬ್ಬರಾವ್, ಮೈಸು ಶೇಷಗಿರಿರಾವ್, ನಾ.ಕೃ.ಸತ್ಯನಾರಾಯಣ, ಬೆನಿ ಈಶ್ವರಪ್ಪ, ಮೈಸು ನಟರಾಜ, ಭಾರತೀಂದ್ರಸ್ವಾಮಿ, ಗೋ.ಅ.ನಾರಾಯಣ, ಸ.ಕೃ.ಸಂಪಂಗಿ ಮುಂತಾದವರು ಭಾಷಣಕಾರರಾಗಿರುತ್ತಿದ್ದರು. ಎಲ್ಲ ಸಂದರ್ಭಗಳಲ್ಲಿಯೂ ಮ.ರಾಮಮೂರ್ತಿಯವರ ಆವೇಶಭರಿತ ಮೊದಲಭಾಷಣವಾದರೆ

ಅನಕೃರವರು ಕೊನೆಯಲ್ಲಿ ತಮ್ಮ ವಿದ್ವತ್‌ಪೂರ್ಣ ಭಾಷಣದಿಂದ ಸಭಿಕರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದರು.

ಈ ಸಭೆಗಳು ಬೆಂಗಳೂರಿನಲ್ಲಿ ಹೆಚ್ಚು ಕನ್ನಡ ಮಾತನಾಡುವ ಪ್ರದೇಶಗಳಲ್ಲೇ ಅಲ್ಲದೇ ಜೋಗುಪಾಳ್ಯ, ರಾಮಚಂದ್ರಪುರ, ನಾಗಪ್ಪ ಬ್ಲಾಕ್ ಕಾಕ್ಸ್‌ಟೌನ್‌ನಂಥ ಹೆಚ್ಚು ತಮಿಳು ಮಾತನಾಡುವ ಜನಗಳಿದ್ದ ಪ್ರದೇಶಗಳಲ್ಲಿಯೂ ವ್ಯವಸ್ಥಿತವಾಗುತ್ತಿದ್ದವು.

ತಮಿಳುಭಾಷಿಕರೇ ಹೆಚ್ಚು ಸಂಖ್ಯೆಯಲ್ಲಿದ್ದ ಪ್ರದೇಶವೊಂದರಲ್ಲಿ ಸಂಯುಕ್ತ ರಂಗದ ಬಹಿರಂಗ ಸಭೆ ಏರ್ಪಡಿಸಲಾಗಿದ್ದ ಒಂದು ಸಂದರ್ಭ. ಆ ಸಮಯದಲ್ಲಿ ಪೊಲೀಸ್ ಅಧಿಕಾರಿಯೊಬ್ಬರು ಇದು ತಮಿಳು ಏರಿಯಾ ಇಲ್ಲಿ ಭಾಷಣ ಮಾಡಬೇಡಿ ಎಂದರು. ತಕ್ಷಣವೇ ರಾಮಮೂರ್ತಿಯವರು ಇದು ಕನ್ನಡದ ಊರು ನಮ್ಮ ದೇಶದ ರಾಜ್ಯಾಂಗದ ಪ್ರಕಾರ ಯಾರು ಎಲ್ಲಿ ಬೇಕಾದರೂ ವಾಸಮಾಡಬಹುದು, ಮಾತನಾಡಬಹುದು, ಇದು ತಮಿಳು ಪ್ರದೇಶ, ಕೇರಳಿಯರ ಪ್ರದೇಶ ಎಂದು ಬೆಂಗಳೂರಿನಲ್ಲಿ ಜಹಗೀರಿಯನ್ನು ಕೊಡಲು ನಿಮಗೆ ಯಾರು ಹೇಳಿದರು ಎಂದು ಕೇಳಿದರು.

ವೈಭವದ ರಾಜ್ಯೋತ್ಸವದ ಆಚರಣೆಗೆ ನಾಂದಿ

ಈ ಎಲ್ಲಾ ಬೆಳವಣಿಗೆಗಳಿಂದ ಜಾಗೃತಗೊಂಡ ಕನ್ನಡ ಜನತೆ ಅದರಲ್ಲಿಯೂ ಮುಖ್ಯವಾಗಿ ಕನ್ನಡ ಯುವಜನತೆ 1962ರಲ್ಲಿ ರಾಜ್ಯೋತ್ಸವವನ್ನು ಆಚರಿಸಬೇಕೆಂಬ ಸದುದ್ದೇಶದಿಂದ ಸಿದ್ಧತೆಗಳನ್ನು ಮಾಡಿದರು. ಆ ವರ್ಷವೇ ಭಾರತ ಚೀನಾ ಯುದ್ಧದಿಂದಾಗಿ ತುರ್ತು ಪರಿಸ್ಥಿತಿ ಇದ್ದುದರಿಂದ ಆ ಪ್ರಸ್ತಾಪವನ್ನು ಕೈಬಿಡಬೇಕಾಯಿತು. ಆದರೆ 1963ರ ಹೊತ್ತಿಗೆ ಪರಿಸ್ಥಿತಿ ಬದಲಾಯಿತು. ಹಾಗಾಗಿ ಆ ವರ್ಷ ಬೆಂಗಳೂರಿನ ಸುಭಾಷ್ ನಗರದಲ್ಲಿ ನಿರ್ಮಿತವಾದ (ಇಂದಿನ ಕೆಂಪೇಗೌಡ ಬಸ್ ನಿಲ್ದಾಣದ ಪ್ರದೇಶದಲ್ಲಿ) ಬನವಾಸಿ ನಗರದಲ್ಲಿ ನಗರದ ಎಲ್ಲಾ ಕನ್ನಡ ಸಂಘ ಸಂಸ್ಥೆಗಳ ಪ್ರಾತಿನಿಧಿಕಸಂಸ್ಥೆಯಾದ ಕರ್ನಾಟಕ ಸಂಯುಕ್ತ ರಂಗದಿಂದ ರಾಜ್ಯೋತ್ಸವವನ್ನು ಅತಿವೈಭವಯುತವಾಗಿ ಆಚರಿಸಲಾಯಿತು.

ಬನವಾಸಿ ನಗರದ ವಿದ್ಯಾರಣ್ಯ ಮಂಟಪದಲ್ಲಿ ಏಳು ಕುಶಾಲ

ತೋಪುಗಳನ್ನು ಹಾರಿಸುವುದರೊಂದಿಗೆ ಭುವನೇಶ್ವರಿಯ ಧ್ವಜಾರೋಹಣ ಮಾಡಿ ಉತ್ಸವಾಚರಣೆ ಆರಂಭವಾಯಿತು.

ಅನಂತರ ಸಹಸ್ರ ಸಹಸ್ರ ಜನ ಪಾಲ್ಗೊಂಡ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಹಾದುಬಂದಿತು. ನಗರದ ಲಿಬರ್ಟಿ ಚಿತ್ರ ಮಂದಿರದ ಶ್ರೀಮತಿ ಅಖ್ತರ್ ಬೇಗಂ ಅವರು ನೀಡಿದ್ದ ಕಾರಿನಲ್ಲಿ ಶಾಸಕ ಕಂದಾನಪ್ಪ ದೊಡ್ಡಮೇಟಿ ಹಾಗೂ ಅ.ನ. ಕೃಷ್ಣರಾಯರು ಉಪಸ್ಥಿತರಿದ್ದರು.


ಅನೇಕ ಸ್ತಬ್ಧಚಿತ್ರಗಳನ್ನು ಸಹಸ್ರಸಹಸ್ರಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಜಯಘೋಷದೊಂದಿಗೆ ಗುಂಪುಗುಂಪಾಗಿ ಸಾಗಿ ಬರುತ್ತಿದ್ದ ಕನ್ನಡಾಭಿಮಾನಿಗಳನ್ನು ನೋಡುವುದೇ ಕಣ್ಣಿಗೆ ಹಬ್ಬದಂತಿತ್ತು.

ಕೆಂಪೇಗೌಡ ರಸ್ತೆಯ ಅಡ್ಡಗಲಕ್ಕೂ ಬರುತ್ತಿದ್ದ ಯುವ ಜನರ ಗುಂಪಿನ ಉತ್ಸಾಹವನ್ನು ವೀಕ್ಷಿಸುವುದೇ ಆನಂದದಾಯಕವಾಗಿತ್ತು. ಮೆರವಣಿಗೆಯ ನೇತಾರರಾಗಿದ್ದ ರಾಮಮೂರ್ತಿಗಳು ಈ ವೈಭವಯುತ ಮೆರವಣಿಗೆಯನ್ನು ಜನತೆ ಹರ್ಷೋದ್ಗಾರ - ಸಂತೋಷ ಸಂಭ್ರಮದಿಂದ ವೀಕ್ಷಿಸುತ್ತ ತಾವೂ ಸಹ ಅದರಲ್ಲಿ ಪಾಲ್ಗೊಂಡು ಧನ್ಯತಾ ಭಾವವನ್ನು ಅನುಭವಿಸುತ್ತಿದ್ದರು.

ಆ ಸಮಯದಲ್ಲಿ ಅಲ್ಲಿಯ ಉಸ್ತುವಾರಿ ಹೊತ್ತಿದ್ದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ರಾಮಮೂರ್ತಿಯವರನ್ನು ಪಕ್ಕಕ್ಕೆ ಕರೆದು, ಸ್ನೇಹ ಮನೋಭಾವದ ಸಲಿಗೆಯಲ್ಲಿ ಮೆರವಣಿಗೆಯಲ್ಲಿ ಸಾಗಿ ಬರುತ್ತಿದ್ದವರನ್ನು ನಾಲ್ಕೈದು ಜನ ಸಾಲನ್ನಾಗಿ ಮಾಡಿ ಶಿಸ್ತಿನಿಂದ ಬರುವಂತೆ ನೋಡಿಕೊಳ್ಳಬೇಕೆಂದು ಸೂಚನೆ ಇತ್ತರು. ಆದರೆ ರಾಮಮೂರ್ತಿಯವರು ಆ ಅಧಿಕಾರಿಗೆ ಜನತೆ ಉತ್ಸಾಹದಿಂದ ಸಂತೋಷ ಸಂಭ್ರಮದಿಂದ ಬರುತ್ತಿದ್ದಾರೆ ಅವರ ಉತ್ಸಾಹಕ್ಕೆ ಭಂಗತರುವುದು ಬೇಡ ಎಂದು ನುಡಿದರು.

ಸುಭಾಷ್‌ನಗರದಲ್ಲಿ ಮೂರು ದಿನ ನಡೆದ ಆ ಸಮಾರಂಭ ಸಾಹಿತ್ಯ, ಸಂಗೀತ ಕಲೆಗಳ ಜಾತ್ರೆಯಂತಿತ್ತು. ವಿದ್ವನ್ಮಣಿಗಳು ಸಂಜೆಯಿಂದ ರಾತ್ರಿಯವರೆಗೆ ವಿದ್ವತ್‌ಪೂರ್ಣ ಭಾಷಣ ಹಾಗೂ ಮನರಂಜನೆಯ ಮಹಾಪೂರವನ್ನೇ ಹರಿಸಿದರು.

ರಾಜ್ಯೋತ್ಸವದ ಮೂರನೇ ಹಾಗೂ ಕೊನೆಯ ದಿನ 3.11.1963ರಂದು ನಡೆದ ಸಮಾವೇಶದಲ್ಲಿ ಕನ್ನಡ ಕುಲಪುರೋಹಿತ ಆಲೂರು ವೆಂಕಟರಾಯರು ಸಮಾರಂಭಕ್ಕೆ ಆಗಮಿಸಿ ಅತೀವ ಸಂತೋಷವನ್ನುಂಟುಮಾಡಿದರು. ಸುಮಾರು ಮೂವತ್ತುನಿಮಿಷಕ್ಕೂ ಮೀರಿ ತಮ್ಮ ಗದ್ಗದ ಕಂಠದಿಂದ ನೆರೆದಿದ್ದ ಜನ ಸಾಗರಕ್ಕೆ ಶುಭ ಸಂದೇಶವನ್ನು ನೀಡಿದರು. ಋಷಿಸದೃಶರಾದ ಅವರ ದರ್ಶನ ಎಲ್ಲರಲ್ಲಿಯೂ ಧನ್ಯತಾ ಭಾವವನ್ನುಂಟುಮಾಡಿತು. (ಈ ಸಮಾರಂಭವೇ ಆಲೂರರ ಜೀವಿತದ ಕೊನೆಯ ಸಮಾರಂಭವಾಗಿ ಅವರು ದಿನಾಂಕ 25.2.1964ರಂದು ಧಾರವಾಡದಲ್ಲಿ ನಿಧನರಾದರು).



ಶ್ರೀ ಆಲೂರರ ಸಂದೇಶ

"ಕನ್ನಡ ರಾಜ್ಯೋದ್ಯಯದ ಉತ್ಸವವು ರಾಜ್ಯ ಸರ್ಕಾರದ ಹಿರಿತನದಲ್ಲಿಯೇ ನೆರವೇರಬೇಕಾದದ್ದು ಅಗತ್ಯ ಮತ್ತು ಉಚಿತ. ಆ ರೀತಿಯಾಗಿ ಕೆಲವು ರಾಜ್ಯಗಳಲ್ಲಿ ನಡೆಯುತ್ತಿದೆ. ನಮ್ಮ ರಾಜ್ಯವೂ ಆ ಮಾದರಿಯನ್ನು ಅನುಸರಿಸಬೇಕು. ಅಂಥಕಾಲ ಬೇಗನೆ ಬರುವುದೆಂದು ನಾನು ಹಾರೈಸುತ್ತೇನೆ. ಸರ್ಕಾರ ಮಾಡದೇ ಇದ್ದರೆ ಜನತೆ ಆದರೂ ಅಂಥ ಕಾರ್ಯ ಮಾಡಬಹುದು. ಜನತೆಯ ಉತ್ಸಾಹ ಮಹಾಪೂರ. ಅದನ್ನು ಯಾರೂ ತಡೆಯಲಾರರು. ಬೆಂಗಳೂರಲ್ಲಿ ಕನ್ನಡ ರಾಜ್ಯೋದಯದ ಉತ್ಸಾಹ ಮಹಾಪೂರದಂತೆ ನಡೆಯುವುದನ್ನು ಕಂಡು ಆನಂದವಾಗುತ್ತಿದೆ. ಕರ್ನಾಟಕ ಜನತೆಯ ವಿಕಾಸಕ್ಕಾಗಿ, ಪ್ರಗತಿಗಾಗಿ, ಅಭಿವೃದ್ಧಿಗಾಗಿ ಕೆಲಸ ನಡೆಸುವ ಯಾವುದೇ ಸಂಘದಲ್ಲಿಯೂ ನನಗೆ ಆಸ್ಥೆಯಿದೆ. ನಿಮ್ಮ ಉತ್ಸಾಹ ಯಾವಾಗಲೂ ಮಹಾಪೂರದಂತೆ ಇರಲಿ. ಆದರೆ ಅದು ಒಳ್ಳೆ ವಿಚಾರಗಳ ವಿಕಾಸಕ್ಕಾಗಿ ಇರಲಿ. ವಿನಾಶಕ್ಕಾಗಿ ಬೇಡ. ಶ್ರೀ ಅ.ನ. ಕೃಷ್ಣರಾಯರು ಶ್ರೇಷ್ಠ ಸಾಹಿತಿಗಳು. ಮೇಲಾಗಿ ಆದರ್ಶ ಕನ್ನಡಿಗರು. ಅವರ ಹಿರಿತನದಲ್ಲಿ ಒಳ್ಳೇ ಕಾರ್ಯಗಳು ಹೂ ಬಿಡಲಿ ಹಣ್ಣು ಬಿಡಲಿ ಎಂದು ಹಾರೈಸುತ್ತೇನೆ".

ಈ ಮೂರು ದಿನಗಳ ವೈಭವದ ರಾಜ್ಯೋತ್ಸವವೇ ಮುಂದಿನ

ದಿನಗಳಲ್ಲಿ ರಾಜ್ಯದಾದ್ಯಂತ ಕನ್ನಡ ರಾಜ್ಯೋತ್ಸವವು ನಡೆಯಲು ನಾಂದಿಯಾಯಿತೆನ್ನಬಹುದು. ಅಚ್ಚುಕಟ್ಟಾಗಿ ಯಶಸ್ವಿಯಾಗಿ ನಡೆದ ಈ ರಾಜ್ಯೋತ್ಸವದ ಹಿಂದಿನ ಸಂಪೂರ್ಣ ಕ್ರಿಯಾಶಕ್ತಿ ಎಂದರೆ ರಾಮಮೂರ್ತಿಯವರೆಂದರೆ ಅತಿಶಯೋಕ್ತಿಯಾಗಲಾರದು.

ವೈಭವದ ಮೂರು ದಿನಗಳ ರಾಜ್ಯೋತ್ಸವದ ಆಚರಣೆಯ ಜಮಾ ಮತ್ತು ಖರ್ಚಿನ ಸಂಪೂರ್ಣ ವಿವರವನ್ನು ಕನ್ನಡ ಯುವ ಜನ ಪತ್ರಿಕೆಯಲ್ಲಿ (17–11–1963) ಸುದೀರ್ಘವಾಗಿ ರಾಮಮೂರ್ತಿಯವರು ಪ್ರಕಟಿಸಿದರು.

ಹಲವಾರು ಕನ್ನಡ ಸಂಘಗಳಿಂದ, ಕನ್ನಡಾಭಿಮಾನಿಗಳಿಂದ ಹಾಗೂ ಚಿತ್ರ ನಿರ್ಮಾಪಕರು ಹಂಚಿಕೆದಾರರು, ಮತ್ತು ಪ್ರದರ್ಶನಕಾರರಿಂದ ಅಷ್ಟೇ ಅಲ್ಲ, ಸಮಾರಂಭದ ಎರಡನೇ ಹಾಗೂ ಮೂರನೇ ತಾರೀಖುಗಳಂದು ಹುಂಡಿಯಿಂದ ಸಂಗ್ರಹಿಸಲಾದ ಹಣದ ಬಾಬತ್ತನ್ನು ವಿವರವಿವರವಾಗಿ ಪ್ರಕಟಿಸಿದರು. ಸಂಗ್ರಹವಾದ ಒಟ್ಟು ಮೊತ್ತ 6286 ರೂ 69 ಪೈಸೆ. ಅತ್ಯಧಿಕ ಹಣ ನೀಡಿದ ಸಂಘ 500 ರೂ ಹಾಗೂ ಕನಿಷ್ಠ ವಂತಿಗೆ ನೀಡಿದ 1 ರೂಗಳ ವಿವರನ್ನು ನೀಡಿದ ವಿವರ ಪಟ್ಟಿಯಲ್ಲಿದೆ.

ಖರ್ಚಿನ ಪಟ್ಟಿಯನ್ನು ಸಹ ಸವಿವರವಾಗಿ ನೀಡಿದ್ದು, ಒಟ್ಟು ಖರ್ಚು 6,238 ರೂ 25 ಪೈಸೆ ಎಂದು ಪ್ರಕಟಿಸಿದರು.

ಇದು ಸಾರ್ವಜನಿಕರಿಂದ ಸಂಗ್ರಹಿಸಲಾಗಿದ್ದ ಹಣದ ಬಗ್ಗೆ ರಾಮಮೂರ್ತಿಯವರಿಗಿದ್ದ ಜವಾಬ್ದಾರಿ ಹಾಗೂ ಕಳಕಳಿಯ ದ್ಯೋತಕವಾಗಿತ್ತು.

ರಾಜ್ಯೋತ್ಸವಕ್ಕೆ ಸಾರ್ವಜನಿಕ ರಜೆಯ ಘೋಷಣೆ

1956ರ ನವೆಂಬರ್ ಒಂದರಂದು ರಾಜ್ಯೋತ್ಸವವಾದರೂ ಅದು ಸಾರ್ವಜನಿಕ ಉತ್ಸವವಾಗಿ ರೂಪುಗೊಂಡದ್ದು 1963ರ ನಂತರವೇ. ಆದರೆ ಈ ವೈಭವದ ಉತ್ಸವಾಚರಣೆಗೆ ಸರ್ಕಾರದ ರಜೆಯ ಘೋಷಣೆ ಯಾಗಿರಲಿಲ್ಲ. ಇನ್ನು ಖಾಸಗಿ ಸಂಸ್ಥೆಗಳಲ್ಲಂತೂ ಇಲ್ಲವೇ ಇಲ್ಲ. ಈ ಬಗ್ಗೆ ಮನಗಂಡ ರಾಮಮೂರ್ತಿಯವರು ಈ ಸಂಭ್ರಮಾಚಾರಣೆಗೆ ಸರ್ಕಾರ ಸಾರ್ವಜನಿಕ ರಜೆಯನ್ನು ನೀಡಬೇಕೆಂದು ಯುವಜನ ಪತ್ರಿಕೆಯಲ್ಲಿ

ಬಲವಾಗಿ ಪ್ರತಿಪಾದಿಸಿದರು. ಆಗ್ರಹಪೂರಿತ ಲೇಖನಗಳನ್ನು ಬರೆದರು. ಆದರೆ ರಾಜ್ಯ ಸರ್ಕಾರ ಇದಕ್ಕೆ ಯಾವುದೇ ರೀತಿಯ ಸಕಾರಾತ್ಮಕ ಪ್ರತಿಕ್ರಿಯೆಯನ್ನು ನೀಡಲಿಲ್ಲ. ಸಾರ್ವಜನಿಕ ಅಭಿಪ್ರಾಯವೂ ಸಹ ಈ ಬೇಡಿಕೆಗೆ ಪೂರಕವಾಗಿ ರೂಪುಗೊಳ್ಳತೊಡಗಿತು. ಹಾಗಾಗಿ 1967ರಿಂದ ಪ್ರತಿವರ್ಷ ರಾಜ್ಯೋದಯ ದಿನವನ್ನು ಸರ್ಕಾರಿ ರಜೆಯನ್ನಾಗಿ ಘೋಷಿಸಿತು. ಇದರ ಫಲವಾಗಿ ಬಹಳಷ್ಟು ಕಾರ್ಖಾನೆಗಳೂ ಖಾಸಗೀ ಕ್ಷೇತ್ರಗಳಲ್ಲಿಯೂ ರಜಾದಿನವಾಗಿ ಘೋಷಿಸತೊಡಗಿದುವು.

ಸಂಯುಕ್ತರಂಗದ ಕನ್ನಡಪರ ಹೋರಾಟದಿಂದ ಹೆಚ್ಚು ಪ್ರಭಾವಿತ ವಾಗಿದ್ದೆಂದರೆ ಕನ್ನಡ ಚಿತ್ರರಂಗ. ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳೇ ದೊರಕದೆ, ಕನ್ನಡ ಚಿತ್ರಗಳ ಬಿಡುಗಡೆಗೆ ಹರಸಾಹಸ ಪಡಬೇಕಾಗಿತ್ತು. ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಅತ್ಯಧಿಕ ಚಿತ್ರಮಂದಿರಗಳು ಇದ್ದರೂ ಅವುಗಳಲ್ಲಿ ಪ್ರದರ್ಶನಗೊಳ್ಳುವ ಅವಕಾಶ ಕನ್ನಡ ಚಿತ್ರಗಳಿಗೆ ದೊರಕುವುದು ಅಪರೂಪವೇ ಆಗಿರುತ್ತಿತ್ತು. ಕೇವಲ ಹಿಂದಿ, ತಮಿಳು, ಮತ್ತು ತೆಲುಗು ಚಿತ್ರಗಳನ್ನೇ ಪ್ರದರ್ಶನ ಮಾಡುತ್ತಿದ್ದರು.

ರಾಜಕುಮಾರ್, ಜಿ.ವಿ.ಅಯ್ಯರ್, ಬಾಲಕೃಷ್ಣ, ನರಸಿಂಹರಾಜು ಮುಂತಾದವರು ಸೇರಿಕೊಂಡು ಸ್ಥಾಪಿಸಿದ್ದ ಕನ್ನಡ ಕಲಾವಿದರು ಎಂಬ ನಿರ್ಮಾಣ ಸಂಸ್ಥೆಯಿಂದ ತಯಾರಾಗಿದ್ದ ರಣಧೀರ ಕಂಠೀರವ ಎಂಬ ಚಲನಚಿತ್ರಕ್ಕೆ ಉತ್ತಮ ಚಿತ್ರಮಂದಿರ ಸಿಕ್ಕಲೇ ಇಲ್ಲ. ಈ ಚಿತ್ರ ಕನ್ನಡದ 100ನೇ ವಾಕ್ಚಿತ್ರವಾಗಿದ್ದು ಒಂದು ವಿಶೇಷ ಸಂಗತಿಯಾದರೆ, ಮತ್ತೊಂದು ವಿಶೇಷ ಇದು ಕನ್ನಡದ ಮೊದಲ ಐತಿಹಾಸಿಕ ಚಿತ್ರವೂ ಆಗಿತ್ತು. ಹಿಮಾಲಯ ಚಿತ್ರಮಂದಿರದಲ್ಲಿ ಅದನ್ನು ಪ್ರದರ್ಶಿಸಬೇಕಾದ ಅನಿವಾರ್ಯತೆ ಯುಂಟಾಗಿತ್ತು. ಆ ಸಂದರ್ಭದಲ್ಲಿ ಕನ್ನಡ ಚಳುವಳಿಗಾರರೆಲ್ಲ ಥಿಯೇಟರ್‌ಗಳ ಮುಂದೆ ಪ್ರತಿಭಟನೆ ನಡೆಸಬೇಕಾಗಿ ಬಂದಿತು.

ಅಂದಿನ ದಿನಗಳಲ್ಲಿ ಕೆಂಪೇಗೌಡ ರಸ್ತೆಯ ಪ್ರಮುಖ ಚಿತ್ರಮಂದಿರದ ಮಾಲೀಕರಂತೂ ತಾವು ಕನ್ನಡ ಚಿತ್ರಗಳನ್ನು ತಮ್ಮ ಚಿತ್ರಮಂದಿರದಲ್ಲಿ ಪ್ರದರ್ಶಿಸುವುದೇ ಇಲ್ಲ ಎಂಬ ಹಠ ತೊಟ್ಟಿದ್ದ

ಚಿತ್ರಮಂದಿರದ ಮಾಲೀಕರ ಈ ಧೋರಣೆಯನ್ನು ತೀವ್ರವಾಗಿ ಪ್ರತಿಭಟಿಸಿದ ಚಳುವಳಿಗಾರರು ಚಿತ್ರಮಂದಿರಗಳ ಮುಂದೆ ಪ್ರತಿಭಟನಾ ಪ್ರದರ್ಶನವನ್ನು ಕೈಗೊಂಡರು. ಇಂದಿನ ಅಲಂಕಾರ್ ಕಾಂಪ್ಲೆಕ್ಸ್‌ನಲ್ಲಿ ಇದ್ದ ಅಂದಿನ ಅಲಂಕಾರ್ ಚಿತ್ರ ಮಂದಿರ ಒಂದು ಪ್ರತಿಷ್ಠಿತ ಚಿತ್ರ ಮಂದಿರ ಎಂದು ಹೆಸರು ಪಡೆದಿತ್ತು. ಅಲ್ಲಿ ಚಿತ್ರಪ್ರದರ್ಶನದ ಅವಕಾಶ ದೊರೆತರೆ ಅದು ಹೆಮ್ಮೆಯ ಪ್ರತೀಕವೆಂದು ಭಾವಿಸಲಾಗಿತ್ತು. ಅಂತಹ ಚಿತ್ರ ಮಂದಿರದಲ್ಲಿ ಕನ್ನಡ ಚಿತ್ರವನ್ನು ಪ್ರದರ್ಶಿಸಬೇಕೆಂದು ಕನ್ನಡಚಿತ್ರರಸಿಕರು ಒತ್ತಾಯಿಸಿದಾಗ ಆ ಚಿತ್ರ ಮಂದಿರದ ಮಾಲೀಕರು ಕನ್ನಡ ಚಿತ್ರಪ್ರದರ್ಶನ ಮಾಡುವ ಬದಲು ಯಾವುದಾದರೂ ಗೋಡೌನ್ ಮಾಡುತ್ತೇನೆ ಎಂದು ಪ್ರತಿಕ್ರಿಯಿಸಿದರು. ಪ್ರದರ್ಶನದ ಮುಂದಾಳತ್ವ ವಹಿಸಿದ್ದ ರಾಮಮೂರ್ತಿಯವರು "ನೀನು ಕನ್ನಡಚಿತ್ರವನ್ನು ಪ್ರದರ್ಶನಮಾಡದೇ ಹೋದರೆ ನನ್ನ ಹೆಂಡತಿಯ ಮಾಂಗಲ್ಯವನ್ನು ಗೂಟಕ್ಕೆ ಕಟ್ಟಿ ಬರುತ್ತೇನೆ" ಎಂದು ಖಂಡಾಖಂಡಿತವಾಗಿ ಹೇಳಿದರು.

ಅದೇ ರೀತಿ ಪ್ರಭಾತ್ ಚಿತ್ರಮಂದಿರದ ಧೋರಣೆಯೂ ಕನ್ನಡ ವಿರೋಧಿ ಆಗಿತ್ತು. ಅಲ್ಲಿಯೂ ಸಹ ಹಿಂದಿಚಿತ್ರಗಳನ್ನು ಪ್ರದರ್ಶಿಸಲಾಗುತ್ತಿತ್ತು.

ಯಾವಾಗ ಕನ್ನಡ ಚಳುವಳಿ ಏರುಗತಿಯಲ್ಲಿ ನಡೆಯಲು ಆರಂಭವಾಯಿತೋ ಆಗ ಚಳುವಳಿಗಾರರ ಹೋರಾಟಕ್ಕೆ ಚಿತ್ರಮಂದಿರದ ಮಾಲೀಕರು ಮಣಿಯಲೇಬೇಕಾಯಿತು. ತಮ್ಮ ಮೊಂಡುತನವನ್ನು ಹಠಮಾರಿ ಧೋರಣೆಯನ್ನು ಬದಿಗೊತ್ತಿ ಕನ್ನಡ ಚಿತ್ರವನ್ನು ಪ್ರದರ್ಶಿಸಲೇ ಬೇಕಾದ ಅನಿವಾರ್ಯತೆ ಅವರಿಗುಂಟಾಯಿತು. ಅಲ್ಲದೆ ರಾಜ್ಯೋತ್ಸವದ ಸಂದರ್ಭದಲ್ಲಿ ಎಲ್ಲಾ ಚಿತ್ರಮಂದಿರಗಳಲ್ಲೂ ಕನ್ನಡ ಚಿತ್ರಗಳನ್ನು ಕಡ್ಡಾಯ ವಾಗಿ ಪ್ರದರ್ಶಿಸಬೇಕಾದ ಅಲಿಖಿತ ನಿಯಮವುಂಟಾಯಿತು. ಮತ್ತೊಂದು ಬೆಳವಣಿಗೆಯೆಂದರೆ ಯಾವುದೇ ಹೊಸ ಚಿತ್ರಮಂದಿರ ಆರಂಭಗೊಂಡರೂ ಅದರಲ್ಲಿ ಪ್ರಪ್ರಥಮವಾಗಿ ಕನ್ನಡ ಚಿತ್ರವನ್ನು ಕಡ್ಡಾಯವಾಗಿ ಪ್ರದರ್ಶಿಸಲೇ ಬೇಕು ಎಂಬ ನಿಯಮ ಜಾರಿಗೆ ಬಂದಿತು.

ಕನ್ನಡ ಚಿತ್ರಗಳಲ್ಲಿ ಕನ್ನಡದ ಅಭಿಮಾನವನ್ನು ಮೆರೆಸುವ ಗೀತೆಗಳು, ಸಂಭಾಷಣೆಗಳು ಚಿತ್ರಿತವಾಗತೊಡಗಿದವು. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಚಿತ್ರಗಳು ತಯಾರಾಗತೊಡಗಿದವು. ನಟನಟಿಯರಿಗೆ, ಚಿತ್ರ ಸಾಹಿತಿಗಳಿಗೆ, ತಂತ್ರಜ್ಞರಿಗೆ ಹೆಚ್ಚು ಹೆಚ್ಚಿನ ಅವಕಾಶಗಳು ದೊರಕಿದವು.

ಈ ಕಾಲದಲ್ಲಿ ಕನ್ನಡ ಚಿತ್ರರಂಗವನ್ನು ಅಂಟಿದ್ದ ಮತ್ತೊಂದು ಪಿಡುಗೆಂದರೆ ಡಬ್ಬಿಂಗ್ ಚಿತ್ರಗಳ ಹಾವಳಿ. ಈ ಚಿತ್ರಗಳಿಂದ ಕನ್ನಡದ ಮೂಲ ಚಿತ್ರಗಳಿಗೆ ಧಕ್ಕೆ ಬಂದು ಕನ್ನಡ ಕಲಾವಿದರು ಅವಕಾಶ ವಂಚಿತರಾಗಿ ನಿರುದ್ಯೋಗಿಗಳಾಗಬೇಕಾದ ಪರಿಸ್ಥಿತಿ ಉದ್ಭವಿಸಿತ್ತು.

ಇಂತಹ ಸಮಯದಲ್ಲಿ ಕನ್ನಡ ಚಳುವಳಿಯ ಮತ್ತೊಂದು ರೂಪವಾಗಿ ಡಬ್ಬಿಂಗ್ ವಿರೋಧಿ ಚಳುವಳಿಯು ಆರಂಭವಾಯಿತು.

ಬಿ.ಎ. ಅರಸುಕುಮಾರ್ ಮತ್ತು ಅವರ ಸಂಗಡಿಗರು ಈ ಬಗ್ಗೆ ತೀವ್ರಹೋರಾಟವನ್ನು ನಡೆಸಿ, ಕನ್ನಡ ಕಲಾವಿದರಿಗೆ, ತಂತ್ರಜ್ಞರಿಗೆ ಮಾರಕವಾದ ಕನ್ನಡ ಪ್ರತಿಭೆಯನ್ನು ಕತ್ತು ಹಿಸುಕಿ ಸಾಯಿಸಿದ ಈ ಡಬ್ಬಿಂಗ್ ಹಾವಳಿಯ ವಿರುದ್ಧ ತೀವ್ರವಾದ ಹೋರಾಟವನ್ನೇ ಆರಂಭಿಸಿದರು.

ಸಂಯುಕ್ತರಂಗವು ಮೊದಲಿನಿಂದಲೂ ಕನ್ನಡಚಿತ್ರರಂಗ, ಕನ್ನಡ ಕಲಾವಿದರ ಏಳಿಗೆ ಬಗ್ಗೆ ಕಾಳಜಿವಹಿಸಿದೆ. ಹಾಗೂ ಡಬ್ಬಿಂಗ್ ವಿರುದ್ಧದ ನಿರ್ಣಯಗಳನ್ನು ಕೈಗೊಂಡಿದೆ. ಚಳುವಳಿಯ ಮುಂಚೂಣಿಯಲ್ಲಿದ್ದ ಎಲ್ಲ ನಾಯಕರು ಈ ಹೋರಾಟಕ್ಕೆ ಬೆಂಬಲವಿತ್ತರು. ಎಲ್ಲೋ ಕೆಲವು ಬೆರಳೆಣಿಕೆಯಲ್ಲಿದ್ದ ಡಬ್ಬಿಂಗ್ ಚಿತ್ರಗಳನ್ನು ರಚಿಸುತ್ತಿದ್ದ ಚಿತ್ರ ಸಾಹಿತಿಗಳು ಹಾಗೂ ಕಂಠದಾನ ಕಲಾವಿದರು ಮಾತ್ರ ಡಬ್ಬಿಂಗ್ ಪರವಾಗಿದ್ದರು.

ಡಬ್ಬಿಂಗ್ ವಿರೋಧಿ ಅಲೆ ತೀವ್ರವಾಗಿ ಡಬ್ಬಿಂಗ್ ಚಿತ್ರಗಳು ಸಂಪೂರ್ಣವಾಗಿ ನೆಲ ಕಚ್ಚುವುದರೊಂದಿಗೆ ಕನ್ನಡ ಚಿತ್ರಪ್ರಗತಿಗೆ ಮಾರಕವಾಗಿದ್ದ ಅನಿಷ್ಟ ಪದ್ಧತಿ ಹಾಗೆಯೇ ಕಮರಿ ಹೋಯಿತು.

ಚಳುವಳಿಗಾರರ ಡಬ್ಬಿಂಗ್ ವಿರೋಧಿ ಹೋರಾಟದಿಂದ ಅವುಗಳ ಪ್ರದರ್ಶನಕ್ಕೆ ಸಂಚಕಾರಬಂದು ಕನ್ನಡಚಿತ್ರಗಳಿಗೆ ಉತ್ತೇಜನ ದೊರಕಲಾರಂಭಿಸಿತು.

ಅರವತ್ತರ ದಶಕದ ಚಳುವಳಿಯಿಂದ ಉಂಟಾದ ಪ್ರಭಾವವು ಬೆಂಗಳೂರಿನಲ್ಲಿ ಕನ್ನಡದ ವಾತಾವರಣಕ್ಕೆ ಕನ್ನಡದ ಬೆಳವಣಿಗೆಗೆ, ಕನ್ನಡದ ಉಳಿವಿಗೆ ಬಹಳಷ್ಟು ಇಂಬು ಕೊಟ್ಟಿತೆಂದು ಧಾರಾಳವಾಗಿ ಹೇಳಬಹುದು.

ನಾಮಫಲಕಗಳಲ್ಲಿ ಮರೆಯಾಗಿದ್ದ, ಇದ್ದರೂ ಎಲ್ಲೋ ಒಂದು ಮೂಲೆಯಲ್ಲಿ ಕಾಟಾಚಾರಕ್ಕೆಂದು ಬರೆಯಲ್ಪಡುತ್ತಿದ್ದ, ಕನ್ನಡ ಪ್ರಧಾನವಾಗಿ ಕಾಣಲಾರಂಭಿಸಿತು.

ನಗರದ ಹಲವಾರು ಪ್ರಮುಖ ರಸ್ತೆಗಳಿಗೆ ಪುನರ್‌ನಾಮಕರಣವಾಗಿ ಕನ್ನಡದ ಹೆಸರುಗಳು ಕಾಣತೊಡಗಿದವು. ಪ್ರಮುಖವಾಗಿ ಹಾರ್ಡಿಂಜ್ ರಸ್ತೆ ಎಂದು ಕರೆಯಲ್ಪಡುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ರಸ್ತೆ ಪಂಪ ಮಹಾಕವಿ ರಸ್ತೆ ಎಂದಾದರೆ, ಸೆನೊಟಾಫ್ ರಸ್ತೆ ಎಂದು ಹೆಸರಾಗಿದ್ದ ರಿಸರ್ವ್ ಬ್ಯಾಂಕ್ ರಸ್ತೆಗೆ ನೃಪತುಂಗ ರಸ್ತೆ ಎಂದು ಹೆಸರಿಸಲಾಯಿತು.

ಬೆಂಗಳೂರಿನ ನಗರ ಪಾಲಿಕೆ ಉದ್ಯಾನವನಗಳಲ್ಲಿ ಶನಿವಾರ ಭಾನುವಾರಗಳಂದು ನಗರ ಪಾಲಿಕೆಯಿಂದ ವಾದ್ಯಗೋಷ್ಠಿಗಳನ್ನು ಆಯೋಜಿಸಲಾಗುತ್ತಿತ್ತು. ಆದರೆ ಅಲ್ಲಿಯೂ ಸಹ ವಾದ್ಯಗೋಷ್ಠಿಯವರು ಹಾಡುತ್ತಿದ್ದುದು ಹಿಂದಿ, ತೆಲುಗು, ತಮಿಳು ಚಿತ್ರಗಳ ಗೀತೆಗಳನ್ನು, ಕನ್ನಡದ ಒಂದೂ ಗೀತೆಯನ್ನೂ ಸಹ ಹಾಡುತ್ತಿರಲಿಲ್ಲ. ಕನ್ನಡ ಹೋರಾಟಗಾರರು ಅಂತಹ ಕಡೆಗಳಲ್ಲಿ ಪ್ರತಿಭಟಿಸಿ ಕನ್ನಡಗೀತೆಗಳನ್ನು ಹಾಡಲು ಒತ್ತಾಯಿಸುತ್ತಿದ್ದರು. ಅದರ ಫಲವಾಗಿ ಕನ್ನಡ ಗೀತೆಗಳನ್ನು ಕೇಳುವಂತಾಯಿತು.

ಕನ್ನಡ ಚಳುವಳಿಯ ಕಾವು ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಿದ್ದರಿಂದ ಕನ್ನಡ ಚಿತ್ರಗಳ ಸಂಪಾದನೆ, ಹಿಂದಿಗಿಂತ ಉತ್ತಮಗೊಂಡು. ಹೆಚ್ಚು ಹೆಚ್ಚು ಚಿತ್ರಗಳ ನಿರ್ಮಾಣಕ್ಕೆ ಅನುಕೂಲವಾಯಿತು.

ಇದೇ ಸಂದರ್ಭದಲ್ಲಿ ನಿರ್ಮಾಪಕರ ಒಲವು ಕನ್ನಡ ಕಾದಂಬರಿಗಳತ್ತ ಹರಿದು ಕಾದಂಬರಿ ಆಧಾರಿತ ಚಿತ್ರಗಳು ನಿರ್ಮಾಣಗೊಂಡು. ಚಿತ್ರಗಳಲ್ಲಿ ಕನ್ನಡತನ ಕಾಣಲಾರಂಭಿಸಿತು. ಕೃಷ್ಣಮೂರ್ತಿ ಪುರಾಣಿಕರ ಜನಪ್ರಿಯ ಕಾದಂಬರಿ ಧರ್ಮದೇವತೆಯನ್ನು ಆಧರಿಸಿ ಕರುಣೆಯೇ

ಕನ್ನಡ ಚಿತ್ರಗಳಲ್ಲಿ ಕನ್ನಡದ ಅಭಿಮಾನವನ್ನು ಮೆರೆಸುವ ಗೀತೆಗಳು, ಸಂಭಾಷಣೆಗಳು ಚಿತ್ರಿತವಾಗತೊಡಗಿದವು. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಚಿತ್ರಗಳು ತಯಾರಾಗತೊಡಗಿದವು. ನಟನಟಿಯರಿಗೆ, ಚಿತ್ರ ಸಾಹಿತಿಗಳಿಗೆ, ತಂತ್ರಜ್ಞರಿಗೆ ಹೆಚ್ಚು ಹೆಚ್ಚಿನ ಅವಕಾಶಗಳು ದೊರಕಿದವು.

ಈ ಕಾಲದಲ್ಲಿ ಕನ್ನಡ ಚಿತ್ರರಂಗವನ್ನು ಅಂಟಿದ್ದ ಮತ್ತೊಂದು ಪಿಡುಗೆಂದರೆ ಡಬ್ಬಿಂಗ್ ಚಿತ್ರಗಳ ಹಾವಳಿ. ಈ ಚಿತ್ರಗಳಿಂದ ಕನ್ನಡದ ಮೂಲ ಚಿತ್ರಗಳಿಗೆ ಧಕ್ಕೆ ಬಂದು ಕನ್ನಡ ಕಲಾವಿದರು ಅವಕಾಶ ವಂಚಿತರಾಗಿ ನಿರುದ್ಯೋಗಿಗಳಾಗಬೇಕಾದ ಪರಿಸ್ಥಿತಿ ಉದ್ಭವಿಸಿತ್ತು.

ಇಂತಹ ಸಮಯದಲ್ಲಿ ಕನ್ನಡ ಚಳುವಳಿಯ ಮತ್ತೊಂದು ರೂಪವಾಗಿ ಡಬ್ಬಿಂಗ್ ವಿರೋಧಿ ಚಳುವಳಿಯು ಆರಂಭವಾಯಿತು.

ಬಿ.ಎ. ಅರಸುಕುಮಾರ್ ಮತ್ತು ಅವರ ಸಂಗಡಿಗರು ಈ ಬಗ್ಗೆ ತೀವ್ರಹೋರಾಟವನ್ನು ನಡೆಸಿ, ಕನ್ನಡ ಕಲಾವಿದರಿಗೆ, ತಂತ್ರಜ್ಞರಿಗೆ ಮಾರಕವಾದ ಕನ್ನಡ ಪ್ರತಿಭೆಯನ್ನು ಕತ್ತು ಹಿಸುಕಿ ಸಾಯಿಸಿದ ಈ ಡಬ್ಬಿಂಗ್ ಹಾವಳಿಯ ವಿರುದ್ಧ ತೀವ್ರವಾದ ಹೋರಾಟವನ್ನೇ ಆರಂಭಿಸಿದರು.

ಸಂಯುಕ್ತರಂಗವು ಮೊದಲಿನಿಂದಲೂ ಕನ್ನಡಚಿತ್ರರಂಗ, ಕನ್ನಡ ಕಲಾವಿದರ ಏಳಿಗೆ ಬಗ್ಗೆ ಕಾಳಜಿವಹಿಸಿದೆ. ಹಾಗೂ ಡಬ್ಬಿಂಗ್ ವಿರುದ್ಧದ ನಿರ್ಣಯಗಳನ್ನು ಕೈಗೊಂಡಿದೆ. ಚಳುವಳಿಯ ಮುಂಚೂಣಿಯಲ್ಲಿದ್ದ ಎಲ್ಲ ನಾಯಕರು ಈ ಹೋರಾಟಕ್ಕೆ ಬೆಂಬಲವಿತ್ತರು. ಎಲ್ಲೋ ಕೆಲವು ಬೆರಳೆಣಿಕೆಯಲ್ಲಿದ್ದ ಡಬ್ಬಿಂಗ್ ಚಿತ್ರಗಳನ್ನು ರಚಿಸುತ್ತಿದ್ದ ಚಿತ್ರ ಸಾಹಿತಿಗಳು ಹಾಗೂ ಕಂಠದಾನ ಕಲಾವಿದರು ಮಾತ್ರ ಡಬ್ಬಿಂಗ್ ಪರವಾಗಿದ್ದರು.

ಡಬ್ಬಿಂಗ್ ವಿರೋಧಿ ಅಲೆ ತೀವ್ರವಾಗಿ ಡಬ್ಬಿಂಗ್ ಚಿತ್ರಗಳು ಸಂಪೂರ್ಣವಾಗಿ ನೆಲ ಕಚ್ಚುವುದರೊಂದಿಗೆ ಕನ್ನಡ ಚಿತ್ರಪ್ರಗತಿಗೆ ಮಾರಕವಾಗಿದ್ದ ಅನಿಷ್ಟ ಪದ್ಧತಿ ಹಾಗೆಯೇ ಕಮರಿ ಹೋಯಿತು.

ಚಳುವಳಿಗಾರರ ಡಬ್ಬಿಂಗ್ ವಿರೋಧಿ ಹೋರಾಟದಿಂದ ಅವುಗಳ ಪ್ರದರ್ಶನಕ್ಕೆ ಸಂಚಕಾರಬಂದು ಕನ್ನಡಚಿತ್ರಗಳಿಗೆ ಉತ್ತೇಜನ ದೊರಕಲಾರಂಭಿಸಿತು.

ಅರವತ್ತರ ದಶಕದ ಚಳುವಳಿಯಿಂದ ಉಂಟಾದ ಪ್ರಭಾವವು ಬೆಂಗಳೂರಿನಲ್ಲಿ ಕನ್ನಡದ ವಾತಾವರಣಕ್ಕೆ ಕನ್ನಡದ ಬೆಳವಣಿಗೆಗೆ, ಕನ್ನಡದ ಉಳಿವಿಗೆ ಬಹಳಷ್ಟು ಇಂಬು ಕೊಟ್ಟಿತೆಂದು ಧಾರಾಳವಾಗಿ ಹೇಳಬಹುದು.

ನಾಮಫಲಕಗಳಲ್ಲಿ ಮರೆಯಾಗಿದ್ದ, ಇದ್ದರೂ ಎಲ್ಲೋ ಒಂದು ಮೂಲೆಯಲ್ಲಿ ಕಾಟಾಚಾರಕ್ಕೆಂದು ಬರೆಯಲ್ಪಡುತ್ತಿದ್ದ, ಕನ್ನಡ ಪ್ರಧಾನವಾಗಿ ಕಾಣಲಾರಂಭಿಸಿತು.

ನಗರದ ಹಲವಾರು ಪ್ರಮುಖ ರಸ್ತೆಗಳಿಗೆ ಪುನರ್‌ನಾಮಕರಣವಾಗಿ ಕನ್ನಡದ ಹೆಸರುಗಳು ಕಾಣತೊಡಗಿದವು. ಪ್ರಮುಖವಾಗಿ ಹಾರ್ಡಿಂಜ್ ರಸ್ತೆ ಎಂದು ಕರೆಯಲ್ಪಡುತ್ತಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ರಸ್ತೆ ಪಂಪ ಮಹಾಕವಿ ರಸ್ತೆ ಎಂದಾದರೆ, ಸೆನೊಟಾಫ್ ರಸ್ತೆ ಎಂದು ಹೆಸರಾಗಿದ್ದ ರಿಸರ್ವ್ ಬ್ಯಾಂಕ್ ರಸ್ತೆಗೆ ನೃಪತುಂಗ ರಸ್ತೆ ಎಂದು ಹೆಸರಿಸಲಾಯಿತು.

ಬೆಂಗಳೂರಿನ ನಗರ ಪಾಲಿಕೆ ಉದ್ಯಾನವನಗಳಲ್ಲಿ ಶನಿವಾರ ಭಾನುವಾರಗಳಂದು ನಗರ ಪಾಲಿಕೆಯಿಂದ ವಾದ್ಯಗೋಷ್ಠಿಗಳನ್ನು ಆಯೋಜಿಸಲಾಗುತ್ತಿತ್ತು. ಆದರೆ ಅಲ್ಲಿಯೂ ಸಹ ವಾದ್ಯಗೋಷ್ಠಿಯವರು ಹಾಡುತ್ತಿದ್ದುದು ಹಿಂದಿ, ತೆಲುಗು, ತಮಿಳು ಚಿತ್ರಗಳ ಗೀತೆಗಳನ್ನು, ಕನ್ನಡದ ಒಂದೂ ಗೀತೆಯನ್ನೂ ಸಹ ಹಾಡುತ್ತಿರಲಿಲ್ಲ. ಕನ್ನಡ ಹೋರಾಟಗಾರರು ಅಂತಹ ಕಡೆಗಳಲ್ಲಿ ಪ್ರತಿಭಟಿಸಿ ಕನ್ನಡಗೀತೆಗಳನ್ನು ಹಾಡಲು ಒತ್ತಾಯಿಸುತ್ತಿದ್ದರು. ಅದರ ಫಲವಾಗಿ ಕನ್ನಡ ಗೀತೆಗಳನ್ನು ಕೇಳುವಂತಾಯಿತು.

ಕನ್ನಡ ಚಳುವಳಿಯ ಕಾವು ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಿದ್ದರಿಂದ ಕನ್ನಡ ಚಿತ್ರಗಳ ಸಂಪಾದನೆ, ಹಿಂದಿಗಿಂತ ಉತ್ತಮಗೊಂಡು, ಹೆಚ್ಚು ಹೆಚ್ಚು ಚಿತ್ರಗಳ ನಿರ್ಮಾಣಕ್ಕೆ ಅನುಕೂಲವಾಯಿತು.

ಇದೇ ಸಂದರ್ಭದಲ್ಲಿ ನಿರ್ಮಾಪಕರ ಒಲವು ಕನ್ನಡ ಕಾದಂಬರಿಗಳತ್ತ ಹರಿದು ಕಾದಂಬರಿ ಆಧಾರಿತ ಚಿತ್ರಗಳು ನಿರ್ಮಾಣಗೊಂಡು. ಚಿತ್ರಗಳಲ್ಲಿ ಕನ್ನಡತನ ಕಾಣಲಾರಂಭಿಸಿತು. ಕೃಷ್ಣಮೂರ್ತಿ ಪುರಾಣಿಕರ ಜನಪ್ರಿಯ ಕಾದಂಬರಿ ಧರ್ಮದೇವತೆಯನ್ನು ಆಧರಿಸಿ ಕರುಣೆಯೇ

ಕುಟುಂಬದ ಕಣ್ಣು ರಜತಪರದೆಯ ಮೇಲೆ ಬಂದು ಪ್ರಥಮ ಕನ್ನಡ ಕಾದಂಬರಿ ಆಧಾರಿತ ಚಿತ್ರವಾಯಿತು. ನಂತರದಲ್ಲಿ ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರ ಜನಪ್ರಿಯ ಕೃತಿಗಳು ಚಲನಚಿತ್ರಗಳಾಗಿ ನಿರ್ಮಿತವಾದವು, ಯಶಸ್ವಿಯಾದುವು.

ಇದರಲ್ಲಿ ಬಹುಮುಖ್ಯವಾಗಿ ಹೆಸರಿಸಬಹುದಾದರೆ ಕಾದಂಬರಿಕಾರ ಟಿ.ಕೆ. ರಾಮರಾವ್‌ರವರ ಕಾದಂಬರಿ ಆಧಾರಿತ, ಸಿದ್ಧಲಿಂಗಯ್ಯ ಅವರು ನಿರ್ದೇಶಿಸಿ, ರಾಜಕುಮಾರ್, ಭಾರತಿ ಅಭಿನಯಿಸಿದ 'ಬಂಗಾರದ ಮನುಷ್ಯ' ಚಿತ್ರ ಇದು ಕನ್ನಡ ಚಿತ್ರರಂಗದಲ್ಲಿ ಇತಿಹಾಸವನ್ನೇ ಸೃಷ್ಟಿಸಿತು. 104 ವಾರಗಳು ಪ್ರದರ್ಶನಗೊಂಡು ಹಿಂದಿನ ಎಲ್ಲ ಚಿತ್ರಗಳ ದಾಖಲೆಯನ್ನು ಮೀರಿತು.

ಇದೆಲ್ಲ ಸಾಧ್ಯವಾಗಿದ್ದು ಕನ್ನಡಚಳುವಳಿಯಿಂದ ಮಾತ್ರ ಎಂದು ಧಾರಾಳವಾಗಿ ಹೇಳಬಹುದು ಚಳುವಳಿಯಿಂದ ಪ್ರೇರಿತವಾದ ಅನೇಕ ಚಿತ್ರ ಸಾಹಿತಿಗಳು ಚಿತ್ರಗಳಲ್ಲಿ ಕನ್ನಾಡಾಭಿಮಾನವನ್ನೇ ಕುರಿತಂತೆ ಸಾಹಿತ್ಯವನ್ನು ರಚಿಸತೊಡಗಿದರು. ಸಾಧ್ಯವಿದ್ದ ಸಂದರ್ಭಗಳಲ್ಲೆಲ್ಲ ಚೇತೋಹಾರಿಯಾದ ಕನ್ನಡ ಪರ ಸಂಭಾಷಣೆಗಳನ್ನು ರಚಿಸಿ, ಪ್ರೇಕ್ಷಕರ ಕನ್ನಡ ಪ್ರಜ್ಞೆಯನ್ನು ಎಚ್ಚರಿಸತೊಡಗಿದರು.

ಕು.ರಾ.ಸೀತಾರಾಮಶಾಸ್ತ್ರಿ, ಎಸ್.ಕೆ.ಕರೀಂಖಾನ್, ಹುಣಸೂರು ಕೃಷ್ಣಮೂರ್ತಿ, ಕಣಗಾಲ್ ಪ್ರಭಾಕರಶಾಸ್ತ್ರಿ, ಸಿ.ವಿ.ಶಿವಶಂಕರ್, ಆರ್.ಎನ್. ಜಯಗೋಪಾಲ್ ಜಿ.ವಿ.ಅಯ್ಯರ್, ಚಿ.ಸದಾಶಿವಯ್ಯ, ಚಿ.ಉದಯಶಂಕರ್ ಮುಂತಾದ ಗೀತೆರಚನೆಕಾರರು ಕನ್ನಡ ಅಭಿಮಾನವನ್ನು ಪ್ರೇರೇಪಿಸುವ ಗೀತೆಗಳನ್ನು ರಚಿಸಿ ಔಚಿತ್ಯ, ಪೂರ್ಣವಾಗಿ ಚಿತ್ರದಲ್ಲಿ ಸೇರಿಸ ತೊಡಗಿದರು.

ಕನ್ನಡದ ಹೆಸರಾಂತ ಕವಿಗಳ ಕವನಗಳನ್ನು ಕನ್ನಡ ಚಿತ್ರಗಳಲ್ಲಿ ಅಳವಡಿಸುವ ಕಾರ್ಯ ಆರಂಭ ಮಾಡಿದ್ದು ಸಹ ಈ ಸಂದರ್ಭದಲ್ಲಿಯೇ. 1963ರಲ್ಲಿ ಬಿಡುಗಡೆಯಾದ ಗೌರಿ ಚಿತ್ರದಲ್ಲಿ ಸುಪ್ರಸಿದ್ಧ ಸಂಗೀತ ನಿರ್ದೇಶಕರಾದ ಜಿ.ಕೆ.ವೆಂಕಟೇಶ್‌ರವರು, ರಾಷ್ಟ್ರಕವಿ ರಸಋಷಿ ಕುವೆಂಪು ಅವರ ರಚನೆಯಾದ 'ಯಾವ ಜನ್ಮದ ಮೈತ್ರಿ ಈ ಜನ್ಮದಲ್ಲಿ ಬಂಧು' ಎಂಬ

ಗೀತೆಯನ್ನು ಚಿತ್ರದಲ್ಲಿ ಅಳವಡಿಸುವ ಮೂಲಕ ಕನ್ನಡ ಕವಿಗಳ ಗೀತೆಗಳನ್ನು ಕನ್ನಡಿಗರಿಗೆ ಪರಿಚಯಿಸುವ ಸಂಪ್ರದಾಯವನ್ನು ಆರಂಭಿಸಿದರು. ಖ್ಯಾತ ಹಿನ್ನೆಲೆಗಾಯಕಿ ಎಸ್.ಜಾನಕಿ ಹಾಡಿದ ಈ ಗೀತೆ ಇಂದಿಗೂ ಸಹ ಜನಪ್ರಿಯವಾಗಿದೆ.

ಅಲ್ಲೀಂದೀಚೆಗೆ ಅನೇಕ ಕವಿಗಳ ಗೀತೆಗಳು ಚಿತ್ರಗಳಲ್ಲಿ ಅಳವಡಿಸಿಲ್ಪಟ್ಟು ಕುವೆಂಪು ಅವರೊಬ್ಬರದೇ ಸುಮಾರು ಮೂವತ್ತು ಗೀತೆಗಳಿಗೂ ಮೀರಿ ಚಿತ್ರಗೀತೆಗಳಾಗಿವೆ.

ಕನ್ನಡ ಚಿತ್ರರಂಗದ ಚಳುವಳಿಗೆ ಬಲ ತಂದ ಮತ್ತೊಂದು ಚಿತ್ರ 'ಕಣ್ತೆರೆದು ನೋಡು' ಸಂಗೀತ ನಿರ್ದೇಶಕ ಜಿ.ಕೆ.ವೆಂಕಟೇಶ್ ಹಾಡಿದ 'ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ನಾವು ಕೀಳು ಎಂಬುವುವವರ ಬಾಯ್ ಮುಚ್ಚ ಬನ್ನಿ' ಎಂಬ ಗೀತೆ ಅತ್ಯಂತ ಜನಪ್ರಿಯವಾಗಿ ಚಳುವಳಿ ಸಭೆಗಳ ಆರಂಭಕ್ಕೆ ಮೊದಲು ಹಾಡಲಾಗುತ್ತಿತ್ತು.

ಕಣಗಾಲ್ ಪ್ರಭಾಕರ್ ಶಾಸ್ತ್ರಿ, ಹುಣಸೂರು ಕೃಷ್ಣಮೂರ್ತಿ ಸಿ.ವಿ.ಶಿವಶಂಕರ್ ಇವರೇ ಮುಂತಾದ ಕನ್ನಡ ಚಿತ್ರರಂಗದ ಸಾಹಿತಿಗಳು ಸಂಯುಕ್ತರಂಗದ ಬಹಿರಂಗ ಸಭೆಗಳಲ್ಲಿ ಭಾಷಣ ಮಾಡುತ್ತಿದ್ದರು. ನಟ ಉದಯಕುಮಾರ್ ಅವರಂತೂ, ತಮ್ಮ ಸಿಂಹಘರ್ಜನೆಯಿಂದ ಸಭೆಗಳಲ್ಲಿ ವಿದ್ಯುತ್‌ಸಂಚಾರವನ್ನುಂಟು ಮಾಡುತ್ತಿದ್ದರು.

ಅಲಂಕಾರ್ ಚಿತ್ರಮಂದಿರದಲ್ಲಿ ಪ್ರಸಿದ್ಧ ಕಾದಂಬರಿಕಾರರಾದ ಕೃಷ್ಣಮೂರ್ತಿ ಪುರಾಣಿಕರ ದೇವರಕೂಸು ಕಾದಂಬರಿ ಆಧಾರಿತ ಚಿತ್ರ 'ಬಂಗಾರಿ' ಮೊಟ್ಟಮೊದಲಿಗೆ ಪ್ರದರ್ಶಿತವಾಯಿತು. ಪ್ರಭಾತ್‌ನಲ್ಲಿ 'ಗೌರಿ' ಸ್ಟೇಟ್ಸ್‌ನಲ್ಲಿ 'ಕನ್ಯಾರತ್ನ' ಪ್ರದರ್ಶಿತವಾಯಿತು. ಅಲ್ಲಿಂದ ಮುಂದೆ ಕನ್ನಡ ಚಿತ್ರಗಳನ್ನು ನಿರಂತರವಾಗಿ ಪ್ರದರ್ಶಿಸುವ ಪರಿಪಾಠವನ್ನು ಚಿತ್ರಮಂದಿರದ ಮಾಲೀಕರು ಮುಂದುವರೆಸಿದರು.

ಹೀಗೆ ಚಳುವಳಿಯ ಪ್ರಖರತೆಯಿಂದ ಉಂಟಾದ ಬದಲಾವಣೆಗಳು ಒಂದೇ ಎರಡೇ. ಈ ಎಲ್ಲಾ ಬದಲಾವಣೆಗಳು ಸಾಧ್ಯವಾಗಿದ್ದು ಅಂದಿನ ಕನ್ನಡ ಚಳುವಳಿಯ ನಿಷ್ಠಾವಂತ ಯುವಕರಿಂದ ಎಂದು ಧಾರಾಳವಾಗಿ

ಹೇಳಬಹುದು. ಇವರೆಲ್ಲರಿಗೂ ನಾಯಕಸ್ಥಾನದಲ್ಲಿದ್ದು ಅವರನ್ನು ಮುನ್ನಡೆಸಿಕೊಂಡು ದಾರಿತೋರಿಸಿದವರು ರಾಮಮೂರ್ತಿಯವರಂತಹ ನಿಃಸ್ಪೃಹ ನೇತಾರರು.

ಕಾರ್ಮಿಕಲೋಕದಲ್ಲಿಯೂ ಸಹ ಕನ್ನಡ ಚಳುವಳಿಯಿಂದ ಸಾಕಷ್ಟು ಸಂಚಲನವುಂಟಾಯಿತೆಂದು ಹೇಳಬಹುದು. ಪ್ರಮುಖವಾಗಿ ಹೇಳಬಹುದಾದರೆ ಅಂದಿನ ದಿನಗಳಲ್ಲಿ ಬೆಂಗಳೂರಿನಲ್ಲಿ ಪ್ರಮುಖ ಕೈಗಾರಿಕೆಯಾಗಿದ್ದ ಮೈಕೋ ಕಾರ್ಖಾನೆಯಲ್ಲಿ ಕನ್ನಡ ಕಾರ್ಮಿಕರಿಗಾಗುತ್ತಿದ್ದ ಅನ್ಯಾಯದ ವಿರುದ್ಧ ಹೋರಾಟದ ಮನೋಬಲವನ್ನು ತಂದುಕೊಟ್ಟಿದ್ದೇ ರಾಮಮೂರ್ತಿಯವರು. ಕನ್ನಡ ಕಾರ್ಮಿಕರ ಮೇಲೆ ಆಗುತ್ತಿದ್ದ ಅನ್ಯಾಯಗಳನ್ನು ಖಂಡಿಸಿ ಮೈಕೋ ಕನ್ನಡಕಾರ್ಮಿಕರ ಸಮಸ್ಯೆಗಳನ್ನು ಅವರ ಮೇಲಾಗುತ್ತಿದ್ದ ದೌರ್ಜನ್ಯಗಳನ್ನು ಸರ್ಕಾರಕ್ಕೆ ಹಾಗೂ ಸಾರ್ವಜನಿಕರಿಗೆ ತಿಳಿಯಪಡಿಸಿದರು. ಆ ಕಾರ್ಮಿಕರ ಪರವಾಗಿ ನಿಂತು ಅವರಲ್ಲಿ ಧೈರ್ಯವನ್ನು ಸ್ಥೈರ್ಯವನ್ನು ಮೂಡಿಸಿದರು.

ಕಾಂಚೀತ್ತಲೈವಾನ್ ಚಿತ್ರ ಪ್ರಕರಣ

ಕನ್ನಡ ಚಳುವಳಿಯ ಕಾವು ಎಲ್ಲ ಕಡೆ ಹರಡಿದ್ದ ಕಾಲ. ಕನ್ನಡಿಗರ ಅಭಿಮಾನ ಸಹನೆಗಳಿಗೆ ಧಕ್ಕೆಯುಂಟಾಗುವ ಯಾವುದೇ ಸಣ್ಣ ಘಟನೆಯಾದರೂ ಪ್ರಚೋದನೆಯಾಗಿ ಕನ್ನಡಿಗರು ಸಿಡಿದೇಳುತ್ತಿದ್ದ ಸಮಯ. ಅಂತಹ ಸಂದರ್ಭದಲ್ಲಿ ಕನ್ನಡಿಗರನ್ನು ರೊಚ್ಚಿಗೆಬ್ಬಿಸಿದ ತಮಿಳು ಚಿತ್ರವೊಂದು 1964ರಲ್ಲಿ ನಗರದ (ಆಗಿನ) ಗೀತಾ ಚಿತ್ರಮಂದಿರದಲ್ಲಿ ಬಿಡುಗಡೆಯಾಯಿತು. ಅದೇ ಕಾಂಚಿತ್ತಲೈವಾನ್. ಈ ಚಿತ್ರದಲ್ಲಿ ಕನ್ನಡಿಗರಿಗೆ, ಕನ್ನಡ ಇತಿಹಾಸಕ್ಕೆ ಅವಮಾನ ಉಂಟಾಗುವ ಕೆಲವು ಘಟನೆಗಳನ್ನು ಚಿತ್ರಿಸಿದ್ದು ಕನ್ನಡಿಗರನ್ನು ಕೆರಳಿಸಿತು.

ಬಾದಾಮಿಯ ಚಾಲುಕ್ಯರ ದೊರೆ ಇಮ್ಮಡಿ ಪುಲಿಕೇಶಿ ಹಾಗೂ ಕಂಚಿ ಪಲ್ಲವರ ದೊರೆ ಮೊದಲನೆಯ ನರಸಿಂಹವರ್ಮನ ನಡುವೆ ನಡೆದ ಯುದ್ಧದ ಕಥೆಯೇ ಈ ಚಿತ್ರ. ಇದರಲ್ಲಿ ಪುಲಿಕೇಶಿಯನ್ನು ಸೋಲಿಸಿದ ತಮಿಳು ದೊರೆ ಕರ್ನಾಟಕದ ಬಾವುಟವನ್ನು ಕಾಲಿನಿಂದ ತುಳಿಯುವಂತೆ

ಚಿತ್ರಿಸಲಾಗಿತ್ತು. ಅಲ್ಲದೆ ಇಮ್ಮಡಿ ಪುಲಿಕೇಶಿಯನ್ನು ಬಫೂನ್‌ನಂತೆ ಚಿತ್ರೀಕರಿಸಲಾಗಿತ್ತು.

ಇದನ್ನು ಉಗ್ರವಾಗಿ ಪ್ರತಿಭಟಿಸಿದ ಕನ್ನಡ ಕಾರ್ಯಕರ್ತರು ಚಿತ್ರ ಪ್ರದರ್ಶಿಸುತ್ತಿದ್ದ ಮಂದಿರಗಳ ಮುಂದೆ ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿ ಚಿತ್ರಪ್ರದರ್ಶನವನ್ನು ನಿಲ್ಲಿಸುವಂತೆ ಆಗ್ರಹ ಪಡಿಸಿದರು ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸಂದರ್ಭವೂ ಬಂದಿತು.

ಕನ್ನಡಿಗರ ವಿರೋಧವನ್ನು ಗಮನಿಸಿದ ಚಿತ್ರ ನಿರ್ಮಾಪಕರು ಆಕ್ಷೇಪಾರ್ಹ ಭಾಗಗಳನ್ನು ತೆಗೆದುಹಾಕಿ ಮತ್ತೆ ಆ ಚಿತ್ರವನ್ನು ಬಿಡುಗಡೆ ಗೊಳಿಸುವ ಮುನ್ನ ಕನ್ನಡ ಇತಿಹಾಸ ತಜ್ಞರು, ಚಳುವಳಿನಾಯಕರು ಮುಂತಾದವರಿಗಾಗಿ ವಿಶೇಷ ಪ್ರದರ್ಶನವೊಂದನ್ನು ಅದೇತಾನೇ ನವೀಕರಿಸಿ ಗೊಂಡಿದ್ದ ಮಿನರ್ವ ಚಿತ್ರ ಮಂದಿರದಲ್ಲಿ ದಿನಾಂಕ 21.01.1964ರಂದು ಏರ್ಪಡಿಸಿದರು.

ಆ ಸಂದರ್ಭದಲ್ಲಿ ಚಿತ್ರ ವೀಕ್ಷಿಸಿದ ಕನ್ನಡ ಕಾರ್ಯಕರ್ತರಲ್ಲಿ ಹಲವರು ಆಕ್ಷೇಪಾರ್ಹವಾದ ಭಾಗಗಳನ್ನು ಪೂರ್ತಿ ತೆಗೆದುಹಾಕಿಲ್ಲವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಉದ್ರೇಕಗೊಂಡ ಹಲವರು ಚಿತ್ರ ಮಂದಿರದ ಆಸನಗಳನ್ನು ಬ್ಯಾನರ್‌ಗಳನ್ನು ಹರಿದು ಬಿಸಾಕಿದರು ಈ ಪ್ರತಿಕ್ರಿಯೆಗೆ ಆ ಚಿತ್ರ ಮಂದಿರದವರು ಅನ್ಯಭಾಷೆಯ ಚಿತ್ರಗಳನ್ನೆ ಹೆಚ್ಚಿಗೆ ಪ್ರದರ್ಶಿಸುತ್ತಿದ್ದುದೂ ಒಂದು ಕಾರಣವಾಗಿತ್ತು.

ಅನಕೃರವರು ಇಂತಹ ಹಿಂಸಾಪ್ರವೃತ್ತಿಯನ್ನು ಖಂಡಿಸಿದರು. ಚಳುವಳಿ ಯಾವಾಗಲೂ ಅಹಿಂಸಾಮಾದರಿಯಲ್ಲಿಯೇ ನಡೆಯಬೇಕು ಎಂಬ ಮನೋಭಾವ ಹೊಂದಿದ್ದ ಅವರು ಚಳುವಳಿಯಿಂದ ದೂರ ಸರಿದರು.

ಆದರೆ ಸದಾ ಯುವ ಜನಾಂಗದ ನಾಯಕರಾಗಿ ಅವರ ಮನೋಭಾವ, ಆವೇಶ, ಆವೇಗಗಳನ್ನು ಅರಿತಿದ್ದ ರಾಮಮೂರ್ತಿಯವರು ಈ ಘಟನೆಯಿಂದ ಬೇಸತ್ತರೂ ಯಾವುದೇ ಹೋರಾಟದಲ್ಲಿಯೂ ಇಂತಹ ಘಟನೆಗಳು ಕೆಲವೊಮ್ಮೆ ಅನಿವಾರ್ಯವಾದರೂ ನಡೆಯುತ್ತವೆ ಎಂದು

ಅಭಿಪ್ರಾಯಪಟ್ಟರು.

ಬಿರುಸಿನಿಂದ ನಡೆಯುತ್ತಿದ್ದ ಚಟುವಟಿಕೆಗಳಿಗೆ ಅನಕೃ ವಿದಾಯ ಹೇಳಿದ್ದು ಚಳುವಳಿಯ ಹಿನ್ನಡೆಗೆ ಭಾರೀ ಕಾರಣವಾಯಿತು.

ಡಿ.ಎಂ.ಕೆ. ಬಾವುಟವನ್ನು ಕೆಳಗಿಳಿಸಿದರು ವೀರ ಸೇನಾನಿಯಾದರು

ಬೆಂಗಳೂರು ಹಾಗೂ ಇತರ ಕಡೆಗಳಲ್ಲಿ ಚಳುವಳಿಯ ಕಾವು ಏರತೊಡಗಿದ್ದಂತೆ ತಮಿಳರು ವಾಸಿಸುತ್ತಿದ್ದ ಪ್ರದೇಶಗಳಲ್ಲಿ ಡಿ.ಎಂ.ಕೆ ಹಾಗೂ ಅವರ ಬಾವುಟದ ಪ್ರದರ್ಶನಗಳು ಹೆಚ್ಚಿದವು. ಈ ಸ್ಥಿತಿ ಬೆಂಗಳೂರಿನಲ್ಲಿಯೇ ಮಾತ್ರವಲ್ಲದೆ ತಮಿಳರು ಹೆಚ್ಚಾಗಿರುವ ಬೇರೆ ಪ್ರದೇಶಗಳಲ್ಲಿಯೂ ಇತ್ತು. ಅಂತಹುದೊಂದು ಸ್ಥಳ ಚಿತ್ರದುರ್ಗ ಜಿಲ್ಲೆಯ ಹಿರಿಯೂರು. ಹಿರಿಯೂರಿನಲ್ಲಿ ಮಾರಿಕಣಿವೆ (ವೇದಾವತಿ) ಆಣೆಕಟ್ಟಿನ ಕೆಲಸ ಆರಂಭ ವಾದಾಗ ಕೂಲಿ ಕೆಲಸಕ್ಕೆ ತಮಿಳು ನಾಡಿನಿಂದ ಹಿಂಡುಹಿಂಡಾಗಿ ಜನ ಬಂದರು. ಆಣೆಕಟ್ಟಿನ ಕೆಲಸ ಮುಗಿದರೂ ಪುನಃ ತಮಿಳುನಾಡಿಗೆ ಹಿಂದಿರುಗಲಿಲ್ಲ. ಹಿರಿಯೂರಿಲ್ಲಿಯೇ ತಳ ಊರಿದರು. ಶಾಶ್ವತವಾಗಿ ನೆಲೆಸಿದರು. ಮನೆ, ಮಠ ಜಮೀನು ಮಾಡಿಕೊಂಡು ನೆಮ್ಮದಿಯ ಬಾಳನ್ನು ಬಾಳತೊಡಗಿದರು. ಆದರೆ ನಿಂತ ನೆಲದ ಸಂಸ್ಕೃತಿಯನ್ನು ಹೊಂದಿಸಿಕೊಳ್ಳಲಿಲ್ಲ. ತಮ್ಮ ತಮಿಳು ಸಂಸ್ಕೃತಿಯನ್ನು ಮರೆಯಲಿಲ್ಲ. ಕನ್ನಡ ನೆಲದಲ್ಲಿ ಬೇರೂರಿದ ಅವರು ಹಿರಿಯೂರಿನ ಪುರಸಭೆಯಲ್ಲಿ ಸದಸ್ಯರಾಗಿ ಆಡಳಿತ ಪ್ರವೇಶವನ್ನೂ ಪಡೆದರು.

ಹೀಗಾಗಿ ತಮಿಳರ ಪಕ್ಷವಾದ ಡಿ.ಎಂ.ಕೆ ಪಕ್ಷವನ್ನು ಹಿರಿಯೂರಿನಲ್ಲಿ ಸ್ಥಾಪಿಸಿದರು, ಬೆಳೆಸಿದರು. ಎಲ್ಲೆಲ್ಲೂ ಪಕ್ಷದ ಕೆಂಪು ಮತ್ತು ಕಪ್ಪು ಬಣ್ಣದ ಧ್ವಜಗಳು ಹಾರುತ್ತಿದ್ದವು. ಹಿರಿಯೂರಿನ ಮಧ್ಯೆ ಇರುವ ಒಂದು ಪ್ರಮುಖ ವೃತ್ತದಲ್ಲಿ ಆ ಪಕ್ಷದ ಧ್ವಜವನ್ನು ಹಾರಾಡಲು ಕಟ್ಟಿದರು.

ಆ ಧ್ವಜವನ್ನು ತೆಗೆಸಲು ಕನ್ನಡಿಗರು ಅಂದಿನ ಮುಖ್ಯ ಮಂತ್ರಿಗಳಾದ ಚಿತ್ರದುರ್ಗ ಜಿಲ್ಲೆಯವರೇ ಆದ, ಎಸ್. ನಿಜಲಿಂಗಪ್ಪನವರನ್ನು ಹಾಗೂ ಗೃಹಮಂತ್ರಿಗಳಾಗಿದ್ದ ಆರ್.ಎಂ. ಪಾಟೀಲ ರನ್ನು ಕೇಳಿಕೊಂಡಿದ್ದರೂ ಪ್ರಯೋಜನವಾಗಲಿಲ್ಲ.

ಹಿರಿಯೂರಿನ ತರುಣ ಕನ್ನಡಿಗರು ಸಂಯುಕ್ತರಂಗದ ಮ.ರಾಮಮೂರ್ತಿಯವರ ಬಳಿ ಬಂದು ವಿಚಾರ ಪ್ರಸ್ತಾಪ ಮಾಡಿ ಹಿರಿಯೂರಿಗೆ ಬಂದು ಜನರನ್ನು ಜಾಗೃತಿಗೊಳಿಸುವಂತೆ ಕೇಳಿಕೊಂಡರು. ಹೀಗಾಗಿ ಅಲ್ಲಿ ಸಂಯುಕ್ತರಂಗದ ಬಹಿರಂಗ ಸಭೆ ಏರ್ಪಾಡಾಗಿ ಅಲ್ಲಿಯ ಸ್ಥಳೀಯ ಕಾಂಗ್ರೆಸ್ ನಾಯಕರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದರು.

ಅಂದಿನ ಬಹಿರಂಗ ಸಭೆಯಲ್ಲಿ ರಾಮಮೂರ್ತಿಯವರು ತಮ್ಮ ಎಂದಿನ ಕಂಚಿನಕಂಠದಲ್ಲಿ ಮಾತನ್ನಾಡುತ್ತಾ ಕನ್ನಡ ನಾಡಿನಲ್ಲಿ ಪರಪ್ರಾಂತ್ಯದ ಪ್ರಾದೇಶಿಕಪಕ್ಷದ ಧ್ವಜವು ಸಾರ್ವಜನಿಕ ಸ್ಥಳವಲ್ಲಿ ಹಾರಾಡುವ ಔಚಿತ್ಯವನ್ನು ಪ್ರಶ್ನಿಸಿ ಅದು ಕೇವಲ ಆ ಪಕ್ಷದ ಕಛೇರಿಗೆ ಮಾತ್ರ ಸೀಮಿತಗೊಂಡ ಸ್ಥಳದಲ್ಲಿರಬೇಕೇ ಹೊರತು ಸಾರ್ವಜನಿಕ ಸ್ಥಳದಲ್ಲಿ ಅಲ್ಲ. ಹಾಗಾಗಿ ಕೂಡಲೇ ಆ ಧ್ವಜವನ್ನು ತೆಗೆಯಬೇಕೆಂದು ಸಿಂಹಘರ್ಜನೆ ಮಾಡಿದರು. ಸಭೆಯಲ್ಲಿ ಸೇರಿದ್ದ ಜನ ಕರತಾಡನ ಮಾಡಿದರು. ತಮ್ಮ ಸಮ್ಮತಿಯನ್ನು ಸೂಚಿಸಿದರು.

ಆ ಸಭೆಯ ಮಧ್ಯದಿಂದಲೇ ಧ್ವಜಸ್ತಂಭದತ್ತ ಧಾವಿಸಿದ ರಾಮಮೂರ್ತಿಯವರು ಧ್ವಜವನ್ನು ತೆಗೆಯಲು ಮುಂದಾದರು. ಆದರೆ ಅಷ್ಟರಲ್ಲಿಯೇ ಗುಂಪಿನಲ್ಲಿದ್ದ ಉತ್ಸಾಹೀ ತರುಣನೊಬ್ಬ ಧ್ವಜಸ್ತಂಭವನ್ನು ಹತ್ತಿ ಬಾವುಟವನ್ನು ಇಳಿಸಿಯೇ ಬಿಟ್ಟ. ಎಷ್ಟೋ ವರ್ಷಗಳಿಂದ ಹಾರಾಡುತ್ತಿದ್ದ ಡಿಎಂಕೆ ಬಾವುಟ ಕೆಳಗಿಳಿಯಿತು ಮತ್ತೆ ಹಾರಲಿಲ್ಲ. ಅಂದಿನಿಂದ ರಾಮಮೂರ್ತಿಯವರು "ವೀರ ಸೇನಾನಿ" ರಾಮಮೂರ್ತಿಯವರಾದರು.

ಎಂ. ರಾಮಮೂರ್ತಿ ಮ ರಾಮಮೂರ್ತಿ ಆದರು

ಮೊದಲಿಗೆ ರಾಮಮೂರ್ತಿಯವರು ತಮ್ಮ ಹೆಸರನ್ನು ಎಂ.ರಾಮಮೂರ್ತಿ ಎಂದು ಬರೆಯುತ್ತಿದ್ದರು. ಎಂ ಎನ್ನುವುದು ಅವರ ಹುಟ್ಟೂರಾದ ಮದ್ದೂರಿನ ಇಂಗ್ಲೀಷ್ ಅಕ್ಷರದ ಆರಂಭವಾಗಿತ್ತು. ಆದರೆ ಅವರು ಕನ್ನಡ ನಾಯಕತ್ವ ವಹಿಸಿಕೊಂಡ ದಿನದಿಂದ ಎಂ ಅಕ್ಷರದ ಬದಲು ಕನ್ನಡದ ಮ.ಅಕ್ಷರವನ್ನು ಬಳಸಲು ತೊಡಗಿದರು. ಮ.ರಾಮಮೂರ್ತಿ ಎಂದಾದರು.

ಕನ್ನಡವೇ ಜಾತಿ ಕನ್ನಡವೇ ಧರ್ಮ

ಕನ್ನಡ ಸಂಯುಕ್ತರಂಗದ ಆಶ್ರಯದಲ್ಲಿ ಕನ್ನಡಪರ ಚಟುವಟಿಕೆಗಳು ಬಿರುಸಾಗಿ ನಡೆಯುತ್ತಿದ್ದರೆ, ಕೆಲವು ಕನ್ನಡಿಗರೇ ಅದರ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದರು. ಟೀಕೆಗಳನ್ನು ಮಾಡುತ್ತಿದ್ದರು. ಅವುಗಳಲ್ಲಿ ಸಂಯುಕ್ತರಂಗದಲ್ಲಿ ಬರಿಯ ಬ್ರಾಹ್ಮಣರ ಗುಂಪು ಕಟ್ಟಿಕೊಂಡಿದೆ ಎಂದು ಹಲವರು ಟೀಕಿಸುತ್ತಿದ್ದರು. ಆಗ ರಾಮಮೂರ್ತಿಯವರು ಸಿಡಿದೆದ್ದು ಜನಿವಾರವನ್ನು ಕಿತ್ತು ಬಿಸಾಕಿದರು. "ನಾನು ಯಾವ ಜಾತಿಗೂ ಅಂಟಿ ಕೊಂಡಿಲ್ಲ. ಕನ್ನಡವೇ ನನ್ನ ಜಾತಿ, ಕನ್ನಡವೇ ನನ್ನ ಧರ್ಮ ಕನ್ನಡವೇ ನನ್ನ ದೇವರು ಎನ್ನುವ ತತ್ವಕ್ಕೆ ಸದಾ ಬದ್ಧ" ಎಂದು ಗುಡುಗಿದರು. ಜೀವನ ದುದ್ದಕ್ಕೂ ಅದೇರೀತಿ ನಡೆದುಕೊಂಡರು. ಇಷ್ಟೇ ಅಲ್ಲ, ಮನೆಯಲ್ಲಿ ಮಾತೃಭಾಷೆ ತೆಲುಗು ಮಾತನಾಡುವುದನ್ನು ಬಿಟ್ಟು ಕೇವಲ ಕನ್ನಡ ಮಾತನಾಡಲು ತೊಡಗಿದರು.

ಕನ್ನಡಿಗರಿಗೆ, ಕನ್ನಡಕ್ಕೆ ಎಲ್ಲೇ ಅನ್ಯಾಯವಾದರೂ ಧೈರ್ಯದಿಂದ ಮುನ್ನುಗ್ಗಿ ಅದನ್ನು ವಿರೋಧಿಸುವ ಎದೆಗಾರಿಕೆಯನ್ನು ಹೊಂದಿದ್ದರು. ಕನ್ನಡದ ಸಮಸ್ಯೆಗಳು ಎಲ್ಲೇ ಇದ್ದರೂ ತಕ್ಷಣವೇ, ಯಾವ ವೇಳೆಯಲ್ಲಿ ಯಾದರೂ ಸರಿ, ಧಾವಿಸುತ್ತಿದ್ದ ರಾಮಮೂರ್ತಿಯವರು ಯುವ ಚಳುವಳಿಗಾರರಲ್ಲಿ ಸ್ಫೂರ್ತಿಯನ್ನೂ ಆತ್ಮವಿಶ್ವಾಸವನ್ನು ತುಂಬುತ್ತಿದ್ದರು. ಕನ್ನಡೇತರ ನಾಮಫಲಕಗಳಿಗೆ ಬಣ್ಣ ಬಳಿಯುವುದು ಮುಂತಾದ ಚಳುವಳಿಗಳಲ್ಲಿ ಭಾಗವಹಿಸುತ್ತಿದ್ದ ಯುವಕರ ಮೇಲೆ ಪೊಲೀಸರು ಕ್ರಮ ಕೈಗೊಳ್ಳುತ್ತಿದ್ದಾಗ ಜಾಮೀನು ಕೊಟ್ಟು ಅವರನ್ನು ಬಿಡಿಸಿ ತರುತ್ತಿದ್ದವರೇ ರಾಮಮೂರ್ತಿಯವರು. ನಗರದ ಮೈಕೋಕಾರ್ಖಾನೆಯಲ್ಲಿ ಕನ್ನಡ ಕಾರ್ಮಿಕರ ಮೇಲೆ ತಮಿಳು ಕಾರ್ಮಿಕರು ನಡೆಸುತ್ತಿದ್ದ ದೌರ್ಜನ್ಯವನ್ನು ಎದುರಿಸಿದ್ದು ಕನ್ನಡ ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ ಅವರಲ್ಲಿ ಸ್ಥೈರ್ಯವನ್ನು ತುಂಬಿಸಿದ್ದು ಅಂದಿನ ದಿನಗಳಲ್ಲಿ ವಿಶೇಷವಾಗಿತ್ತು.

ಕನ್ನಡ ಪಕ್ಷ ಸ್ಥಾಪನೆ

ಹಲವಾರು ಕಾರಣಗಳಿಂದ ಸಂಯುಕ್ತರಂಗದ ಚಟುವಟಿಕೆಗಳು

ಸ್ಥಗಿತಗೊಂಡವು ಆದರೆ ರಾಮಮೂರ್ತಿಗಳ ಕನ್ನಡ ಕೈಂಕರ್ಯವು ಮುಂದುವರೆಯಿತು. ಕನ್ನಡನಾಡು ನುಡಿಯ ಹಿತವನ್ನು ಕಾಪಾಡಲು ಒಂದು ಪ್ರಾದೇಶಿಕ ಪಕ್ಷದ ಅಗತ್ಯತೆಯಿದೆ ಎಂಬುದನ್ನು ಮನಗಂಡ ಅವರು ಕನ್ನಡ ಪಕ್ಷವೊಂದನ್ನು ಕಟ್ಟಬೇಕು. ತನ್ಮೂಲಕ ರಾಜಕೀಯವನ್ನು ಪ್ರವೇಶಿಸಿ ನಾಡುನುಡಿಗಳ ಬಲವರ್ಧನೆಗೆ ಬೆಂಬಲವಾಗಿ ನಿಲ್ಲಬೇಕು ಎಂಬ ನಿಲುವನ್ನು ತಾಳಿದರು. ರಾಜಕೀಯ ಪಕ್ಷಗಳನ್ನು ನಂಬಿಕೊಂಡಿದ್ದರೆ ಕನ್ನಡದ ಸಮಸ್ಯೆಗಳಿಗೆ ಎಂದಿಗೂ ಪರಿಹಾರ ಸಿಗುವುದಿಲ್ಲವೆಂಬ ನಿರ್ಧಾರ ತಾಳಿದರು. ಹಾಗಾಗಿ 1966ರಲ್ಲಿ "ಕನ್ನಡ ಪಕ್ಷ" ಅಸ್ತಿತ್ವಕ್ಕೆ ಬಂದಿತು. ರಾಮಮೂರ್ತಿಯವರು ಅದರ ನೇತಾರರು. ಕನ್ನಡ ಪರ ಕೆಲಸ ಮಾಡುತ್ತಿದ್ದ ಹಲವಾರು ಕನ್ನಡದ ಮನಸ್ಸುಗಳು ಅವರೊಂದಿಗೆ ಸೇರಿ ಕನ್ನಡ ಪಕ್ಷದ ರಚನೆಯಲ್ಲಿ ಕೈ ಜೋಡಿಸಿದರು.

ಕನ್ನಡ ಪಕ್ಷದ ಬಾವುಟ

ಪಕ್ಷವೆಂದ ಮೇಲೆ ಅದಕ್ಕೆ ಬಾವುಟವೊಂದು ಇರಲೇಬೇಕು. ಕನ್ನಡ ಪಕ್ಷಕ್ಕೆ ಒಂದು ಬಾವುಟವಿರಬೇಕೆಂದು ತೀರ್ಮಾನಕ್ಕೆ ಬಂದರು. ಬಾವುಟ ರಚನೆಯಲ್ಲಿ ರಾಮಮೂರ್ತಿಗಳ ಒಡನಾಡಿಗಳಾಗಿದ್ದ ಹಾಗೂ ಅಂದಿನ ರೂಪಲೇಖ ಪತ್ರಿಕೆಯ ಸಂಪಾದಕರೂ ಆಗಿದ್ದ ರಾಮನ್ ಅವರು, ಅಲ್ಲದೇ ಬೇನಿ ಈಶ್ವರಪ್ಪ, ಸಂಪಂಗಿರಾಮಯ್ಯ, ಯಶವಂತ ನಾಗರಾಜ್, ವೆ.ಶ್ರೀನಿವಾಸ್ ಮುಂತಾದವರು ಸೇರಿ ಸಮಾಲೋಚಿಸಿ, ಸರಳವಾಗಿ ಹಳದಿ ಮತ್ತು ಕೆಂಪು ಬಣ್ಣದ ನಾಲ್ಕು ಮೂಲೆಗಳ ಬಾವುಟವನ್ನು ರೂಪಿಸಿದರು. ಇದು ಎಲ್ಲರ ಒಪ್ಪಿಗೆಯನ್ನು ಪಡೆದ ನಂತರ ಇದನ್ನು ಕನ್ನಡ ಪಕ್ಷದ ಅಧಿಕೃತ ಬಾವುಟವೆಂದು ತೀರ್ಮಾನಿಸಲಾಯಿತು.

ಬಾವುಟವು ಸರಳವಾಗಿದ್ದರಿಂದ ಕನ್ನಡಿಗರಿಗೆ ಒಪ್ಪಿಗೆಯಾಯಿತು. ಆದರೆ ತಮಿಳುನಾಡಿನ ಡಿಎಂಕೆ ಬಾವುಟದಂತೆ ಇದೆ ಎಂದು ಕೆಲವರಿಂದ ಆಕ್ಷೇಪಣೆಯೂ ಬಂದಿತು. ಆದರೆ ಆಕ್ಷೇಪಣೆಗೆ ಜನತೆ ಅಷ್ಟಾಗಿ ಒತ್ತು ಕೊಡಲಿಲ್ಲ. ಹಾಗಾಗಿ ಈ ಬಾವುಟವನ್ನು ಹೆಚ್ಚು ಹೆಚ್ಚಾಗಿ ಬಳಸಲಾರಂಭಿಸಿದರು. ಈಗ ಈ ಬಾವುಟ ಕನ್ನಡಿಗರ ಅವಿಭಾಜ್ಯ ಅಂಗವೇ

ಆಗಿಬಿಟ್ಟಿದೆ. ಕನ್ನಡಿಗರ ಕನ್ನಡದ ಅಸ್ಮಿತೆಯಾಗಿ ಬಿಟ್ಟಿದೆ. ವಿಶೇಷವೆಂದರೆ ಸರ್ಕಾರದ ಮಾನ್ಯತೆ ಅಥವಾ ಅಧಿಕೃತತೆ ಇಲ್ಲವಾದರೂ ಈ ಬಾವುಟ ಕನ್ನಡಿಗರ ಮನೆಮನೆಯ ಮನಮನದ ಬಾವುಟವಾಗಿ ಎಲ್ಲ ಕಡೆ ರಾರಾಜಿಸುತ್ತಿದೆ. ಕನ್ನಡದ ಪ್ರೇರಣಾಶಕ್ತಿಯಾಗಿ ವ್ಯಾಪಕವಾಗಿ ಬಳಸಲ್ಪಡುತ್ತಿದೆ.

ಕನ್ನಡ ಪಕ್ಷದ ಸ್ಥಾಪನೆಯೇನೋ ಆಯಿತು. 1966 ಮತ್ತು 1967ರಲ್ಲಿ ನಡೆದ ಚುನಾವಣೆಗಳಲ್ಲಿ ಕನ್ನಡಪಕ್ಷ ತನ್ನ ಅಭ್ಯರ್ಥಿಗಳನ್ನು ಚುನಾವಣೆಯಲ್ಲಿ ನಿಲ್ಲಿಸಿತು. ಆದರೆ ಕನ್ನಡಿಗರ, ಕನ್ನಡದ ಹಿತ ಕಾಯಲು ಸ್ಥಾಪಿಸಿದ್ದ ಕನ್ನಡ ಪಕ್ಷಕ್ಕೆ ಕನ್ನಡಿಗರಿಂದಲೇ ಬೆಂಬಲ ಸಿಗಲಿಲ್ಲ. ಹಾಗಾಗಿ ರಾಜಕೀಯವಾಗಿ ಪಕ್ಷವನ್ನು ಬೆಳೆಸುವ ರಾಮಮೂರ್ತಿಗಳ ಉತ್ಸಾಹ ನಿರೀಕ್ಷೆಗಳ ಕನಸು ನನಸಾಗಲಿಲ್ಲ. ಇದು ಅವರನ್ನು ನಿರಾಸೆಗೊಳಿಸಿತು.

ರಾಮಮೂರ್ತಿಗಳ ನಿಧನದ ನಂತರ ಕನ್ನಡ ಪಕ್ಷದ ನೇತೃತ್ವವನ್ನು ವಹಿಸಿದವರು ಪ್ರಸಿದ್ಧ ಕಾದಂಬರಿಕಾರರೂ ಕನ್ನಡಚಳುವಳಿಯ ಅನೇಕ ಹೋರಾಟಗಳಲ್ಲಿ ಭಾಗವಹಿಸಿ ಜೀವತುಂಬುತ್ತಿದ್ದವರೂ ಆದ ತ.ರಾ.ಸು.ರವರು. ಆದರೆ ಕನ್ನಡಿಗರ ನಿರಭಿಮಾನದಿಂದ ಕನ್ನಡ ಪಕ್ಷ ಯಶಸ್ಸು ಸಾಧಿಸಲೇ ಇಲ್ಲ.

ವಿಧಿವಶರಾದ ರಾಮಮೂರ್ತಿ

ಸಾಹಿತಿಯಾಗಿ, ಪತ್ರಕರ್ತರಾಗಿ, ಕನ್ನಡ ಚಳುವಳಿಯ ನಾಯಕರಾಗಿ ಕನ್ನಡ ಸಾಹಿತ್ಯಪ್ರಿಯರ ಕನ್ನಡಾಭಿಮಾನಿಗಳ ಮೆಚ್ಚುಗೆಯ ಮ.ರಾಮಮೂರ್ತಿಯವರು ತಮ್ಮ ಇಡೀ ಸಮಯವನ್ನೇ ಚಳುವಳಿಗೆ ಕನ್ನಡದ ಕೆಲಸಕ್ಕೆ ಮುಡಿಪಾಗಿಟ್ಟರು. ಆದರೆ ಸ್ವಂತ ಸಂಪಾದನೆ ಕಡೆಗೆ ಗಮನವನ್ನೇ ಕೊಡಲಾಗದಷ್ಟು ಕನ್ನಡದ ಕಾರ್ಯಗಳಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರಿಂದ ಹಣಕಾಸಿನ ಮುಗ್ಗಟ್ಟಿ ಗೊಳಗಾದರು. ಹಾಗಾಗಿ ಜೀವನೋಪಾಯಕ್ಕಾಗಿ ಹಲವಾರು ಮಾರ್ಗ ಗಳನ್ನು ಅನುಸರಿಸಬೇಕಾಯಿತು. ಸಂಸಾರ ನಿರ್ವಹಣೆಗಾಗಿ ಉಪ ಕಸುಬು ಗಳಿಗೆ ತೊಡಗಬೇಕಾಯಿತು. ಕೋಳಿ ಸಾಕುವುದಕ್ಕೆ ಆರಂಭಿಸಿದರು.

ಟೊಮೊಟೋ ಬೇಸಾಯವನ್ನು ಆರಂಭಿಸಿದರು.

ಬೆಂಗಳೂರು ಕನಕಪುರದ ರಸ್ತೆಯ ತಲಘಟ್ಟಪುರದಲ್ಲಿ ತಂದೆ ವೀರಕೇಸರಿ ಸೀತಾರಾಮಶಾಸ್ತ್ರಿಗಳಿಗೆ ಸ್ವಾತಂತ್ರ್ಯ ಹೋರಾಟಗಾರರ ಹೆಸರಿನಲ್ಲಿ ಜಮೀನು ನೀಡಲಾಗಿತ್ತು. ಆ ಜಮೀನಿನಲ್ಲಿ ತರಕಾರಿಯನ್ನು ಬೆಳೆದು ಮಾರುಕಟ್ಟೆಯಲ್ಲಿ ಮಾರಿ ಅದರಿಂದ ಬಂದ ಉತ್ಪತ್ತಿಯಲ್ಲಿ ಸಂಸಾರವನ್ನು ಸಾಗಿಸುತ್ತಿದ್ದರು. ನೀರಿನ ಆಸರೆಗಾಗಿ ಒಂದು ಬಾವಿಯನ್ನು ತೋಡಿಸುವ ಕಾರ್ಯಕ್ಕೆ ಕೈಹಾಕಿದ್ದ ರಾಮಮೂರ್ತಿಗಳು ಆ ಕಾರ್ಯದ ಪ್ರಗತಿಯನ್ನು ವೀಕ್ಷಿಸಲು ಆಗಾಗ್ಗೆ ಭೇಟಿ ನೀಡುತ್ತಿದ್ದರು.

1967, ಡಿಸೆಂಬರ್ 25ನೇ ತಾರೀಖು, ಕ್ರಿಸ್ಮಸ್ ಹಬ್ಬದ ದಿನ ತಮ್ಮ ಇಬ್ಬರು ಮಕ್ಕಳು ಚಿ॥ ದಿನಕರ (12 ವರ್ಷ) ಮತ್ತು ಹಿಂದಿನ ದಿನ ತಾನೇ ತನ್ನ ಹುಟ್ಟುಹಬ್ಬವನ್ನಾಚರಿಸಿಕೊಂಡಿದ್ದ 9 ವರ್ಷದ ಚಿ॥ ಮಂಜುನಾಥನನ್ನು ಕರೆದುಕೊಂಡು ಬಾವಿಯ ಕೆಲಸದ ಪ್ರಗತಿಯನ್ನು ನೋಡಲು ಹೋಗಿದ್ದರು. ರಾಮಮೂರ್ತಿಯವರು ಬಾವಿಯ ಬಳಿಗೆ ಹೋಗಿ ನೀರು ಬರುತ್ತಿರುವುದನ್ನು ನೋಡುತ್ತಿದ್ದ ಹಾಗೆಯೇ ಹಠಾತ್ತಾನೆ ದಡ ಕುಸಿಯಿತು. ಮಣ್ಣಿನ ಗುಡ್ಡದಡಿಯಲ್ಲಿ ಕಣ್ಮರೆಯಾಗಿ ಹೋದರು. ಅವರೊಂದಿಗಿದ್ದ ಮಕ್ಕಳು ದಿನಕರ ಮತ್ತು ಮಂಜು ಹಾಗೂ ಇಬ್ಬರು ಕೆಲಸದಾಳುಗಳೂ ಸಹ ಭೂ ಸಮಾಧಿಯಾದರು.

ಕನ್ನಡದ ಪ್ರಸಿದ್ಧ ಪತ್ರಕರ್ತರೂ, ರಾಮಮೂರ್ತಿಯವರ ಕುಟುಂಬದ ಆಪ್ತರೂ ಆಗಿದ್ದ ಮ. ಶ್ರೀಧರಮೂರ್ತಿಯವರು ಕೆಲವು ದಿನಗಳ ಹಿಂದೆ ರಾಮಮೂರ್ತಿಯವರ ಭೇಟಿ ಮಾಡಿದ್ದಾಗ ನಡೆದ ಮಾತುಕತೆಯನ್ನು ನೆನಪಿಸಿಕೊಂಡು ತಮ್ಮ ಲೇಖನದಲ್ಲಿ ಹೀಗೆ ಬರೆದಿದ್ದರು.

ಸುಮಾರು ತಿಂಗಳ ಹಿಂದೆ ಒಂದು ದಿನ ಭೇಟಿಯಾದಾಗ 'ಹೇಗೆ ನಡೆದಿದೆ ನಿಮ್ಮ ಬೇಸಾಯ? ಎಂದು ಕೇಳಿದೆ.

"ನಡೆದಿದೆ, ಬಾವಿ ತೆಗೆಸುತ್ತಿದ್ದೇನೆ, ದುಡ್ಡಿಲ್ಲ, ತಾಪತ್ರಯ ಜಾಸ್ತಿ, ಅಲ್ಲಿ ಇಲ್ಲಿ ಬಂದುದನ್ನೆಲ್ಲ ತೆಗೆದುಕೊಂಡು ಹೋಗಿ ಸುರಿಯುತ್ತಿದ್ದೇನೆ.... ಆ ಬಾವಿಯ ಕೆಲಸ ಒಂದು ಮುಗಿದರೆ ನನ್ನ ತಾಪತ್ರಯವೆಲ್ಲ ಮುಗಿದಂತೆ" ಎಂದರು.

ಆ ಬಾವಿ ಅವರ ತಾಪತ್ರಯವನ್ನು ಮಾತ್ರ ಅಲ್ಲ ಅವರನ್ನೇ ಮುಗಿಸಿತು.

ಕನ್ನಡಕ್ಕಾಗಿ ಹೋರಾಟ ನಡೆಸಿ ಕನ್ನಡಿಗರನ್ನು ತಮ್ಮ ಕ್ರಾಂತಿಯ ನುಡಿಗಳಿಂದ ಜಾಗೃತಗೊಳಿಸಿದ ಧೀಮಂತ ವ್ಯಕ್ತಿ, ಕನ್ನಡ ಸಾಹಿತ್ಯದಲ್ಲಿ ಪತ್ತೇದಾರಿ ಕಾದಂಬರಿ ಯುಗವನ್ನು ಆರಂಭಿಸಿ ಹೊಸ ಅಧ್ಯಾಯವನ್ನು ತೆರೆದು ತಮ್ಮ ಅಮೂಲ್ಯ ಕೃತಿಗಳಿಂದ ಸಾಹಿತ್ಯ ಭಂಡಾರವನ್ನು ತುಂಬಿದ ಮಹಾವ್ಯಕ್ತಿ. “ಕನ್ನಡ ಚಳುವಳಿಗೆ ನಾಂದಿ ಹಾಡಿ, ಕನ್ನಡಿಗರ ಹೃದಯದಲ್ಲಿ ಕನ್ನಡದ ಕಿಚ್ಚಿನ ಜ್ಯೋತಿಯನ್ನು ಬೆಳಗಿಸಿ ಕ್ರಾಂತಿ ಮಂತ್ರವನ್ನು ಘೋಷಿಸಿದ ಕನ್ನಡದ ವೀರಸೇನಾನಿ ಶ್ರೀ ರಾಮಮೂರ್ತಿಯವರು ಇನ್ನೂ ಮಹತ್ಕಾರ್ಯಗಳನ್ನು ಸಾಧಿಸಬೇಕಾಗಿದ್ದ ಸಂದರ್ಭದಲ್ಲಿ ದೈವಾಧೀನ ರಾದುದು ಕನ್ನಡಚಳುವಳಿಯ ದುರಂತ ಅಧ್ಯಾಯಗಳಲ್ಲಿ ಒಂದೆಂದು ಹೇಳಬಹುದು.

ಮಾರ್ಗಶಿರ ಬಹುಳ ದಶಮಿ

ವಿಧಿಯ ವೈಚಿತ್ರ್ಯವಾದರೂ ಎಂತಹುದು? ರಾಮಮೂರ್ತಿಗಳು ವಿಧಿವಶವಾಗುವ ಕೆಲವೇ ದಿನಗಳ ಮೊದಲು ಒಂದು ಕಥೆಯನ್ನು ಬರೆದಿದ್ದರು. ಅದರ ಹೆಸರು ಮಾರ್ಗಶಿರ ಬಹುಳ ದಶಮಿ. ಅದನ್ನು ಅವರು ಪ್ರಕಟಣೆಗಾಗಿ ಕಳಿಸಿದ್ದು ಹೊಸದಾಗಿ ಆರಂಭವಾಗಿದ್ದ ಮಯೂರ ಮಾಸ ಪತ್ರಿಕೆಗೆ. ಅವರು ಭೂತಾಯಿಯ ಒಡಲಿನಲ್ಲಿ ಸೇರಿ ಎಲ್ಲರನ್ನೂ ಅಗಲಿದ್ದು ಸಹ ಅಂದಿನ ದಿನವೇ. ಅಂದರೆ ಮಾರ್ಗಶಿರ ಬಹುಳ ದಶಮಿಯಂದೆ.

ಆ ಕತೆಯ ಸಾರಾಂಶವಿದ್ದುದು ಸಹ ಜಮೀನುದಾರರ ಮಗನೊಬ್ಬ ಅಂದಿನ ದಿನವೇ ಸಾವನ್ನಪ್ಪುವ ಘಟನೆಗೆ ಸಂಬಂಧಿಸಿದುದು. ಇದು ಎಷ್ಟೊಂದು ವಿಚಿತ್ರ! ಆದರೂ ಸಹ ನಡೆಯಬಾರದ ಘಟನೆಯಾಗಿ ಜೀವಂತ ಸಮಾಧಿಯಾದುದೂ ಅವರ ಅಭಿಮಾನಿಗಳಿಗೆಲ್ಲ ಹೃದಯದಲ್ಲಿ ತಂದಿಟ್ಟ ಸಂಕಟ ಅಷ್ಟೇ ಸತ್ಯ.

ರಾಮಮೂರ್ತಿಯವರ ವ್ಯಕ್ತಿತ್ವ

ರಾಮಮೂರ್ತಿಯವರದು ಅಜಾನುಬಾಹು ಎನ್ನುವಂತಹ ಎತ್ತರ. ಅದಕ್ಕೆ ತಕ್ಕ ಮೈಕಟ್ಟು, ಮೈಬಣ್ಣ ಗೋದಿ. ಬಾದಾಮಿ ಆಕಾರದ ಸುಂದರ ಮುಖದಲ್ಲಿ ಹೊಳೆವ ತೆಳುಕೆಂಪುಗಣ್ಣು. ದಟ್ಟವೂ, ನೀಳವೂ ಆದ ತಲೆಗೂದಲು ಕ್ರಾಪು. ತಾನು ಮಾಡಿದ್ದೇ ಸರಿ ಹೇಳುವುದೇ ನ್ಯಾಯ ಎಂಬ ಹಠಮಾರಿತನ. ಇವೆಲ್ಲವಿದ್ದರೂ ಎಲ್ಲರೊಡನೆ ಸ್ನೇಹದಿಂದ ನಡೆಯುವ ಮನೋಭಾವ. ವಾಚಾಳಿ, ವಾಕ್ಚತುರ.

ಕನ್ನಡ ಚಳುವಳಿಯ ನಾಯಕನಾದ ನಂತರ ಈ ಎಲ್ಲ ಗುಣಗಳೇ ಅವರನ್ನು ಬಿಸಿರಕ್ತದ ಯುವಕರ ಮುಂದಾಳನ್ನಾಗಿ ಮಾಡಿದ್ದು. ತಾನು ನಂಬಿದ್ದ ತತ್ವಕ್ಕಾಗಿ ಆದರ್ಶಕ್ಕಾಗಿ ಎಂತಹ ತ್ಯಾಗವನ್ನಾದರೂ ಮಾಡುವ ಹಠವು ಅವರಲ್ಲಿ ಮೈಗೂಡಿತ್ತು.

ರಾಮಮೂರ್ತಿಯವರನ್ನು ಕುರಿತ ಸಂಪಾದಕೀಯ ಹಾಗೂ ಗಣ್ಯರ ನುಡಿ

ನಮನ :

ರಾಮಮೂರ್ತಿಯವರ ನಿಧನಾನಂತರ ಏರ್ಪಡಿಸಿದ್ದ ಸಂತಾಪ ಸೂಚಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ರಾಮಮೂರ್ತಿಯವರ ಸಹೋದರ ಶ್ರೀ ಚಂದ್ರಮೌಳಿ, ಕೋಣಂದೂರು ಲಿಂಗಪ್ಪ, ಸತ್ಯಪಾಲ, ಕಣಗಾಲ್ ಪ್ರಭಾಕರಶಾಸ್ತ್ರಿ, ಎನ್ ನರಸಿಂಹಯ್ಯ, ಸಾ.ಕೃ.ಸಂಪಂಗಿ ಅವರುಗಳು ಭಾಷಣ ಮಾಡಿ ಇಡೀ ಕನ್ನಡ ಚಳುವಳಿಗಾರರ ಮನದಲ್ಲಿಡಗಿದ್ದ ಸಂತಾಪವನ್ನು ವ್ಯಕ್ತಪಡಿಸಿದರು.

* * *

ರಾಮಮೂರ್ತಿ ಕನ್ನಡ ಕಾದಂಬರಿಕಾರ. ಕನ್ನಡದಲ್ಲಿ ಕಾದಂಬರಿಗಳ ಸೃಷ್ಟಿಕರ್ತ. ಮೇಲಾಗಿ ಕನ್ನಡಿಗರ ಗರಡಿಯಾಳು. ರಾಜಧಾನಿ ಬೆಂಗಳೂರಿನಲ್ಲಿ ಅವರು ನಡೆಸಿದಂತಹ ಕನ್ನಡ ಚಳುವಳಿ ಕನ್ನಡದ ಕೆಚ್ಚು ನಾಡಿನ ನಾಲ್ದೆಸೆಯಲ್ಲಿ ಹಬ್ಬಿತ್ತು.

– ಪ್ರಜಾಮತ ಸಂಪಾದಕೀಯ.

ಸುಮಾರು ಎರಡು ದಶಕಗಳಿಗೂ ಹೆಚ್ಚಿನ ಕಾಲದಿಂದ ಪತ್ರಿಕಾಕರ್ತರಾಗಿ, ಕಾದಂಬರಿಕಾರರಾಗಿ ಕನ್ನಡ ಚಳುವಳಿಗಾರರಾಗಿ ಕನ್ನಡಿಗರಿಗೆ ಚಿರಪರಿಚಿತರಾಗಿದ್ದ ರಾಮಮೂರ್ತಿ ಕಷ್ಟಧಾರಿಯಾದ ದಿಟ್ಟ ಲೇಖಕರು. ಜೀವನದ ಎಲ್ಲ ಸಮಸ್ಯೆಗಳನ್ನೂ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಪರಿಹರಿಸಿಕೊಳ್ಳುವುದರಲ್ಲಿ ಪಳಗಿದ್ದ ಈ ವ್ಯಕ್ತಿ ಕನ್ನಡದಲ್ಲಿ ಪತ್ತೇದಾರಿ ಕಾದಂಬರಿಗೆ ಒಂದು ಭದ್ರಸ್ಥಾನ ಕಲ್ಪಿಸಿದವರು. ಕೆಲವು ಐತಿಹಾಸಿಕ, ಸಾಮಾಜಿಕ, ಕಾದಂಬರಿಗಳನ್ನೂ ಸೇರಿ ಸುಮಾರು 150ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದ ರಾಮಮೂರ್ತಿ ಪ್ರಯೋಗಶೀಲರಾಗಿದ್ದರು. ಒಂದು ಕೆಲಸದಲ್ಲಿ ಸೋತರೆ, ಮತ್ತೊಂದನ್ನು ಹುಡುಕಿ ಮೊದಲಿನಷ್ಟೇ ಉತ್ಸಾಹದಿಂದ ಎಂದೂ ಸೋಲೇ ಅರಿಯದಂತೆ ಮುನ್ನಡೆಯಿಡುತ್ತಿದ್ದ ದಿವಂಗತರು ಸ್ನೇಹಶೀಲರೂ ಚತುರ ವಾಗ್ಮಿಗಳೂ ಆಗಿದ್ದವರು. ಕನ್ನಡನಾಡಿನಲ್ಲಿ ಕನ್ನಡದ ಮೋಕ್ಷಕ್ಕಾಗಿ ಒಂದು ಚಳುವಳಿಯನ್ನು ನಡೆಸಬೇಕಾದ ಕಾಲ ಬಂದಾಗ ಅಂಥ ಚಳುವಳಿಯನ್ನು ಬಿರುಗಾಳಿಯಂತೆ ನಡೆಸಿದರು.

– ಪ್ರಜಾವಾಣಿ ಸಂಪಾದಕೀಯ.

ಇಂದು ಕನ್ನಡಚಿತ್ರಗಳಿಗೆ ಜನತೆ ಹೆಚ್ಚು ಪ್ರೋತ್ಸಾಹ ಕೊಡುತ್ತಿರುವುದು, ಬೆಂಗಳೂರು ಕೆಂಪೆಗೌಡ ರಸ್ತೆಯಲ್ಲಿ ಕನ್ನಡ ಚಿತ್ರಗಳಿಗೆ ಪ್ರದರ್ಶನವಾಗುತ್ತಿರುವುದಕ್ಕೆ ರಾಮಮೂರ್ತಿ ಅವರು ಮುಖ್ಯ ಕಾರಣರು.ಕನ್ನಡ ಚಿತ್ರರಂಗ ಅವರಿಗೆ ಚಿರಋಣಿ ಆಗಲೇ ಬೇಕು.

–ನಾಡಿಗೇರ ಕೃಷ್ಣರಾವ್

1962ರಲ್ಲಿ ನಾವು ಕನ್ನಡ ಚಳುವಳಿ ಆರಂಭಿಸಿದೆವು. ಬೆಂಗಳೂರಿನ ಸಂಘಸಂಸ್ಥೆಗಳನ್ನು ಒಂದು ಗೂಡಿಸಿ ಕರ್ನಾಟಕ ಸಂಯುಕ್ತ ರಂಗ ಕಟ್ಟಿದೆವು. ಬೀದಿ ಬೀದಿಗಳಲ್ಲಿ ಸಂದಿಸಂದಿಗಳಲ್ಲಿ ನಿಂತು ಕನ್ನಡದ ಕಹಳೆ ಊದಿದೆವು.

ಈ ಚಳುವಳಿಯ ಹರಿಕಾರ ರಾಮು. ತನು ಮನಗಳನ್ನು ಕನ್ನಡ ಚಳುವಳಿಗೆ ಅರ್ಪಿಸಿದ ಸಂಯುಕ್ತರಂಗದ ಒಂದು ದೊಡ್ಡ ಕಾರ್ಯಕ್ರಮ ರಾಜ್ಯೋದಯ ಸಮಾರಂಭ. ಇಂತಹ ಒಂದು ಸಮಾರಂಭ ಬೆಂಗಳೂರಿನಲ್ಲಿ ಮೊದಲು ಆಗಿರಲಿಲ್ಲ. ಧನಸಂಗ್ರಹ ವ್ಯವಸ್ಥೆ, ಮೆರವಣಿಗೆ ಅತಿಥಿಅಭ್ಯಾಗತರ ಸತ್ಕಾರಗಳೆಲ್ಲದರಲ್ಲಿಯೂ ರಾಮು ಮುಂದು. ಅವರ ಉತ್ಸಾಹ ಅಮಿತ. ಶಕ್ತಿ ದೈತ್ಯಶಕ್ತಿ.

– ಅ.ನ.ಕೃ.

ಇತರರು ಕಂಡಂತೆ ರಾಮಮೂರ್ತಿ

ಸ್ವಾತಂತ್ರ್ಯ ಹೋರಾಟಗಾರರಾಗಿ, ಪತ್ರಿಕೋದ್ಯಮಿಯಾಗಿ ಬಾಂಬೆ ಷೋವಾಲನಾಗಿ, ಸಾಹಿತಿಯಾಗಿ ಪ್ರಕಾಶಕನಾಗಿ ಎಲ್ಲಕ್ಕಿಂತ ಮಿಗಿಲಾಗಿ ಕನ್ನಡದ ನೆಲದಲ್ಲಿ ಕನ್ನಡಿಗನಿಗೆ ಆತ್ಮಾಭಿಮಾನ ತಂದು ಕೊಟ್ಟ ಚಳುವಳಿಯ ನೇತಾರನಾಗಿ ಪ್ರಚಂಡವಾಗ್ಮಿಯಾಗಿ ಕಟ್ಟಕಡೆಗೆ ವ್ಯವಸಾಯಗಾರನಾಗಿ ಮಣ್ಣಿನಡಿಯಲ್ಲಿ ನಲುಗಿ ಹೋದ ರಾಮಮೂರ್ತಿಯವರದು ಎಂದೆಂದಿಗೂ ಮರೆಯಲಾಗದ ಅಸಮಾನ್ಯ ವ್ಯಕ್ತಿತ್ವವೆಂದೆನ್ನಬಹುದು.

* * *

ರಾಮಮೂರ್ತಿಯವರು ಕನ್ನಡಕ್ಕಾಗಿ ಹೋರಾಟ ನಡೆಸಿ ಕನ್ನಡ ಜನರನ್ನು ತಮ್ಮ ಕ್ರಾಂತಿಯ ನುಡಿಗಳಿಂದ ಜಾಗೃತಗೊಳಿಸಿದ ಧೀಮಂತ ವ್ಯಕ್ತಿ.

* * *

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಪತ್ತೇದಾರಿ ಕಾದಂಬರಿಯುಗವನ್ನು ಆರಂಭಿಸಿ ಹೊಸ ಅಧ್ಯಾಯವನ್ನು ತೆರೆದು ತಮ್ಮ ಅಮೂಲ್ಯ ಕೃತಿಗಳಿಂದ ಸಾಹಿತ್ಯ ಭಂಡಾರವನ್ನು ತುಂಬಿದ ಮಹಾವ್ಯಕ್ತಿ.

* * *

ಕನ್ನಡ ಚಳುವಳಿಗೆ ನಾಂದಿ ಹಾಡಿ, ಕನ್ನಡಿಗರ ಹೃದಯದಿಂದ ಕನ್ನಡದ ಕಿಚ್ಚು ಕೆಚ್ಚಿನ ಜ್ಯೋತಿಯನ್ನು ಬೆಳಗಿಸಿ ಕ್ರಾಂತಿಮಂತ್ರವನ್ನು

ಘೋಷಿಸಿದ ಕನ್ನಡದ ವೀರ ಸೇನಾನಿ ಶ್ರೀ ರಾಮಮೂರ್ತಿ.

* * *

ಆಪ್ತರ "ರಾಮು", ಓದುಗರ "ಪತ್ತೇದಾರಿ ರಾಮಮೂರ್ತಿ" ಕನ್ನಡಿಗರ "ಮ.ರಾಮಮೂರ್ತಿ", ಬೀಡಾ ಅಂಗಡಿಯವರ "ಜುಟ್ಟಾ ರಾಮಮೂರ್ತಿ" ಇಂದು ಕೇವಲ ಗ್ರಂಥಸ್ಥ. ಬರಿ ನೆನಪು ಮಾತ್ರ. ಆದರೂ ಅಂದು ನೀಡಿದ ದೀಪ ಇಂದಿಗೂ ಪ್ರಕಾಶಮಾನ.

* * *

ರಾಮಮೂರ್ತಿಯವರ ನೆನಪಲ್ಲಿ

ಕನ್ನಡಕ್ಕಾಗಿ ದುಡಿದ ಕನ್ನಡಕ್ಕಾಗಿ ಮಡಿದ ರಾಮಮೂರ್ತಿಯವರ ನೆನಪನ್ನು ಚಿರಸ್ಥಾಯಿಯಾಗಿಸಲು ಬೆಂಗಳೂರಿನ ಅರಳೇಪೇಟೆಯಲ್ಲಿ ಮ.ರಾಮಮೂರ್ತಿಯವರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಶ್ರೀರಾಮಪುರ ದಲ್ಲಿನ ಏಳನೇ ಮುಖ್ಯರಸ್ತೆಗೆ ರಾಮಮೂರ್ತಿ ರಸ್ತೆ ಎಂದು ಹೆಸರಿಡಲಾಗಿದೆ. ಶ್ರೀರಾಮಪುರದಲ್ಲಿ ರಾಮಮೂರ್ತಿ ಬಳಗ ಎಂಬ ಸಂಸ್ಥೆಯನ್ನು 11.4.1968ರ ಯುಗಾದಿ ಹಬ್ಬದಂದು ಹುಟ್ಟು ಹಾಕಿ ತನ್ಮೂಲಕ ಕನ್ನಡ ಪರ ಕೆಲಸಗಳನ್ನು ಕ್ರಿಯಾತ್ಮಕವಾಗಿ ಕೈಗೊಳ್ಳಲಾಗುತ್ತಿದೆ. ಚಾಮರಾಜಪೇಟೆಯಲ್ಲಿ ವೃತ್ತವೊಂದಕ್ಕೆ (ಶಂಕರಪುರ ರಸ್ತೆ ಚಾಮರಾಜಪೇಟೆ ಕೂಡುವ ವೃತ್ತ) ರಾಮಮೂರ್ತಿ ವೃತ್ತವೆಂದು ನಾಮಕರಣ ಮಾಡಲಾಗಿದೆ.

ಕರ್ನಾಟಕ ಕೈಗಾರಿಕಾ ವಾಣಿಜ್ಯೋದ್ಯಮಗಳ ಕನ್ನಡ ಸಂಘಗಳ ಒಕ್ಕೂಟವು ಮ.ರಾಮಮೂರ್ತಿಯವರ ಜನ್ಮಶತಮಾನೋತ್ಸವದ ನೆನಪಿಗಾಗಿ ಅವರ ಕಂಚಿನ ಪ್ರತಿಮೆಯನ್ನು ಬೆಂಗಳೂರಿನ ಸಿಟಿ ಇನ್ಸ್ಟಿಟ್ಯೂಟಿನ ವೃತ್ತದಲ್ಲಿ (ಮಕ್ಕಳ ಕೂಟ ಹತ್ತಿರ) ಸ್ಥಾಪಿಸಲು ಯೋಜನೆಯನ್ನು ಹಾಕಿಕೊಂಡಿದ್ದು, ಪ್ರತಿಮೆಯ ನಿರ್ಮಾಣ ಕಾರ್ಯ ಪ್ರಗತಿಯ ಹಂತದಲ್ಲಿದೆ.

27.4.1962ರಂದು ಸಿಟಿ ಇನ್ಸ್ಟಿಟ್ಯೂಟ್ ಆವರಣದಲ್ಲಿ ಚಾಮರಾಜಪೇಟೆಯ ಶ್ರೀರಾಮಸೇವಾ ಮಂಡಲಿಯವರು ಆಯೋಜಿಸುತ್ತಿದ್ದ ರಾಮೋತ್ಸವ ಸಂಗೀತ ಕಾರ್ಯಕ್ರಮಗಳಲ್ಲಿ ಕನ್ನಡ

ಕಲಾವಿದರಿಗೆ ಹೆಚ್ಚಿನ ಅವಕಾಶ ನೀಡಬೇಕೆಂದು ಆಗ್ರಹಿಸಿ ಪ್ರತಿಭಟನೆ ಹಮ್ಮಿಕೊಂಡಿದ್ದು ಇದೇ ಸ್ಥಳದಲ್ಲಿ. ಹಾಗಾಗಿ ಈ ಸ್ಥಳದಲ್ಲಿಯೇ ರಾಮಮೂರ್ತಿಯವರ ಪ್ರತಿಮೆಯನ್ನು ಸ್ಥಾಪಿಸಿ ಹೋರಾಟದ ನೆನಪನ್ನು ಚಿರಸ್ಥಾಯಿಯಾಗುವ ಉದ್ದೇಶವನ್ನು ಒಕ್ಕೂಟ ಹೊಂದಿದೆ.

* * * * *

ಅನುಬಂಧ

1. ಶ್ರೀಮತಿ ಕಮಲಮ್ಮ ರಾಮಮೂರ್ತಿ

2.ಕನ್ನಡ ಯುವಜನ ಪತ್ರಿಕೆಯಲ್ಲಿ ರಾಮಮೂರ್ತಿಯವರ ಸಂಪಾದಕೀಯ

3. ಪ್ರಭಾತ್ ಟಾಕೀಸ್‌ನಲ್ಲಿ ಮೊಟ್ಟಮೊದಲು ಕನ್ನಡ ಚಿತ್ರ ಪ್ರದರ್ಶನಗೊಂಡ ಸಂಭ್ರಮದ ಕ್ಷಣಗಳು


4. ರಾಮಮೂರ್ತಿಯವರು ರಚಿಸಿರುವ ಕೆಲವು ಕಾದಂಬರಿಗಳು

5. ರಾಮಮೂರ್ತಿಯವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಗಳು

6. 1-11-1963ರಂದು ಸಂಯುಕ್ತ ರಂಗದ ಆಶ್ರಯದಲ್ಲಿ ನಡೆದ ಪ್ರಥಮ ಕನ್ನಡ ರಾಜ್ಯೋತ್ಸವದ ಆಹ್ವಾನ ಪತ್ರಿಕೆ

7. ಮ. ರಾಮಮೂರ್ತಿಯವರ ಕಾದಂಬರಿಯ ಮುಖಪುಟ

8. ಕರ್ನಾಟಕ ಕೈಗಾರಿಕಾ ವಾಣಿಜ್ಯೋದ್ಯಮಗಳ ಕನ್ನಡ ಸಂಘಗಳ ಒಕ್ಕೂಟದ ಅಂಗ ಸಂಸ್ಥೆಗಳು



ಶ್ರೀಮತಿ ಕಮಲಮ್ಮ ರಾಮಮೂರ್ತಿ

ರಾಮಮೂರ್ತಿಯವರ ಬಾಲ್ಯದಿಂದಲೂ ಅವರ ತಂದೆ ವೀರಕೇಸರಿ ಸೀತಾರಾಮ ಶಾಸ್ತ್ರಿಗಳ ಪ್ರಭಾವ ಬೀರಿತ್ತು.

ವಿವಾಹ ನಂತರ ಅವರ ಪತ್ನಿ ಕಮಲಮ್ಮನವರೂ ಸಹ ರಾಮಮೂರ್ತಿಯವರ ಅನುಯಾಯಿಗಳಾಗಿ ಅವರ ಎಲ್ಲಾ ಚಟುವಟಿಕೆಗಳಿಗೆ ಸದಾಕಾಲವೂ ಪ್ರೋತ್ಸಾಹವನ್ನು ಕೊಡುತ್ತಿದ್ದರು.

ರಾಮಮೂರ್ತಿಗಳನ್ನು ತಮ್ಮ ಹದಿನೈದನೆಯ ವಯಸ್ಸಿನಲ್ಲಿ, 1942ರಲ್ಲಿ, ವಿವಾಹವಾದ ಕಮಲಮ್ಮನವರು ನಂಜನಗೂಡಿನ ವಿಶ್ವಾನಾಥಯ್ಯ ನಂಜಮ್ಮ ದಂಪತಿಗಳ ಒಬ್ಬಳೇ ಮಗಳು. ವಿಶ್ವನಾಥಯ್ಯ ನವರು ಮೊದಲು ನಂಜನಗೂಡಿನ ಮುನಿಸಿಪಲ್ ಆಫೀಸ್‌ನಲ್ಲಿ ಕೆಲಸದಲ್ಲಿದ್ದು ನಂತರ ರೈಲ್ವೆಯಲ್ಲಿ ಅಧಿಕಾರಿಗಳಾಗಿದ್ದರು.

ಕಮಲಮ್ಮನವರಿಗೆ ಹದಿನೈದು ವಯಸ್ಸು ತುಂಬಿದಾಗ ಪ್ರಸಿದ್ಧ ಪತ್ರಕರ್ತರೂ ಸಾಹಿತಿಗಳು ಹಾಗೂ ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ವೀರಕೇಸರಿ ಸೀತಾರಾಮಶಾಸ್ತ್ರಿ, ಸುಬ್ಬಮ್ಮ ದಂಪತಿಗಳ ಹಿರಿಯ ಮಗ ರಾಮಮೂರ್ತಿಯವರೊಡನೆ ನಂಜನಗೂಡಿನಲ್ಲಿ ವಿವಾಹವಾಯಿತು. ಆಗ ರಾಮಮೂರ್ತಿಗಳಿಗೆ 24 ವರ್ಷ. ಅಂದಿನ ಕಾಲದ ಸಂಪ್ರದಾಯದಂತೆ ಕೂಡು ಕುಟುಂಬದ ಸೊಸೆಯಾಗಿ ಗಂಡನ ಮನೆಯನ್ನು ಸೇರಿದ ಕಮಲಮ್ಮನವರು ಕುಟುಂಬದ ಎಲ್ಲರ ಅಚ್ಚುಮೆಚ್ಚಿನ ಸದಸ್ಯರಾದರು. ಮದುವೆಯಾದ ಹತ್ತು ವರ್ಷಗಳ ನಂತರ ಇಬ್ಬರು ಗಂಡುಮಕ್ಕಳ ತಾಯಿಯಾದರು.

ಮಾವ ಹೆಸರಾಂತ ಪತ್ರಕರ್ತ, ಸಾಹಿತಿ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು. ಗಂಡನೂ ಸಹ ಪತ್ರಕರ್ತ, ಸಾಹಿತಿ. ಸಾರ್ವಜನಿಕ

ಹೋರಾಟಗಳಲ್ಲಿ ಮಗ್ನರಾಗಿದ್ದವರು. ಹೀಗಾಗಿ ಕನ್ನಡದ ಹಲವು ಪ್ರಸಿದ್ಧ ವ್ಯಕ್ತಿಗಳು ಇವರ ಮನೆಗೆ ಬರುತ್ತಿದ್ದರು. ಅ.ನ.ಕೃ, ತ.ರಾ.ಸು, ನಾಡಿಗೇರ ಕೃಷ್ಣರಾಯರು, ಮೈ.ಸು.ಶೇಷಗಿರಿರಾವ್, ಮಾ.ಭೀ.ಶೇಷಗಿರಿರಾವ್, ನಾ ಕೃ ಸತ್ಯನಾರಾಯಣ, ಜೆ.ನೀ.ಈಶ್ವರಪ್ಪ, ಕಾಳಿಂಗರಾವ್, ಕೃಷ್ಣಮೂರ್ತಿ ಪುರಾಣಿಕ್, ವಾಟಾಳ್ ನಾಗರಾಜ್ ಮುಂತಾದ ಸಾಹಿತಿಗಳೂ ಪತ್ರಕರ್ತರೂ ಚಳುವಳಿಗಾರರೂ ಮ.ರಾಮಮೂರ್ತಿಯವರೊಂದಿಗೆ ಸಮಾಲೋಚಿಸಲು ಆಗಮಿಸುತ್ತಿದ್ದರು. ಇವರೆಲ್ಲರಿಗೆ ತಮ್ಮ ಆತಿಥ್ಯದ ಸವಿರುಚಿಯನ್ನು ಉಣಬಡಿಸುತ್ತಿದ್ದರು ಕಮಲಮ್ಮನವರು.

ತಮ್ಮ ಎರಡು ದಶಕಗಳ ದಾಂಪತ್ಯ ಜೀವನದುದ್ದಕ್ಕೂ ಗಂಡನ ಸಾಹಿತ್ಯ ಸೇವೆ, ಕನ್ನಡ ದೀಕ್ಷೆಯ ಕಾರ್ಯಗಳಲ್ಲಿ ಸಂಪೂರ್ಣ ಸಹಕಾರ, ತುಂಬು ಬೆಂಬಲವನ್ನು ನೀಡುತ್ತಿದ್ದ ಕಮಲಮ್ಮನವರು ಗಂಡನ ಎಲ್ಲ ಕಾರ್ಯಗಳಲ್ಲಿಯೂ ಸಹಕರಿಸಿ ನಿಜವಾದ ಅರ್ಥದಲ್ಲಿ ಸಹ ಧರ್ಮಿಣಿಯೇ ಆಗಿದ್ದರು.

1967ರ ಡಿಸೆಂಬರ್ 25ರಂದು ತಾವು ತೋಡಿಸುತ್ತಿದ್ದ ಬಾವಿಯಲ್ಲಿ ನೀರು ಬಂದಿರುವುದನ್ನು ತಿಳಿದು ಇಬ್ಬರು ಮಕ್ಕಳೊಡನೆ ತೋಟಕ್ಕೆ ಹೋಗಿದ್ದಾಗ ಅಲ್ಲಿ ದಡ ಕುಸಿದು ಬಿದ್ದು, ರಾಮಮೂರ್ತಿಯವರು ಮಕ್ಕಳೊಂದಿಗೆ ಮಣ್ಣು ಪಾಲಾದರು. ಗಂಡ, ಮಕ್ಕಳನ್ನು ಕಳೆದುಕೊಂಡ ಕಮಲಮ್ಮನವರು ಒಬ್ಬಂಟಿಯಾದರೂ ಗಂಡನ ಮನೆಯವರ ಬೆಂಬಲದಿಂದ ಹತ್ತಿಪ್ಪತ್ತು ವರ್ಷಗಳ ಕಾಲ ಅವರೊಂದಿಗೆ ಜೀವಿಸುತ್ತಿದ್ದರು. ಆದರೆ ಈಗ ಕೆಲವು ವರ್ಷಗಳಿಂದ ಬೆಂಗಳೂರಿನ ರಾಮಕೃಷ್ಣಾಶ್ರಮಕ್ಕೆ ಸೇರಿದ ಶಾರದಾ ಕುಟೀರದಲ್ಲಿ ನೆಲೆಸಿದ್ದಾರೆ.

ಅವರಿಗೆ ಸರ್ಕಾರದಿಂದ ಪ್ರತಿ ತಿಂಗಳೂ ಅಲ್ಪಮೊತ್ತದ ಸಹಾಯಧನ ಸಿಗುತ್ತಿದೆ. ಅಲ್ಲದೆ ಕೆಲವು ಸಂಘ ಸಂಸ್ಥೆಗಳು ಸಹ ಅಷ್ಟಿಷ್ಟು ನೆರವನ್ನು ನೀಡುವುದನ್ನು ಬಿಟ್ಟರೆ ಅವರಿಗೆ ಮತ್ತಾವುದೇ ಸಹಾಯವು ಸಿಗುತ್ತಿಲ್ಲ. ಆದರೆ ಕನ್ನಡಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡಿದ ರಾಮಮೂರ್ತಿಯವರ ಪತ್ನಿಗೆ ಮತ್ತಷ್ಟು ನೆರವು ಸಿಗಬೇಕು. ಅದನ್ನು

ಕಾರ್ಯಗತಗೊಳಿಸಲು ಸರ್ಕಾರ ಹಾಗೂ ಕನ್ನಡ ಸಂಘಸಂಸ್ಥೆಗಳು ಕಾರ್ಯೋನ್ಮುಖರಾಗಬೇಕು.

ಕನ್ನಡ ಯುವಜನ ಪತ್ರಿಕೆಯಲ್ಲಿ ರಾಮಮೂರ್ತಿಯವರ ಸಂಪಾದಕೀಯಗಳು

1. ಕನ್ನಡ ನಾಡಿನ ಇತಿಹಾಸದಲ್ಲಿ ಸುದಿನ – ದಿ.8.9.1963

ವರ್ಷಋತುವಿನ ಪ್ರಶಾಂತ ವಾತಾವರಣದಲ್ಲಿ ಆರಂಭವಾದ ವಿಧಾನಸಭಾಧಿವೇಶನದ ಪ್ರಥಮದಿನ ಕನ್ನಡ ನಾಡಿನ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯಾಗಿ ಅಂಗೀಕರಿಸುವ ಮಸೂದೆಯನ್ನು ಮಂಡಿಸಿ ಇದೇ ಸೆಪ್ಟೆಂಬರ್ ಎರಡನೇ ದಿನವನ್ನು ಕನ್ನಡ ನಾಡಿನ ಇತಿಹಾಸದಲ್ಲಿ ಸುದಿನವನ್ನಾಗಿ ಮಾಡಿದರು.

ಮಸೂದೆಯನ್ನು ಮಂಡಿಸಿದ ಮುಖ್ಯಮಂತ್ರಿ "ಕನ್ನಡ ಆಡಳಿತ ಭಾಷೆಯಾಗಬೇಕೆಂಬುದು ಎಲ್ಲ ಜನರ ಬಹು ದಿನದ ಆಸೆಯಾಗಿತ್ತು. ಆದುದರಿಂದ ಅಭಿಮಾನದಿಂದ ಎಲ್ಲರೂ ಸ್ವಾಗತಿಸುವ ಮಸೂದೆ ಇದು" ಎಂದು ಹೇಳಿದರು.

ಈ ಮಾತು ಅಕ್ಷರಶಃ ನಿಜ.

ಇದಕ್ಕೆ ನಮ್ಮ ಶಾಸಕರೆಲ್ಲರೂ 'ಅಸ್ತು' ಎಂದು ಹೇಳಿದರು. "ಅಷ್ಟೇ ಅಲ್ಲ, ರಾಜ್ಯಾದ್ಯಂತ ಕೂಡಲೇ ಜಾರಿಗೆ ತರಬೇಕೆಂದು" ಒತ್ತಾಯ ಮಾಡಿದರು.

"ಇದುವರೆಗೆ ಇದ್ದ ಟೈಪ್‌ರೈಟರುಗಳ ಅಭಾವವೂ ಇನ್ನು ಇಲ್ಲ" ಎಂದು ಕನ್ನಡ ಆಡಳಿತಭಾಷೆಯಾಗಲು ಅಡ್ಡಿ ಆತಂಕಗಳಿಲ್ಲವೆಂದು ಘೋಷಿಸಿದ ಮುಖ್ಯಮಂತ್ರಿ ಕನ್ನಡದಲ್ಲಿ ಕೆಲ ತಾಂತ್ರಿಕ ಶಬ್ದಗಳಿಲ್ಲವೆಂಬ ನೆವವನ್ನು ಕಿತ್ತುಹಾಕಿ, ಅವಶ್ಯಕವಿದ್ದರೆ ಅದೇಪದಗಳನ್ನು ಉಪಯೋಗಿಸಿಕೊಂಡು ಕನ್ನಡದ ರಥವನ್ನು ಮುಂದೆಳೆದುಕೊಂಡು ಹೋಗುವ ತಮ್ಮ ದಿಟ್ಟತನವನ್ನು ಪ್ರದರ್ಶಿಸಿದರು.

ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳನ್ನು ಮುಂದುವರಿಸಿಕೊಂಡು ಹೋಗುವ ಅವಕಾಶ ಈ ಮಸೂದೆಯಲ್ಲಿರುವುದಕ್ಕಾಗಿಯೂ ಕನ್ನಡ

ಪೂರ್ಣರೂಪದಲ್ಲಿ ಆಡಳಿತಭಾಷೆಯಾಗಲು ಹಂತಗಳಿವೆಯೆಂದೂ ಕೆಲ ಮಂದಿ ಉದ್ದೇಶಪೂರ್ವಕವಾಗಿ ಮಾಡುವ ದುಷ್ಪಾಚಾರಗಳಿಗೆ ಕನ್ನಡ ಜನಕೋಟಿ ಕಿವಿಗೊಡಬಾರದು. ಭಾರತದ ಲೋಕಸಭೆಯ ತೀರ್ಮಾನಕ್ಕೆ ವಿರೋಧವಾಗಿ ರಾಜ್ಯ ಸರ್ಕಾರ ಯಾವ ನಿರ್ಣಯವನ್ನೂ ಮಾಡಲು ಅವಕಾಶವಿಲ್ಲವೆಂಬುದನ್ನು ಶಾಂತಿಮಾರ್ಗದಲ್ಲಿ ಹಳೆಯ ಏರ್ಪಾಟು ಹೋಗಿ ಹೊಸ ಏರ್ಪಾಟು ಬರುವಾಗ ಹಂತಗಳಿರುವುದು ಅನಿವಾರ್ಯವೆಂದೂ ನಾವು ಜನತೆಯ ಗಮನಕ್ಕೆ ತರಲು ಅಪೇಕ್ಷಿಸುತ್ತೇವೆ.

ಈ ಮಸೂದೆಯನ್ನು ಮಂಡಿಸಿದ ಮುಖ್ಯಮಂತ್ರಿಗಳು ಇದು ಪೂರ್ಣವಾಗಿ ಜಾರಿಗೆ ಬರುವವರೆವಿಗೆ ಅಧಿಕಾರದಲ್ಲಿದ್ದು ಕನ್ನಡ ಜನತೆಯ ಮಹಾಭಟನಂತೆ ಕಾದು ಕನ್ನಡ ಜನದ ಈ ಬಯಕೆ ಈಡೇರುವಂತೆ ಮಾಡಲಿ ಎಂದು ಹಾರೈಸುತ್ತೇವೆ ಹಾಗೆಯೇ ಶ್ರೀ ನಿಜಲಿಂಗಪ್ಪನವರು ಕನ್ನಡದ ಈ ಮಹಾರಥ ಚಿಕ್ಕಬಳ್ಳಾಪುರದ ರೈಲುಗಾಡಿಯಂತೆ ಸರಿಯ ಗೊಡದೇ ಬೆಂಗಳೂರು-ಪೂನಾ ಎಕ್ಸ್‌ಪ್ರೆಸ್‌ನಂತೆ ಓಡಿಸಲಿ ಎಂದೂ ಆಶಿಸುತ್ತೇವೆ.

ಈ ಮಸೂದೆಯನ್ನು ವಿರೋಧಿಸಿದ ಏಕೈಕ ವ್ಯಕ್ತಿಯೆಂದರೆ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರಾದ ಶ್ರೀ ವಿ.ಎಸ್.ಪಾಟೀಲರು. ಬೇರೆ ಬೇರೆ ಭಾಷೆಯವರು ಇರುವ ರಾಜ್ಯವನ್ನು ಭಾಷಾ ರಾಜ್ಯವೆಂದು ಪರಿಗಣಿಸುವುದು ಸರಿಯಲ್ಲವೆಂದು ಹೇಳಿದರು. ಈ ರಾಜ್ಯವನ್ನು ಭಾಷೆಯ ಆಧಾರದಿಂದ ರಚಿಸಿಲ್ಲವೆಂದು ಶ್ರೀ ಕೆ. ಹನುಮಂತಯ್ಯನವರು ಸ್ಪಷ್ಟಪಡಿಸಿರುವರೆಂದೂ ಹೇಳಿದರು. ಮರಾಠಿಯನ್ನು ಆಡಳಿತ ಭಾಷೆಯಾಗಿ ಒಪ್ಪಬೇಕಾಗಿದ್ದಿತೆಂದು ಆಗ್ರಹ ಮಾಡಿದರು.

ಈ ವಾದ ಹುರುಳಿಲ್ಲವೆಂದು ಹೇಳಬೇಕಾದ ಅಗತ್ಯವೇ ಇಲ್ಲ. ಇಂತಹ ವಾದಗಳನ್ನು ಮಾಡುವವರಿಗೆ ಇಂಬು ಮಾಡಿಕೊಟ್ಟ ಶ್ರೀ ಕೆಂಗಲ್ಲರ ವರ್ತನೆಯನ್ನು ಖಂಡಿಸದೆ ಗತ್ಯಂತರವೇ ಇಲ್ಲ.

ಇವೆಲ್ಲ ಸಣ್ಣ ಅಂಶಗಳು

ಕನ್ನಡ ಜನತೆಯ ಬಹು ದಿನಗಳ ಬಯಕೆ ಈಡೇರಿಸಲು ಈ

ಮಸೂದೆಯನ್ನು ವಿಳಂಬವಾದರೂ ತಂದ ಮುಖ್ಯಮಂತ್ರಿಗಳನ್ನೂ, ರಾಜ್ಯ ಮಂತ್ರಿಗಳನ್ನೂ ಹೃತ್ಪೂರ್ವಕವಾಗಿ ನಾವು ಅಭಿನಂದಿಸುತ್ತೇವೆ.

2. ಕನ್ನಡ ರಾಜ್ಯೋತ್ಸವ ಸಮೀಪಿಸಿತು – ದಿ. 29-09-1963

ನವೆಂಬರ್ ತಿಂಗಳು ಹತ್ತಿರವಾದಂತೆಲ್ಲ ಕನ್ನಡ ರಾಜ್ಯೋತ್ಸವ ದಿನವು ಸಮೀಪಿಸುತ್ತಿದೆ.

ಕರ್ನಾಟಕ ! ರಾಜ್ಯೋತ್ಸವ !!

ಕನ್ನಡ ನಾಡು ಒಂದಾಗುವುದೆಂದರೆ ಕನ್ನಡ ಮಾತನಾಡುವ ಅಣ್ಣತಮ್ಮಂದಿರೆಲ್ಲಾ ಒಂದಾಗುತ್ತಾರೆಂದಿದ್ದೆವು ಆದರೆ ಹಾಗಾಗಲಿಲ್ಲ. ಕಾಸರಗೋಡು ಕೈತಪ್ಪಿ ಹೋಯಿತು, ಹೊಸೂರು, ಡೆಂಕಣೀಕೋಟೆ, ಸೇಲಂ, ಕೊಯಮತ್ತೂರಿನ ಭಾಗಗಳು ಕಳಚಿಕೊಂಡವು. ಆಲೂರು, ಆದವಾನಿ, ರಾಯದುರ್ಗಗಳು ಹೋದುವು. ಸೊಲ್ಲಾಪುರ ಹೋಯಿತು. ಬೆಳಗಾವಿ ಕಾರವಾರಗಳ ಮೇಲೆ ಪಿಡುಗು ಬಂದಿದೆ.

ನಾವು ನಿರೀಕ್ಷಿಸಿದ ಭೂ ಭಾಗಗಳು ನಮಗೆ ಬರಲಿಲ್ಲ !

ಏಳು ವರ್ಷಗಳ ಹಿಂದೆ ನೆರೆ ರಾಜ್ಯಗಳಿಗೆ ಬೇಡದ ಜಿಲ್ಲೆಗಳನ್ನು ಸೇರಿಸಿ ಒಂದು ಕಡೆ ಕಲೆ ಹಾಕಲಾಯಿತು. ಈ ಕಲೆ ಹಾಕಿದ ಜಿಲ್ಲೆಗಳನ್ನು ಕರ್ನಾಟಕವೆಂದು ಸಹ ಕರೆಯಲಿಲ್ಲ. ಹಳೆಯ ಮೈಸೂರು, ಹೊಸ ಮೈಸೂರು ಎಂಬ ಹೆಸರುಗಳಿಂದ ಕರೆಯಲಾಗುತ್ತಿದೆ. ಮೈಸೂರು ಕರ್ನಾಟಕಗಳ ಹೋರಾಟದಲ್ಲಿ ಒಂದುಗೂಡಿರುವ ಕನ್ನಡ ಜನರು ಪುನಃ ಒಡೆದು ಹೋಗುವ ಸೂಚನೆಗಳು ಕಂಡು ಬರುತ್ತಿವೆ.

"ಏಳು ವರ್ಷಗಳಿಗೆ ನನ್ನ ಮಗ ದಂಟು" ಎಂಬುದೊಂದು ಗಾದೆ. ಹಾಗೆ ಏಳು ವರ್ಷಗಳಿಗೆ ಕನ್ನಡ ಆಡಳಿತಭಾಷೆಯೆಂದು ಘೋಷಿಸಲಾಯಿತು. ಇದು ಸಾಂಕೇತಿಕವೇ ಹೊರತು ಕ್ರಿಯಾತ್ಮಕವಲ್ಲ. ಯಾವ ಯಾವ ಜಿಲ್ಲೆಗಳಲ್ಲಿ, ಯಾವ ಯಾವ ಶಾಖೆಗಳಲ್ಲಿ ಹೇಗೆ ಹೇಗೆ ಬೇಕೋ ಹಾಗೆ ಸರ್ಕಾರವು ತನಗೆ ಇಷ್ಟವಿದ್ದರೆ ಕನ್ನಡವನ್ನು ಜಾರಿ ಕೊಡಬಹುದು. ಇಲ್ಲದಿದ್ದರೆ ಇಲ್ಲ. ಇಷ್ಟು ದಿನದೊಳಗೆ ನಾಡಿನಾದ್ಯಂತ ಕನ್ನಡ ಜಾರಿಗೆ ಬರುತ್ತದೆಂಬ ಖಚಿತ ತೀರ್ಮಾನವಿಲ್ಲ.

ಹರಿದು ಮುರಿದು ಹೋಗಿರುವ ಕನ್ನಡ ನಾಡು ಒಂದಾದರೆ ಕನ್ನಡ ಜನದ ಹಿತ ರಕ್ಷಣೆಯಾಗುವುದು ಎಂದು ಜನತೆ ನಿರೀಕ್ಷಿಸಿದ್ದಿತು.

ಆದರೆ ಅದೂ ಈಡೇರಲಿಲ್ಲ. ಕನ್ನಡ ನಾಡಿನಲ್ಲಿ ಕನ್ನಡಿಗ ಕಂಡವರ ಮನೆಯಲ್ಲಿ ಇರುವಂತೆ ಇರಬೇಕಾಗಿದೆ.

ಕನ್ನಡ ಮಕ್ಕಳಿಗೆ ಶಾಲಾ-ಕಾಲೇಜುಗಳಲ್ಲಿ ಸೀಟುಗಳಿಲ್ಲ. ಕಾರ್ಖಾನೆಗಳಲ್ಲಿ ಕೆಲಸವಿಲ್ಲ. ಕನ್ನಡ ಜನಕ್ಕೆ ಕೇಂದ್ರದ ಕೈಗಾರಿಕೆಗಳಲ್ಲಿ ಕೆಲಸಗಳನ್ನು ಮೀಸಲಾಗಿಡಬೇಕೆಂದು ಕೇಳುವುದೂ ಸಾಧ್ಯವಿಲ್ಲವೆನ್ನುತ್ತಾರೆ ನಮ್ಮ ಮಾನ್ಯ ಮಂತ್ರಿಗಳು. ಶೇ95ರಷ್ಟು ಮಂದಿ ನೆರೆ ಪ್ರಾಂತ್ಯದವರೇ ತುಂಬಿ ಹೋಗಿರುವ ಫ್ಯಾಕ್ಟರಿಗಳಲ್ಲಿಯೂ ನಮ್ಮವರಿಗೆ ಸಾಕಷ್ಟು ಪ್ರಾಧಾನ್ಯತೆ ಇದೆ ಎಂದು ಹೇಳುವ ದುರ್ಗತಿ ಪ್ರಾಪ್ತವಾಗಿದೆ ನಮಗೆ.

ನೆರೆ ಪ್ರಾಂತಗಳಿಂದ ಉದ್ಯೋಗಿಗಳನ್ನು ತೆಗೆದುಕೊಂಡಾಗ ಆದ ಅನ್ಯಾಯಕ್ಕೆ ಮಿತಿ ಮೇರೆಗಳೇ ಇಲ್ಲ. ಪೂರ್ಣವಾಗಿ ಕನ್ನಡದ ಜನ ಕನ್ನಡ ನಾಡಿಗೆ ಬಂದರೇ ಎಂದರೆ ಅದೂ ಇಲ್ಲ. ನಮ್ಮ 93 ಮಂದಿ ಪೋಲೀಸ್ ಉದ್ಯೋಗಿಗಳನ್ನು ತಮಿಳರ ಮಧ್ಯದಿಂದ ಕರೆಸಿಕೊಡಿ ಎಂದು ಕೇಳಿ ಕೇಳಿ ನಮ್ಮ ಗಂಟಲು ಒಣಗುವ ಸ್ಥಿತಿ ಬಂದಿದೆ.

ಇದಿಷ್ಟೇ ಅಲ್ಲ, ಇತರ ವ್ಯವಹಾರಗಳಲ್ಲಿಯೂ ಇದೆ ಆಕಾಶವಾಣಿ, ಅಲ್ಲಿ ಕನ್ನಡಕ್ಕೆ ಮನ್ನಣೆಯಿಲ್ಲ. ಸಾರ್ವಜನಿಕ ಜೀವನ, ಅಲ್ಲಿ ಕನ್ನಡಕ್ಕೆ ಗೌರವವಿಲ್ಲ.

ಇವೆಲ್ಲದಕ್ಕೂ ಕಾರಣ ನಮ್ಮ ಮಂತ್ರಿಗಳು ! ನಮ್ಮ ಶಾಸಕರು.

ನಮ್ಮ ಮಂತ್ರಿಗಳೂ ನಮ್ಮ ಶಾಸಕರೂ ನಾಡು ನುಡಿಗಳಲ್ಲಿ ಅಭಿಮಾನಶೂನ್ಯರೆಂದು ನಾವು ಹೇಳುವುದಿಲ್ಲ. ಅವರ ಅಭಿಮಾನ ಈಗಿರುವುದಕ್ಕಿಂತ ಸ್ವಲ್ಪ ಹೆಚ್ಚಬೇಕೆಂದು ನಾವು ಅಪೇಕ್ಷಿಸುತ್ತೇವೆ.

ಅಷ್ಟರಿಂದಲೇ ನಮ್ಮ ಎಷ್ಟೋ ಸಮಸ್ಯೆಗಳು ಬಗೆಹರಿದು ಹೋಗುತ್ತವೆ.

ಶೀಘ್ರದಲ್ಲಿಯೇ ಇನ್ನೊಂದು ತಿಂಗಳಲ್ಲಿಯೇ ರಾಜ್ಯೋತ್ಸವವು ಬರಲಿದೆ.

ಕನ್ನಡ ರಾಜ್ಯೋತ್ಸವ ದಿನವನ್ನು ರಾಜ್ಯಸರ್ಕಾರ ಸಾರ್ವತ್ರಿಕ ರಜಾ ದಿನವನ್ನಾಗಿ ಘೋಷಿಸಲಿ. ನಾಡಿನಾದ್ಯಂತ ಫ್ಯಾಕ್ಟರಿಗಳು, ಕಾರ್ಖಾನೆಗಳು, ಕಚೇರಿಗಳು ಎಲ್ಲದಕ್ಕೂ ರಜಾ ಕೊಡಲಿ. ಮಂತ್ರಿಗಳು, ಶಾಸಕರು, ಪ್ರಜೆಗಳು ಎಲ್ಲರೂ ರಾಜ್ಯೋತ್ಸವವನ್ನು ವೈಭವದಿಂದ ಆಚರಿಸಲಿ.

ಆ ಪೂಜೆಯಿಂದ ಸಂತೃಪ್ತಳಾದ ಕನ್ನಡ ರಾಜರಾಜೇಶ್ವರಿಯು ಕನ್ನಡ ಮಕ್ಕಳಲ್ಲಿ ಅಭಿಮಾನವನ್ನು ತುಂಬಲಿ.

3. ಕನ್ನಡ ರಾಜ್ಯೋತ್ಸವಕ್ಕೆ ರಜಾ ಕೊಡಬೇಕು – ದಿ. 06-10-1963

ನವೆಂಬರ್ ಮೊದಲನೇ ತಾರೀಖು ಕನ್ನಡ ರಾಜ್ಯೋತ್ಸವ ದಿನ. ಹರಿದು ಹಂಚಿ ಹೋಗಿದ್ದ ಕನ್ನಡ ನಾಡಿನ ಕೆಲ ಭಾಗಗಳು ಸೇರಿ ಒಂದು ಬಗೆಯಾಗಿ ಕನ್ನಡ ನಾಡು ಜನ್ಮಿಸಿದ ದಿನ. ಎರಡೂವರೆ ಕೋಟಿ ಕನ್ನಡ ಜನದ ಆಶೋತ್ತರಗಳ ಸಂಕೇತ.

ನಮ್ಮ ಕನ್ನಡ ಸರ್ಕಾರವೂ, ಕನ್ನಡ ಜನರೂ ಈ ದಿನವನ್ನು ನಾಡಿನ ದೊಡ್ಡ ಹಬ್ಬವಾಗಿ ಆಚರಿಸಬೇಕು. ಏಕೋ ಏನೋ ಇದನ್ನು ನಮ್ಮ ಸರ್ಕಾರ ಬೃಹತ್‌ರೂಪದಿಂದ ಆಚರಿಸುತ್ತಿಲ್ಲ. ಆದರೆ ಕನ್ನಡ ಜನತೆ ಪ್ರತಿಯೊಂದು ಊರಿನಲ್ಲಿಯೂ, ಕೇರಿಯಲ್ಲಿಯೂ ಆ ದಿನವನ್ನು ಮಹೋತ್ಸವವಾಗಿ ಆಚರಿಸುತ್ತದೆ. ಪ್ರತಿಯೊಂದು ಕಡೆಯೂ ಕನ್ನಡದ ಮೆರವಣಿಗೆಗಳನ್ನು ಮಾಡಿ ಕನ್ನಡದ ಸಭೆಗಳನ್ನು ಮಾಡಲಾಗುತ್ತದೆ. ಹೀಗೆ ಬೆಳಗಿಂದ ಸಂಜೆಯವರೆಗೆ ಆ ದಿನ ಉತ್ಸವದ ದಿನವಾಗಿ, ಕನ್ನಡದ ಜಾತ್ರೆಯಾಗಿ, ನಾಡ ಹಬ್ಬವಾಗಿ ಆಚರಿಸಲ್ಪಡುತ್ತದೆ.

ನಾಡಿನಲ್ಲಿ ಪ್ರಜಾ ಸರ್ಕಾರವಿರುವ ಈ ಕಾಲದಲ್ಲಿ ಜನತೆಯ ದೊಡ್ಡ ಹಬ್ಬವನ್ನು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸುವುದು ಕರ್ತವ್ಯ. ಆ ದಿನ ಸರ್ಕಾರಿ ಕಛೇರಿಗಳಿಗೂ, ಶಾಲಾ ಕಾಲೇಜುಗಳಿಗೂ ರಜಾ ಕೊಡಬೇಕು. ಫ್ಯಾಕ್ಟರಿಗಳೂ, ಕೈಗಾರಿಕೆಗಳೂ ಮತ್ತು ಉದ್ಯಮಗಳೂ ರಜಾ ಕೊಡುವಂತೆ ಒತ್ತಾಯ ಮಾಡಬೇಕು.

ಅಲ್ಲದೇ ಈ ದಿನವನ್ನು ವೈಭವದಿಂದ ಆಚರಿಸಬೇಕು.

ನಮ್ಮ ಮಂತ್ರಿಗಳು ಈ ರೀತಿ ಮಾಡುವುದಕ್ಕೆ ಇರಬಹುದಾದ ಅಡಚಣೆಗಳನ್ನು ಹೇಳಬಹುದು. ಸರ್ಕಾರ ಕಾರ್ಯೋನ್ಮುಖವಾಗುವುದಕ್ಕೆ ಅಡಚಣೆಗಳಿರುವುದು ಸ್ವಾಭಾವಿಕ. ಆದರೆ ಅವುಗಳನ್ನೆಲ್ಲಾ ಬದಿಗೊತ್ತಿ ಜನತೆಯ ಆಶೋತ್ತರದಂತೆ ನಡೆಯುವುದು ಪ್ರಜಾಯುಗದಲ್ಲಿ ಆದ್ಯಧರ್ಮ.

4. ರಜಾಕೊಡಲು ಆತಂಕವೇನಿದೆ – ದಿ.20–10–1963

ಕನ್ನಡ ರಾಜ್ಯೋತ್ಸವದ ದಿನವಾದ ನವೆಂಬರ್1 ರಂದು ಸಾರ್ವತ್ರಿಕ ರಜಾದಿನವಾಗಲೆಂದೂ ಸರ್ಕಾರಿ ನೌಕರರು, ಮಿಲ್ ಕಾರ್ಖಾನೆಗಳ ಕಾರ್ಮಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಆ ದಿನವನ್ನು ವಿರಾಮದಿಂದ ಕಳೆಯಬೇಕೆಂದೂ ಕನ್ನಡಿಗರ ಆಶೋತ್ತರವಾಗಿದೆ.

ಕನ್ನಡ ಜನದ ಹಲವಾರು ಆಶೋತ್ತರಗಳಂತೆಯೇ ಸರ್ಕಾರ ಇದನ್ನೂ ನೆನೆಗುದಿಗೆ ಹಾಕಿದೆ. ಅಷ್ಟೇ ಅಲ್ಲ, ಆ ದಿನ ರಜಾ ಕೊಡುವುದರಲ್ಲಿ ಸರ್ಕಾರ ಆಸಕ್ತಿ ವಹಿಸುತ್ತಿಲ್ಲವೆಂದು ಹೇಳಬಹುದಾಗಿದೆ.

ಇತರ ಯಾವ ಪ್ರಾಂತ್ಯದಲ್ಲಿಯೂ ನವೆಂಬರ್ 1ರಂದು ರಜಾ ಕೊಡದೇ ಇರುವುದರಿಂದಲೂ ಮತ್ತು ರಜಾ ದಿನಗಳನ್ನು ಕಡಿಮೆ ಮಾಡಬೇಕೆಂಬುದು ಭಾರತ ಸರ್ಕಾರದ ನೀತಿಯಾಗಿರುವುದರಿಂದಲೂ ನಮ್ಮ ಸರ್ಕಾರದವರು ನವೆಂಬರ್ 1 ರಂದು ರಜಾ ಕೊಡಲು ಹಿಂತೆಗೆಯಬೇಕಾಗಿಲ್ಲ.

ವರ್ಷದಲ್ಲಿ ಇಷ್ಟು ದಿನಗಳಷ್ಟು ಸಾರ್ವತ್ರಿಕ ರಜಾ ಕೊಡಬಹುದೆಂದು ಸರ್ಕಾರದ ನೀತಿಯಾಗಿರಬಹುದಾದರೂ ಸಹ ನವೆಂಬರ್ 1 ರಂದು ರಜಾ ಕೊಡಲು ಇದು ಯಾವ ರೀತಿಯಾಗಿಯೂ ಅಡ್ಡಿಯಾಗುವುದಿಲ್ಲ. ರಾಜ್ಯೋದಯ ದಿನದಷ್ಟು ಇತರ ವಿಶೇಷ ದಿನಗಳು ಪ್ರಾಮುಖ್ಯವಲ್ಲವಾದುದರಿಂದ ಯಾವುದಾದರೊಂದು ರಜಾ ದಿನವನ್ನು ತೆಗೆದು ಹಾಕಿ ಅದರ ಬದಲು ನವೆಂಬರ್ 1 ರಂದು ರಜಾ ಕೊಡುವುದರಲ್ಲಿ ಬಾಧಕವೇನೂ ಆಗುವುದಿಲ್ಲ.

ರಜಾ ದಿನಗಳನ್ನು ಹೆಚ್ಚು ಮಾಡಬಾರದೆಂಬುದು ಮೂಲ ನೀತಿಯಾಗಿದ್ದರೂ, ಮಿತಿಯೊಳಗೆ ರಜಾಗಳನ್ನು ಕೊಡಲು ಪ್ರಾಂತ ಸರ್ಕಾರಗಳಿಗೆ ಸ್ವಾತಂತ್ರ್ಯವಿದೆ.

ಮಹಾರಾಷ್ಟ್ರ ಪ್ರಾಂತವು ನಿರ್ಮಾಣವಾದ ತರುಣದಲ್ಲಿಯೇ ಅಲ್ಲಿ ಶಿವಾಜಿ ಜನ್ಮ ದಿನವನ್ನೂ, ತಿಲಕರ ಜನ್ಮ ದಿನವನ್ನೂ ರಜಾ ದಿನಗಳಾಗಿ ಘೋಷಿಸಲಾಯಿತು. ನಮ್ಮ ನಾಡಿನಲ್ಲಿಯೂ ಭಕ್ತಿ ಭಂಡಾರಿ ಬಸವಣ್ಣನವರ ಜನ್ಮ ದಿನಕ್ಕೂ ರಜಾ ಕೊಡಲಾಗಿದೆ.

ಈ ರೀತಿಯಾಗಿ ಪ್ರಾಂತ್ಯಗಳು ರಜಾ ದಿನಗಳನ್ನು ಕೊಡಲು ಸ್ವಾತಂತ್ರ್ಯವಿರುವಾಗ ಸಂಪ್ರದಾಯವಿರುವಾಗ ಕನ್ನಡದ ರಾಜ್ಯೋದಯಕ್ಕೆ ರಜಾ ಕೊಡುವುದಿಲ್ಲವೆಂದರೆ ಅದನ್ನು ಅಭಿಮಾನಶೂನ್ಯತೆಯೆಂದು ಕರೆಯಬೇಕೇ ಹೊರತು ಇನ್ನೇನು ಹೇಳಬೇಕೋ ತೋರುವುದಿಲ್ಲ.

ಸರ್ಕಾರವು ಯಾವ ರೀತಿಯಾಗಿ ಒಂದು ಮಿತಿಯಲ್ಲಿ ರಜಾ ಕೊಡಬಹುದೋ ಹಾಗೆಯೇ ಸರ್ಕಾರದ ಅನುಮತಿಯಿಲ್ಲದೇ ಮಿಲ್‌ಗಳು, ಕಾರ್ಖಾನೆಗಳು, ಕೈಗಾರಿಕೋದ್ಯಮಗಳೂ ಕೊಡಬಹುದು. ಉದಾಹರಣೆಗೆ ಹೇಳಬಹುದಾದರೆ ಮಲೆಯಾಳದ ಓಣಂ ಹಬ್ಬವು ಟೆಲಿಫೋನ್ ಕಾರ್ಖಾನೆಯ ರಜಾ ದಿನಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿಲ್ಲ. ಆದರೂ ಸಹ ಆ ಕಾರ್ಖಾನೆಯ ಆಡಳಿತ ವರ್ಗದವರು ಬೇರೆ ಒಂದು ರಜಾದಿನ ಕೆಲಸ ಮಾಡುವ ಕರಾರಿನ ಮೇಲೆ ಮಲೆಯಾಳೀ ಜನರಿಗೆ ಓಣಂ ಹಬ್ಬದ ದಿನ ರಜಾ ಕೊಟ್ಟರು.

ಕಟ್ಟಕಡೆಯದಾಗಿ ಈಗಲಾದರೂ ನಮ್ಮ ಸರ್ಕಾರ ಈ ವಿಷಯವನ್ನು ಆಲೋಚನೆ ಮಾಡಲಿ. ನವೆಂಬರ್ 1 ರಂದು ಸಾರ್ವಜನಿಕ ರಜಾ ದಿನವೆಂದು ಘೋಷಿಸಲಿ. ಶಾಲಾ ಕಾಲೇಜುಗಳಿಗೆ ರಜಾ ಕೊಡುವುದಂತೂ ಸ್ವಲ್ಪವೂ ಕಷ್ಟವಾಗಲಾರದು. ಬೇರೆ ಒಂದು ರಜಾ ದಿನ ಕೆಲಸ ಮಾಡುವ ಕರಾರಿನ ಮೇಲೆ ಕೈಗಾರಿಕೋದ್ಯಮಗಳಲ್ಲಿ ಸರಳವಾಗಿ ರಜಾ ಕೊಡಬಹುದು.

ಇಂತಹ ಕೆಲಸಗಳನ್ನು ಮಾಡಲು ಕಷ್ಟವೇನಿಲ್ಲ. ಮನಸ್ಸು ಬೇಕು. ಆಸಕ್ತಿ ಬೇಕು, ಅಭಿಮಾನವಿರಬೇಕು.

ಪ್ರಭಾತ್ ಟಾಕೀಸ್‌ನಲ್ಲಿ ಮೊಟ್ಟಮೊದಲು ಕನ್ನಡ ಚಿತ್ರ ಪ್ರದರ್ಶನಗೊಂಡ ಸಂಭ್ರಮದ ಕ್ಷಣಗಳು

ಪ್ರಭಾತ್ ಟಾಕೀಸ್‌ನಲ್ಲಿ ಕನ್ನಡ ಚಿತ್ರ ಪ್ರಪ್ರಥಮವಾಗಿ ಪ್ರದರ್ಶನ

ಗೊಂಡಿದ್ದ ಸಂಭ್ರಮ ಕನ್ನಡ ಯುವಜನ ಪತ್ರಿಕೆಯಲ್ಲಿ (21.04.1963) ಸಂಚಿಕೆಯಲ್ಲಿ ಈ ರೀತಿ ಪ್ರಕಟವಾಯಿತು.

ಅಂದು 1963ನೇ ಏಪ್ರಿಲ್ 12ನೇ ತಾರೀಖು ಶುಕ್ರವಾರ ರಾಜಧಾನಿಯ ವಿದ್ಯಾರ್ಥಿ ರಂಗದಿಂದ ಹಿಡಿದು ಹಲವಾರು ರಂಗದ ಕನ್ನಡ ಅಭಿಮಾನಿ ಕನ್ನಡ ವೃಂದ ಪ್ರಭಾತ್ ಚಿತ್ರಮಂದಿರದ ಮುಂದೆ ಕ್ಯೂ ನಿಂತಿತ್ತು. ಮೈಸೂರು ಬ್ಯಾಂಕ್‌ನವರೆಗೂ, ಪ್ರಭಾತ್ ಚಿತ್ರಮಂದಿರ ಪ್ರಾರಂಭ ವಾದಂದಿನಿಂದ ಅಲ್ಲಿ ಭಾರಿ ಕ್ಯೂ ಇರುತ್ತಿದ್ದೇನೋ ಸರ್ವೆ ಸಾಮಾನ್ಯ. ಆದರೆ ಅದು ಹಿಂದಿ ಚಿತ್ರ ನೋಡುವುದಕ್ಕಾಗಿ.

ಆದರೆ ಈ ಬಾರಿ ಆ ಕ್ಯೂ ನಿಂತಿದ್ದು 'ಕನ್ನಡ' ಚಿತ್ರ ನೋಡುವುದಕ್ಕಾಗಿ. ಕರ್ನಾಟಕಕ್ಕೆ ಇದೊಂದು ಸುದ್ದಿಯಾಯಿತು. ರಾಜಧಾನಿಯ ಮನೆಮಾತಾಯಿತು. ಕನ್ನಡ ಚಿತ್ರಪ್ರೇಮಿಗಳ ಉತ್ಸಾಹ ಮೇರೆ ಮೀರಿತು.

ಕ್ರಿಯಾತ್ಮಕ ಕನ್ನಡ ಚಳುವಳಿಯ ಸಲುವಾಗಿ ಮೂಡಿದ ಅಭಿಮಾನ, ಶ್ರದ್ಧೆ ಉತ್ಸಾಹ ಚೈತನ್ಯ, ಸಾಧನೆಗಳ ಮೂರ್ತಿವೆತ್ತ ಸ್ವರೂಪದಂತಿತ್ತು. ಅಲ್ಲಿ ನೆರೆದಿದ್ದ ಜನಸಂದಣಿ.

ಉತ್ಸಾಹೀ ಅಭಿಮಾನಿ ಚಿತ್ರ ಪ್ರೇಮಿಗಳೇ ಅರಿಶಿನ, ಕುಂಕುಮದಿಂದ ಪೂಜೆ ಮಾಡಿದ ತೆಂಗಿನಕಾಯಿಗಳನ್ನು ಕೈಯಲ್ಲಿ ಹಿಡಿದು ಕ್ಯೂನಲ್ಲಿ ನಿಂತಿದ್ದರು. ಅಷ್ಟೂ ತೆಂಗಿನಕಾಯಿಗಳು ಚಿತ್ರಮಂದಿರದ ಮುಂದೆ ಈಡುಗಾಯಿಗಳಾದವು. ಅನಂತರದ ಕೆಲವೇ ನಿಮಿಷಗಳಲ್ಲಿ ಮ್ಯಾಟನೀ ಆಟ ಆರಂಭವಾಗುವ ಮುನ್ನ ಚಿತ್ರಮಂದಿರದ ಹೆಬ್ಬಾಗಿಲಿಗೆ ಹೌಸ್‌ಫುಲ್ ಬೋರ್ಡ್‌ನ್ನು ಹಾಕಲಾಯಿತು. ಟಿಕೆಟ್‌ಗಾಗಿ ಕಾಯುತ್ತಾ ನಿಂತಿದ್ದವರು ನಿರಾಶರಾಗುವ ಬದಲು ಉತ್ಸಾಹಿಗಳಾದರು. ಆ ಉತ್ಸಾಹ ಮೇರೆ ಮೀರಿ ಆನಂದ ಲಹರಿಯಾಗಿ ಹರಿಯಿತು.

ಒಂದು ಟಿಕೇಟ್ ಸಹ ಕಾಳ ಸಂತೆಯಲ್ಲಿ ಸಿಕ್ಕಲಿಲ್ಲ. ಅವೆಲ್ಲಾ ತಮಿಳು ಚಿತ್ರಗಳಿಗೇ ಎಂದು ತೋರುತ್ತದೆ. ಟಿಕೆಟ್ ಕೊಂಡ ಜನ ಕನ್ನಡ ಚಿತ್ರ ನೋಡುವ ಅವಕಾಶ ಕಳೆದುಕೊಳ್ಳಲಿಲ್ಲ.

ವಿಸ್ಮಯವನ್ನು ನೋಡುತ್ತ ನಿಂತಿತ್ತು ಅಭಿಮಾನಿ ಗುಂಪು ಹೌಸ್‌ಫುಲ್ ಬೋರ್ಡ್‌ನೊಂದಿಗೆ ಕನ್ನಡಾಭಿಮಾನಿಗಳು ಹೂವಿನ ಹಾರಹಾಕಿ ಪೂಜೆ ಮಾಡಿ ಮಂಗಳಾರತಿಯನ್ನು ಎತ್ತಿ ಅಲ್ಲಿಂದಲೇ "ಕಣ್ಣಿಗೊತ್ತಿಕೊಳ್ಳಿ ಎಲ್ಲರೂ" ಎಂದರು ದೂರದ ಪ್ರೇಕ್ಷಕರಿಗೆ. ಉತ್ಸಾಹದಿಂದ ಮೈಮರೆತು ನಿಂತಿದ್ದ ಪ್ರೇಕ್ಷಕವೃಂದ ಹಾಗೆಯೇ ಮಾಡಿತು. ಇದಿಷ್ಟು ಚಿತ್ರಮಂದಿರದ ಹೊರಗಿನ ಚಿತ್ರವಾಯಿತು. ಅನಂತರ ಚಿತ್ರ ಪ್ರಾರಂಭವಾಗುವ ಮುನ್ನ ಚಿತ್ರಮಂದಿರದ ಒಳಗೆ ವ್ಯವಸ್ಥಾಪಕರನ್ನು ತೆರೆಯ ಬಳಿ ಕರೆದೊಯ್ದು ಪುಷ್ಪಮಾಲೆ ಹಾಕಿ ಸನ್ಮಾನಿಸಿದರು ಅಭಿಮಾನಿ ಕನ್ನಡಿಗರು. ಪುಟ್ಟ ಭಾಷಣವೂ ಆಯಿತು. "ಈ ಚಿತ್ರ ನೂರು ದಿನ ಓಡಲಿ. ಚಿತ್ರಮಂದಿರದ ಮಾಲೀಕರ ಆದರ್ಶ ಎಲ್ಲ ಚಿತ್ರಮಂದಿರಗಳ ಮಾಲೀಕರಿಗೆ ದಾರಿ ತೋರಿಸಲಿ" ಎಂದು.

ಮ್ಯಾಟನಿ ಆಟದ ನಂತರ ಫಸ್ಟ್‌ಷೋಗೆ ಈ ಉತ್ಸಾಹ ಚರ್ವಿತ ಚರ್ವಣವಾಯಿತು. ಇನ್ನೂ ಹೆಚ್ಚಾಯಿತು, ಅದ್ದೂರಿಯಾಯಿತು. ಪ್ರಥಮ ಪ್ರದರ್ಶನಕ್ಕೆಂದು ಆಗಮಿಸಿದ್ದ ಕನ್ನಡ ಚಲನಚಿತ್ರದ ಹೆಸರಾಂತ ಸಂಗೀತ ನಿರ್ದೇಶಕ ಶ್ರೀ ಜಿ.ಕೆ.ವೆಂಕಟೇಶ್‌ರವರು ಚಿತ್ರಾಸಕ್ತರಿಂದ ತಪ್ಪಿಸಿಕೊಳ್ಳಲಾರದಾದರು. ಕನ್ನಡಾಭಿಮಾನಿಗಳ ಒತ್ತಾಯಕ್ಕೆ ಮಣಿಯ ಬೇಕಾಯಿತು.

ಶುಭ ಸಂಕೇತವಾಗಿ ಶ್ರೀ ಜಿ.ಕೆ.ವೆಂಕಟೇಶ್‌ರವರು ಬೂದು ಕುಂಬಳಕಾಯಿಯನ್ನು ಚಿತ್ರಮಂದಿರದ ಮುಂದೆ ಒಡೆದು ಚಿತ್ರದ ಪೂಜಾ ಸಮಾರಂಭವನ್ನು ನೆರವೇರಿಸಿದರು.

ಚಿತ್ರನೋಡಲು ಬಂದಿದ್ದ ಹೆಣ್ಣುಮಕ್ಕಳಿಗೆಲ್ಲಾ ಅರಿಶಿನ ಕುಂಕುಮ ಕೊಟ್ಟು ಮಕ್ಕಳಿಗೆ ಕಡಲೆಪುರಿಯನ್ನು ಹಂಚಿದರು ಚಿತ್ರಪ್ರೇಮಿಗಳು.

ಇಂತಹ ಉತ್ಸಾಹಪೂರ್ಣ ಪ್ರಜ್ಞಾಪೂರ್ಣ ಕನ್ನಡಾಭಿಮಾನಿಗಳ ಸದುದ್ದೇಶದ ಸದುಪಯೋಗವನ್ನು ಕನ್ನಡ ಚಲನಚಿತ್ರ ಪ್ರಪಂಚದವರೊಬ್ಬರೇ ಅಲ್ಲದೇ ಎಲ್ಲಾ ರಂಗದ ಹಿರಿಯರೂ ಮಾಡಿಕೊಂಡು ನಾಡುನುಡಿಗೆ ಕೀರ್ತಿ ತರಲೆಂದು ಬಯಸುತ್ತಾ ನಾವೂ ಹಾರೈಸುತ್ತೇವೆ. 'ಗೌರಿ' ಶತಮಾನೋತ್ಸವವನ್ನು ಆಚರಿಸಿಕೊಳ್ಳಲಿ.

ರಾಮಮೂರ್ತಿಯವರು ರಚಿಸಿದ ಗ್ರಂಥ – ಪತ್ರಿಕೆಗಳು

1. ನಾರಾಯಣ ಭೂತ
2. ರಜಾಕರ್ ಗುಪ್ತಚಾರ್
3. ಕಾಲುವೆ ಮನೆ
4. ಅವನ ಪ್ರೇಯಸಿ
5. ಮಂಜಿನ ಗೊಂಬೆ
6. ಜುಲೇಖಾ
7. ರಾಜದಂಡ
8. ವಿಪ್ಲವ
9. ಇಬ್ಬರು ರಾಣಿಯರು
10. ಇತ್ತರಿಗೆಯ ಸೀಮೆ
11. ದಾರಿತಪ್ಪಿತು
12. ಎರಡು ತಿಂಗಳು
13. ಕಾವೇರಿ
14. ತಪ್ಪಿ ಹೋಗಿದ್ದ ಪ್ರಿಯತಮ
15. ಇಬ್ಬರು ಗೆಳೆಯರು
16. ಜಾರುವ ಸೆರಗು
17. ಅವನೇ ಇವನು
18. ಕಣ್ಮರೆಯಾದ ಗೊತ್ತಿದ್ದ ಪ್ರೇಯಸಿ
19. ತಪ್ಪಿಸಿಕೊಂಡಿದ್ದ ಗುಂಡು
20. ಒಬ್ಬಂಟಿಯಾಗಿದ್ದ ಹೆಂಗಸು
21. ಕೈಕೊಟ್ಟ ಪ್ರೇಮ
22. ಒಡೆದ ಕನ್ನಡಿ
23. ಕಣ್ಮರೆಯಾದ ಮಡದಿ
24. ಸುಂದರ ಸ್ವಪ್ನ
25. ನೆನೆಸಿದ್ದ ಬೇರು
26. ಅವಳೇಕೆ ಬಂದಿದ್ದಳು
27. ಹಳೆಯ ಸ್ನೇಹಿತರು
28. ಕಡೆಯ ಮಾತು
29. ಸಿದ್ಧನಗವಿ
30. ಸತ್ತವನ ಕತೆ
31. ಹೇಳಿದ ಕತೆ
32. ಜೀವನ ಸ್ವಪ್ನ
33. ಅಶ್ಲೀಲ ಪತ್ರಗಳು
34. ಲಗುಮಿಯ ಹೆಣ
35. ಅವಳ ಅವನು
36. ಆದದ್ದು ಹಾಗೆ
37. ತಾಯಿ ಸತ್ತ ಮಗಳು
38. ವಿಷಕನ್ಯೆ
39. ಯಾರವನು?
40. ಕಾಲುವೆ ಮನೆ
41. ಅವನ ಶತ್ರುಗಳು
42. ಚಿತ್ರಲೇಖ
43. ಅಮೃತಮಯಿ
44. ಪ್ರೇಮ ಕಣ್ಣು ಬಿಟ್ಟಾಗ
45. ಬಯಕೆ ಈಡೇರಲಿಲ್ಲ
46. ರಾಜರಹಸ್ಯ

47. ಮರೆಯಾಗಿದ್ದ ವಜ್ರಗಳು
48. ಏಕಾಕಿನಿ
49. ಸಾಗರಿ
50. ಅಕಳಂಕಿತೆ
51. ಏಳನೇ ವಯಸ್ಸಿನ ಹೆಂಡತಿ
52. ವೈಯಾಲಿಕಾವಲ್
53. ಬೆರಳಿಲ್ಲದ ಕೈ
54. ಒಡೆದ ಬಳೆ
55. ಆ ಸುಂದರಿಯರು
56. ಕಡಲ ತೀರದ ಸಹೋದರಿಯರು
57. ಚೂರಿ ಹಿಡಿದ ದಸ್ಯು ಕನ್ಯೆ
58. ವಿಚಿತ್ರವಾದ ಭಾವಚಿತ್ರ
59. ಕೈಕೊಟ್ಟ ಪ್ರೇಮಪತ್ರ
60. ಅಪರಾಧಿಯ ಆತ್ಮಕಥೆ
61. ಹೊರಮನೆ ಹುಡುಗಿ
62. ಮಂಜಿನ ಗೊಂಬೆ
63. ಅದೃಷ್ಟದ ಮಚ್ಚೆ
64. ಎರಡು ಚೂರಿಗಳು
65. ಮಾಟಗಾತಿ
66. ರಕ್ತ ಚುಂಬನ
67. ಪುನರಾಗಮನ
68. ಐದು ದಿನಗಳು
69. ಲಗುಮಿಯ ಹೆಣ
70. ಮತ್ತೆ ಜುಲೇಕ
71. ಭಾಗ್ಯಳ ಮದುವೆ
72. ಅಪರಾಧಿಯ ಆತ್ಮಕಥೆ
73. ಪ್ರೇಮಮಂದಿರ

ಪತ್ರಿಕೆಗಳು

1. ವಿನೋದಿನಿ
2. ವಿನೋದವಾಣಿ
3. ಕಾಮ ಕಲಾ
4. ಕನ್ನಡ ಯುವಜನ
5. ಸುಜನ.

ಚಳುವಳಿಯಲ್ಲಿ "ಯುವಜನ" ಪತ್ರಿಕೆಯ ಪಾತ್ರ

1960ರ ದಶಕದಲ್ಲಿ ಆರಂಭವಾದ ಚಳುವಳಿಯ ಪರ್ವಕಾಲದಲ್ಲಿ ಕನ್ನಡದ ಸಮಸ್ಯೆಗಳನ್ನು ಪ್ರತಿಬಿಂಬಿಸುವಂತಹ ಸುದ್ದಿ ಮಾಧ್ಯಮವಾವುದೂ ಇರಲಿಲ್ಲ. ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಆಗೊಮ್ಮೆ ಈಗೊಮ್ಮೆ ಕನ್ನಡಿಗರು ಪತ್ರಿಕೆಗಳ ವಾಚಕರವಾಣಿಯಲ್ಲಿ ತೋಡಿಕೊಳ್ಳುತಿದ್ದ ಅಳಲುಗಳು ಸಮಸ್ಯೆಗಳು ಪ್ರಕಟವಾಗುತ್ತಿದ್ದು ಬಿಟ್ಟರೆ ಪ್ರತ್ಯೇಕವಾದ ಮತ್ತ್ಯಾವುದೇ ಮಾಧ್ಯಮವಿರಲಿಲ್ಲ.

ಆದರೆ ಚಳುವಳಿ ಆರಂಭವಾದಾಗ ಕಾರ್ಯಕರ್ತರ ಕನ್ನಡಾಭಿಮಾನಿಗಳ ನೋವುಗಳನ್ನು, ಸಮಸ್ಯೆಗಳನ್ನು, ನಿಲುವುಗಳನ್ನು ಪ್ರಕಟಿಸಲು, ಹೋರಾಟದ ರೂಪುರೇಷೆಗಳನ್ನು ಪ್ರಚುರಪಡಿಸುವ ಉದ್ದೇಶಕ್ಕಾಗಿ 4.2.1962 ರಂದು ಆಯೋಜಿಸಲಾಗಿದ್ದ ಬೆಂಗಳೂರು ಕನ್ನಡಿಗರ ಸಮಾವೇಶದಲ್ಲಿ "ಕನ್ನಡ ಯುವಜನ" ಎಂಬ ವಾರ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು. ಈ ಪತ್ರಿಕೆಯ ಸಂಪಾದಕತ್ವದ ಹೊಣೆಗಾರಿಕೆಯನ್ನು ಮ. ರಾಮಮೂರ್ತಿಯವರಿಗೆ ವಹಿಸಲಾಯಿತು.

ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಅಧ್ಯಕ್ಷರಾದ ಖಾದ್ರಿ ಶಾಮಣ್ಣನವರು ಈ ಪತ್ರಿಕೆಯನ್ನು ಉದ್ಘಾಟಿಸಿದರು. ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಸಮಾರಂಭದಲ್ಲಿ ಹರಾಜು ಹಾಕಿದಾಗ ಭಾರತೀಂದ್ರ ಸ್ವಾಮಿಯವರು 365 ರೂಪಾಯಿಗಳಿಗೆ ಕೊಂಡರು. ಲಾವಣಿ ಸುಬ್ಬಣ್ಣ ನವರು 101 ರೂಪಾಯಿಗಳನ್ನು ದೇಣಿಗೆಯಾಗಿ ಕೊಟ್ಟರು.

ಈ ಪತ್ರಿಕೆಯು ಯಾವುದೇ ಪ್ರಾದೇಶಿಕ ಭಾಷೆ, ಭಾಷಿಕರ ಜಾಗೃತಿಗೆಂದೇ ಮೀಸಲಾದ ರಾಷ್ಟ್ರದ ಪ್ರಥಮ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಈ ಪತ್ರಿಕೆಯು ಅಂದಿನ ದಿನಗಳಲ್ಲಿ ಕನ್ನಡಿಗರ ಮನಸ್ಸಿನಲ್ಲಿ ಕನ್ನಡದ ಬಗ್ಗೆ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸಿತು.

ರಾಮಮೂರ್ತಿಯವರು ಈ ಪತ್ರಿಕೆಯಲ್ಲಿ ಬರೆದ ಸಂಪಾದಕೀಯಗಳು ಲೇಖನಗಳು ಕನ್ನಡದ ಹೋರಾಟಕ್ಕೆ ಭದ್ರವಾದ ಅಡಿಪಾಯವನ್ನು ಹಾಕಿತು. ಈ ಪತ್ರಿಕೆಯ ಮುಖಾಂತರ ಕನ್ನಡಿಗರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಸಾಧನವಾಯಿತು. ತಮ್ಮ ಹರಿತವಾದ ಲೇಖನಗಳಿಂದ ಚಳುವಳಿಯನ್ನು ಜೀವಂತವಾಗಿರಿಸಿದ್ದರಲ್ಲದೆ ರಾಮಮೂರ್ತಿಯವರು ಪ್ರತಿ ಸಂಚಿಕೆಯಲ್ಲಿಯೂ

- ಕನ್ನಡದ ಪುಸ್ತಕಗಳನ್ನು, ಪತ್ರಿಕೆಗಳನ್ನು ಕೊಂಡು ಓದಿ
- ಕನ್ನಡದಲ್ಲಿಯೇ ವ್ಯವಹರಿಸಿ

- ಕನ್ನಡ ಸಂಘ ಸಂಸ್ಥೆಗಳ ಸದಸ್ಯರಾಗಿ
- ಕನ್ನಡ ನಾಟಕಗಳನ್ನು ನೋಡಿ
- ಕನ್ನಡ ಸಂಗೀತಗಾರರನ್ನು ಪ್ರೋತ್ಸಾಹಿಸಿ

ಎಂದು ನಿರಂತರವಾಗಿ ಬರೆಯುತ್ತಿದ್ದರು.

"ಕನ್ನಡಿಗರಿಗೆ ಕನ್ನಡವೇ ದೇವರು ಶರಣಾಗಲು ಬೇರೆ ದೇವರೇ ಇಲ್ಲ" ಎಂದು ಪ್ರತಿ ಸಂಚಿಕೆಯಲ್ಲಿಯೂ ಪ್ರಮುಖವಾಗಿ ಪ್ರಕಟಿಸುತ್ತಿದ್ದರು.

ಸರಿ ಸುಮಾರು ಮೂರು ವರ್ಷಗಳ ಕಾಲ ಪ್ರಕಟವಾದ ಈ ಪತ್ರಿಕೆಗೆ ಆರಂಭದಲ್ಲಿ ಸಾಕಷ್ಟು ಉತ್ತೇಜನ ದೊರಕಿದರೂ ದಿನಗಳೆದಂತೆ ಆ ಉತ್ಸಾಹ ಕುಂದಿದಂತಾಗಿ ಓದುಗರ ಸಂಖ್ಯೆ ಕಡಿಮೆಯಾಗತೊಡಗಿತು. ಇತ್ತ ಜಾಹೀರಾತಿನ ಬೆಂಬಲವೂ ಇಲ್ಲದೆ ಅತ್ತ ಓದುಗರ ಪ್ರೋತ್ಸಾಹವೂ ಇಲ್ಲದೆ ಪತ್ರಿಕೆಯ ಪ್ರಕಟಣೆಯನ್ನು ಮುಂದುವರೆಸುವುದು ಕಷ್ಟದಾಯಕವಾಗ ತೊಡಗಿತು. ಹಲವಾರು ಸಹೃದಯ ಓದುಗರು ಪ್ರೋತ್ಸಾಹದಾಯಕವಾಗಿ ಕೆಲವು ತಿಂಗಳುಗಳ ಕಾಲ ದೇಣಿಗೆಯನ್ನು ನೀಡಿದರೂ ಅದು ಪತ್ರಿಕಾ ಪ್ರಕಟಣೆಗೆ ಸಾಲದಾದಾಗ ಅನಿವಾರ್ಯವಾಗಿ ಪತ್ರಿಕೆಯನ್ನು ಪ್ರಕಟಿಸುವುದನ್ನು ನಿಲ್ಲಿಸಬೇಕಾಯಿತು.

ರಾಮಮೂರ್ತಿಯವರ ಮನವಿ :

ಸ್ವ ವಿಷಯ

ಕನ್ನಡ ಯುವಜನ ಪತ್ರಿಕೆಯು ಮೊದಲಿನಿಂದಲೂ ಕುಂಟುತ್ತಲೇ ಇದೆ.

ಹಾಗಾಗಲೂ ಪತ್ರಿಕೆಗೆ ಪ್ರೋತ್ಸಾಹವಿಲ್ಲವೆಂಬುದೇ ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹಾಗೆಯೇ ಇಂತಹ ಪತ್ರಿಕೆಯನ್ನು ಕನ್ನಡಿಗರ ಆದರ ಅಭಿಮಾನಿಗಳಲ್ಲದೇ ನಡೆಸುವುದೂ ಸಾಧ್ಯವಿಲ್ಲ.

ಅನೇಕ ಬಾರಿ ಈ ಪತ್ರಿಕೆಯನ್ನು ನಿಲ್ಲಿಸಿಬಿಡಬೇಕೆಂದು ನನ್ನ ಮನಸ್ಸಿಗೆ ಬಂದಿದೆ. ಆದರೆ ಈ ಪತ್ರಿಕೆಯಲ್ಲಿ ಬರೆಯಲು ಸಾಧ್ಯವಿರುವುದನ್ನು ಬೇರೊಂದು ಪತ್ರಿಕೆಯಲ್ಲಿ ಬರೆಯುವುದಕ್ಕೆ ಆಗುವುದಿಲ್ಲವಲ್ಲ ಎಂಬ ಕಾರಣದಿಂದ ನಿಲ್ಲಿಸಿಲ್ಲ.

ಪತ್ರಿಕೆಯನ್ನು ಆರಂಭಿಸಿದಾಗ ಸಾಲದಲ್ಲಿ ಆರಂಭಿಸಲಾಯಿತು. ಆನಂತರ ಬಂದ ಮುಗ್ಗಟ್ಟಿನ ಸಮಯದಲ್ಲಿ ಮೂವತ್ತೊಂಬತ್ತು ರೂಪಾಯಿಗಳ ಸಹಾಯವನ್ನು ಪಡೆಯಲಾಯಿತು. ಈಗ ನಲವತ್ತು ರೂಪಾಯಿಗಳನ್ನು ಶೇಖರಣೆ ಮಾಡಿ ಮುಂದಡಿಯಿಟ್ಟಿದ್ದೇನೆ.

ಸಾವಿರಾರು ರೂಪಾಯಿಗಳ ಬಂಡವಾಳದಿಂದಲೇ ನಡೆಸಬೇಕಾದ ಪತ್ರಿಕೆಗೆ ಈ ಹಣ ಎಷ್ಟರ ಮಟ್ಟಿಗೆ ಸಾಕೆಂಬುದನ್ನು ಕನ್ನಡ ಅಭಿಮಾನಿಗಳು ಆಲೋಚಿಸಬೇಕೆಂದು ಪ್ರಾರ್ಥಿಸುತ್ತೇನೆ.

ಸ್ನೇಹಿತರೆಲ್ಲರೂ ಪತ್ರಿಕೆಯ ಬೆಲೆ ಹೆಚ್ಚೆಂದುದರಿಂದ ಹತ್ತರಿಂದ ಆರು ಪೈಸೆಗಳಿಗೆ ಇಳಿಸಿದೆ. ಈ ದರದಲ್ಲಿ ಪತ್ರಿಕೆ ತನ್ನ ಕಾಲಮೇಲೆ ತಾನು ನಿಲ್ಲಬೇಕಾದರೆ ವಾರಕ್ಕೆ ಮೂರು ಸಾವಿರ ಪತ್ರಿಕೆಗಳಾದರೂ ಖರ್ಚಾಗಬೇಕು.

ಆ ನಂಬಿಕೆ ನನಗಿಲ್ಲ.

ಆದರೆ ಈ ಪತ್ರಿಕೆ ನಡೆಯಲೇ ಬೇಕೆಂದು ಒತ್ತಾಯ ಪಡಿಸುವ ಮಿತ್ರರು ಬಹಳ ಮಂದಿ ಇದ್ದಾರೆ. ಅವರು ತಿಂಗಳಿಗೆ ಎರಡು ರೂಪಾಯಿಗಳಂತೆ ಪತ್ರಿಕೆಗೆ ಸಹಾಯ ಮಾಡಲೆಂದು ಕೋರುತ್ತೇನೆ.


ಯಾರಿಗೂ ಬೇಡವಾದರೆ ನಾನೇನು ಮಾಡಲಿ?

– ಮ ರಾಮಮೂರ್ತಿ

ಅನಿವಾರ್ಯವಾಗಿ ನಿಲ್ಲಿಸಬೇಕಾದ ಕನ್ನಡ ಯುವಜನ ಪತ್ರಿಕೆ

ರಾಮಮೂರ್ತಿ ಯವರು ಹಲವಾರು ಬಾರಿ ಓದುಗರಲ್ಲಿ ಮನವಿಯನ್ನು ಮಾಡಿಕೊಂಡರೂ ದುರದೃಷ್ಟವಶಾತ್ ಸೂಕ್ತ ಪ್ರತಿಕ್ರಿಯೆ ದೊರಕಲಿಲ್ಲ. ಹಾಗಾಗಿ ಪತ್ರಿಕೆಯ ಪ್ರಕಟಣೆಗೆ ಇತಿಶ್ರೀಯನ್ನು ಹಾಡಲೇಬೇಕಾಯಿತು.

1–11–1963ರಂದು ಸಂಯುಕ್ತ ರಂಗದ ಆಶ್ರಯದಲ್ಲಿ ನಡೆದ ಪ್ರಥಮ ಕನ್ನಡ ರಾಜ್ಯೋತ್ಸವದ ಆಹ್ವಾನ ಪತ್ರಿಕೆ



ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ
ಭಾಗವಹಿಸುವ ಕಲಾವಿದರು

ಕರ್ನಾಟಕ ಸಂಯುಕ್ತರಂಗ

★

ಶ್ರೀ ಆಲೂರು ವೆಂಕಟರಾಯರ

ಕನ್ನಡ ರಾಜ್ಯೋತ್ಸವ

★

ವಿದ್ಯಾರಣ್ಯ ಮಂಟಪದಲ್ಲಿ

ಕಾರ್ಯಕ್ರಮ


★

೧ನೇ ನವೆಂಬರ್ (೧೯೬೩) ಶುಕ್ರವಾರ

೨ನೇ ನವೆಂಬರ್, ಶನಿವಾರ

೩ನೇ ನವೆಂಬರ್, ಭಾನುವಾರ

ಮ. ರಾಮಮೂರ್ತಿಯವರ ಕಾದಂಬರಿಯ ಮುಖಪುಟ



ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ (ನೋಂ.)

ಪರಿಚಯ

ರಾಜ್ಯದ ಉದ್ಯಮಗಳಲ್ಲಿ ಕನ್ನಡಿಗರಿಗೆ ಉದ್ಯೋಗ, ಕನ್ನಡ ಭಾಷೆಗೆ ಮನ್ನಣೆ, ಉದ್ಯಮಗಳ ಬಗ್ಗೆ ಹಿತಚಿಂತನೆ, ಕೈಗಾರಿಕೆ ಮತ್ತು ವಾಣಿಜ್ಯೋದ್ಯಮಗಳಲ್ಲಿರುವ ಕನ್ನಡಪರ ಸಂಘ-ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಕನ್ನಡ-ಕನ್ನಡಿಗ-ಕರ್ನಾಟಕದ ನೆಲ, ಜಲ, ಭಾಷೆ, ಬದುಕು ಬವಣೆಗಳ ಕುರಿತು ಅನ್ಯಾಯದ ವಿರುದ್ಧ ಹೋರಾಟಗಳನ್ನು ಸಂಘಟಿಸುವುದರ ಜೊತೆಗೆ ಕಾರ್ಮಿಕರಲ್ಲಿ ಕನ್ನಡದ ಸ್ವಾಭಿಮಾನವನ್ನು ಬೆಳೆಸುವ ಸದುದ್ದೇಶದಿಂದ 2002ರಲ್ಲಿ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ಅಸ್ತಿತ್ವಕ್ಕೆ ಬಂದಿತು. ಈಗ ಸುಮಾರು 80ಕ್ಕೂ ಹೆಚ್ಚು ಕನ್ನಡಪರ ಸಂಘ ಸಂಸ್ಥೆಗಳು ಒಕ್ಕೂಟದಲ್ಲಿ ಅಂಗ ಸಂಸ್ಥೆಗಳಾಗಿ ನೋಂದಾಯಿಸಲ್ಪಟ್ಟಿವೆ.

ಹೋರಾಟದ ಪಥದಲ್ಲಿ: ಕನ್ನಡನಾಡು, ನುಡಿ ಹಾಗೂ ಕಾರ್ಮಿಕರ ಏಳಿಗೆಗಾಗಿ ದುಡಿಯುತ್ತಾ ಬಂದಿರುವ ಒಕ್ಕೂಟವು ಕನ್ನಡಕ್ಕೆ ಅನ್ಯಾಯವಾದಾಗ ಎಲ್ಲ ಪ್ರಮುಖ ಹೋರಾಟಗಳಲ್ಲೂ ಕ್ರಿಯಾಶೀಲವಾಗಿ ತೊಡಗಿಸಿಕೊಂಡು ಬರುತ್ತಿದೆ. ಒಕ್ಕೂಟ ಪ್ರಪ್ರಥಮವಾಗಿ ಪುರಭವನದ ಬಳಿ ಇರುವ ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆ ಮುಂಭಾಗದಲ್ಲಿ ಕನ್ನಡಿಗರಿಗೆ ಉದ್ಯೋಗ ಲಭ್ಯವಾಗುವ ಡಾ॥ ಸರೋಜಿನಿ ಮಹಿಷಿ ವರದಿ ಅನುಷ್ಠಾನಕ್ಕಾಗಿ ಒತ್ತಾಯಿಸಿ ಪ್ರತಿಭಟನೆ ಮತ್ತು ಧರಣಿ ಸತ್ಯಾಗ್ರಹ ಸಪ್ತಾಹವನ್ನು ನಡೆಸಿ ಸರ್ಕಾರದ ಗಮನ ಸೆಳೆಯಿತು. ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ- ಉತ್ತರ ಕರ್ನಾಟಕದಲ್ಲಿ ನೈರುತ್ಯ ರೈಲ್ವೆ ವಲಯ ಮತ್ತು ಹೈಕೋರ್ಟ್ ಪೀಠ ಸ್ಥಾಪನೆ, ಕಾವೇರಿ ನದಿ ನೀರಿನ ಹಂಚಿಕೆಗಾಗಿ ರಾಷ್ಟ್ರೀಯ ಜಲನೀತಿ, ಸ್ಥಳೀಯರಿಗೆ ಉದ್ಯೋಗ ಭದ್ರತೆಗಾಗಿ ರಾಷ್ಟ್ರೀಯ ಉದ್ಯೋಗ ನೀತಿ, ಆಡಳಿತ ಭಾಷೆಯಾಗಿ ಕನ್ನಡ ಅನುಷ್ಠಾನ, ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಕನ್ನಡಿಗರಿಗೆ ಉದ್ಯೋಗ, ಗಡಿ ವಿವಾದ ಪರಿಹಾರಕ್ಕೆ ಮಹಾಜನ್ ವರದಿ ಜಾರಿಗೆ ತರುವಂತೆ ಕೇಂದ್ರಕ್ಕೆ ಒತ್ತಾಯ, ಸಾರ್ವಜನಿಕ ವಲಯದ ಕೈಗಾರಿಕೆಗಳನ್ನು ಮುಚ್ಚದೇ ಅವುಗಳ ಪುನಶ್ಚೇತನಕ್ಕೆ ಒತ್ತಾಯಿಸಿ ನಡೆಸಿದ ಅನೇಕ ಹೋರಾಟಗಳು, ಕವಿಕಾ, ಐ.ಟಿ.ಐ., ಕಾರ್‌ಮೊಬೈಲ್ಸ್, ಭಾಗ್ಯಲಕ್ಷ್ಮಿ ಸಮೂಹ, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಟ್ಯಾಕ್ಸಿ ಚಾಲಕರ ಹೋರಾಟ,

ಜಿ.ಟಿ.ಆರ್.ಇ., ಎ.ಡಿ.ಎ., ಎಚ್.ಎ.ಎಲ್. ಎಸ್.ಬಿ.ಐ. ಹಾಗೂ ಇತರೆ ಉದ್ಯಮಗಳಲ್ಲಿ ಕನ್ನಡಿಗರ ನೇಮಕಕ್ಕಾಗಿ ನಡೆಸಿದ ಆಂದೋಲನಗಳು, ಇತ್ತೀಚೆಗೆ ಮಂಡೂನ ಹೋರಾಟ, ಕಸ ವಿಲೇವಾರಿ ಸಂಬಂಧಿಸಿದ ಒಕ್ಕೂಟವು ನಗರದಲ್ಲಿ ನಡೆಸಿದ ಬೃಹತ್ ಪ್ರತಿಭಟನಾ ಧರಣಿ ಹಾಗೂ ಭೂಕಬಳಿಕೆ ಹೋರಾಟ ಸಮಿತಿ ನಡೆಸಿದ 39 ದಿನಗಳ ಸುದೀರ್ಘ ಹೋರಾಟದ ಹಿಂದೆ ಒಕ್ಕೂಟವು ಪ್ರಮುಖ ಪಾತ್ರವಹಿಸಿತ್ತು. ನಮ್ಮ ಒಕ್ಕೂಟವು ನರಗುಂದ ರೈತರ ಕಳಸಾ ಬಂಡೂರಿ ನೀರಿನ ಹಂಚಿಕೆಯ ಹೋರಾಟವನ್ನು ಬೆಂಬಲಿಸಿ ಖುದ್ದಾಗಿ ನರಗುಂದದ ರೈತರ ಹೋರಾಟದಲ್ಲಿ ಭಾಗಿಯಾಗಿತ್ತು.

ಇತ್ತೀಚೆಗೆ ಕೇಂದ್ರ ಸರ್ಕಾರದ ಬಲವಂತದ ಹಿಂದಿ ಹೇರಿಕೆಯನ್ನು ದೊಡ್ಡಮಟ್ಟದಲ್ಲಿ ವಿರೋಧಿಸಿದ್ದು ಹಾಗೂ 'ನಮ್ಮ ಮೆಟ್ರೋ ಹಿಂದಿ ಬೇಡ' ಹೋರಾಟದ ಮೂಲಕ ಮೆಟ್ರೋದಲ್ಲಿ ಹಿಂದಿ ಭಾಷೆಯ ಬಳಕೆಗೆ ಬೆಂಗಳೂರಿನ ಹಲವು ಸಂಘಟನೆಗಳ ಸಹಕಾರದಿಂದ ತಡೆಯೊಡ್ಡುವಲ್ಲಿ ಒಕ್ಕೂಟವು ಯಶಸ್ವಿಯಾಗಿದೆ. ಆಡುಗೋಡಿಯ ಮೈಕೋ ಕಾರ್ಖಾನೆ ವಿನಾಕಾರಣ ವಜಾಗೊಳಿಸಿದ್ದ ಸುಮಾರು 263 ಹಂಗಾಮಿ ನೌಕರರ 543 ದಿನಗಳ ಸುದೀರ್ಘ ಹೋರಾಟದ ಎಲ್ಲಾ ಹಂತಗಳಲ್ಲೂ ಕಾರ್ಮಿಕರ ಪರವಾಗಿ ನಮ್ಮ ಒಕ್ಕೂಟವು ನಿಂತು ಕಾರ್ಮಿಕರಿಗೆ ನ್ಯಾಯ ಸಿಗುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಆಗಾಗ ಬರಬಹುದಾದ ಕನ್ನಡದ ಸಮಸ್ಯೆಗಳಿಗೆ ಒಕ್ಕೂಟವು ಸೂಕ್ತ ರೀತಿಯಲ್ಲಿ ಸ್ಪಂದಿಸುತ್ತಾ ಬಂದಿದೆ. ಪ್ರತಿಭಟನೆ, ಧರಣಿ, ಸತ್ಯಾಗ್ರಹ, ವಿಚಾರಗೋಷ್ಠಿಗಳು, ಮೆರವಣಿಗೆಗಳ ಮೂಲಕ ಹಾಗೂ ಕೇಂದ್ರ ರಾಜ್ಯ ಸರ್ಕಾರಗಳಿಗೆ ಕನ್ನಡ ಸಮಸ್ಯೆಗಳ ಬಗ್ಗೆ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಿ ಪತ್ರಗಳ ಮೂಲಕ ಗಮನ ಸೆಳೆದಿದೆ. ಕಾಲಕಾಲಕ್ಕೆ ಎದುರಾದ ಹಲವು ಕನ್ನಡದ ಸಮಸ್ಯೆಗಳ ಬಗ್ಗೆ ಹೋರಾಟಗಳನ್ನು ಒಕ್ಕೂಟವು ನಡೆಸುತ್ತಾ ಬಂದಿದೆ.

ಕನ್ನಡದ ಅಂಗಳದಲ್ಲಿ ತಿಂಗಳ ಬೆಳಕು: ಕನ್ನಡ ಕನ್ನಡಿಗ ಕರ್ನಾಟಕದ ಬಗ್ಗೆ ಕನ್ನಡಿಗರಲ್ಲಿ ನೈಜ ಕಾಳಜಿ, ಬದ್ಧತೆ, ಹಾಗೂ ಸಂಸ್ಕೃತಿಯ ಬಗ್ಗೆ ಅರಿವು ಮತ್ತು ಎಚ್ಚರ ಮೂಡಿಸಲು ಪ್ರತಿ ತಿಂಗಳು "ಕನ್ನಡದ ಅಂಗಳದಲ್ಲಿ ತಿಂಗಳ ಬೆಳಕು" ಎಂಬ ವಿಚಾರ ಸಂಕಿರಣ ಮಾಲೆಯನ್ನು ಒಕ್ಕೂಟವು ನಡೆಸುತ್ತಾ ಬಂದಿದೆ. ಈ ವಿಚಾರ ಸಂಕಿರಣಗಳು ಕನ್ನಡಪರ ಹೋರಾಟಗಾರರ ಅರಿವಿನ ವಿಸ್ತರಣೆಗೆ ಜಾಗೃತಿಯ ಶಾಲೆಯಂತೆ ಕೆಲಸ ಮಾಡುತ್ತಿವೆ. ಇಂತಹ ನಿರಂತರ

ವಿಚಾರ ಸಂಕಿರಣಗಳನ್ನು ನಾಡಿನ ಪ್ರಬುದ್ಧ ವಿಷಯ ತಜ್ಞರನ್ನು ಕರೆಸಿ ಮುಕ್ತ ಚಿಂತನ–ಮಂಥನದ ಮೂಲಕ ನಮ್ಮ ರಾಜ್ಯದ ಜನರನ್ನು ಕಾಡುತ್ತಿರುವ ಕನ್ನಡದ ಜ್ವಲಂತ ಸಮಸ್ಯೆಗಳಿಗೆ ಹೋರಾಟಗಳ ಮೂಲಕ ಪರಿಹಾರಕ್ಕೆ ಪ್ರಯತ್ನಿಸುತ್ತಿದೆ.

ವಾರ್ಷಿಕೋತ್ಸವ ಕನ್ನಡ ಜಾಗೃತಿ ಸಮಾವೇಶ ಮತ್ತು ರಾಜ್ಯೋತ್ಸವ: ಪ್ರತಿ ವರ್ಷವೂ ಕರ್ನಾಟಕ ರಾಜ್ಯೋತ್ಸವ ಹಾಗೂ ಒಕ್ಕೂಟದ ವಾರ್ಷಿಕೋತ್ಸವವನ್ನು ಆಚರಿಸುತ್ತಾ ಬಂದಿದ್ದೇವೆ. ಆ ಸಂದರ್ಭದಲ್ಲಿ ನಾಡಿನ ಗಣ್ಯ ವ್ಯಕ್ತಿಗಳು, ಸಾಹಿತಿಗಳು, ಕನ್ನಡಪರ ಚಿಂತಕರನ್ನು ಕರೆಸಿ. ಕನ್ನಡ ಕನ್ನಡಿಗ ಕರ್ನಾಟಕಕ್ಕೆ ಸಂಬಂಧಿಸಿದ ಹಾಗೆ ಪ್ರಚಲಿತ ಸಮಸ್ಯೆಗಳ ಬಗ್ಗೆ ಮತ್ತು ರಾಜ್ಯದ ಉದ್ಯಮದಲ್ಲಿ ಕನ್ನಡಿಗರ ಸ್ಥಿತಿ ಗತಿಗಳ ಬಗ್ಗೆ ಚಿಂತನಮಂಥನ ಗೋಷ್ಠಿಗಳನ್ನು ನಡೆಸಲಾಗುತ್ತಿದೆ. ಆ ಸಂದರ್ಭದಲ್ಲಿ ಜಾನಪದ, ಭಾವಗೀತೆ, ದೇವರನಾಮ, ಚಿತ್ರಗೀತೆಗಳ ಸಂಗೀತ ಸ್ಪರ್ಧೆ, ಕರ್ನಾಟಕ ರಸಪ್ರಶ್ನೆ, ಕರ್ನಾಟಕದ ಬಗ್ಗೆ ಪ್ರಬಂಧ ಸ್ಪರ್ಧೆಗಳನ್ನು ನಡೆಸಿ ಬಹುಮಾನಗಳನ್ನು ನೀಡಲಾಗುತ್ತಿದೆ. ಕವಿಗೋಷ್ಠಿಗಳನ್ನು ನಡೆಸುವುದರ ಜೊತೆಗೆ ಕನ್ನಡ ನಾಡು ನುಡಿಗೆ ದುಡಿದ ಸಾಹಿತಿಗಳು, ಕಲಾವಿದರು, ಕನ್ನಡಪರ ಹೋರಾಟಗಾರರಿಗೆ ಹಾಗೂ ಸಮಾಜ ಸೇವಕರಿಗೆ ರಾಷ್ಟ್ರಕವಿ ಕುವೆಂಪುರವರ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ.

ಇಂತಹ... ಮಹತ್ವದ ಕನ್ನಡದ ಕೆಲಸ ಕಾರ್ಯಗಳಿಗೆ ಕನ್ನಡ ಹೋರಾಟಗಳಿಗೆ ಸ್ಫೂರ್ತಿ ನೀಡುತ್ತಾ, ಬಂದಿರುವುದು ಒಕ್ಕೂಟದ ಅಂಗ ಸಂಸ್ಥೆಗಳು. ಕನ್ನಡಾಭಿಮಾನಿಗಳಾದ ತಮ್ಮ ಬೆಂಬಲ ಮತ್ತು ಪ್ರೋತ್ಸಾಹವೇ ಕಾರಣ ಎಂಬುದನ್ನು ಒಕ್ಕೂಟವು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಉದ್ದೇಶಗಳು: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮಗಳ ಪ್ರಗತಿಯ ಬಗ್ಗೆ ಹಿತಚಿಂತನೆ, ಕನ್ನಡ ಕಾರ್ಮಿಕರ ಹಿತರಕ್ಷಣೆ, ಉದ್ಯೋಗದಲ್ಲಿ ಕನ್ನಡಿಗರಿಗೆ ಹೆಚ್ಚಿನ ಆದ್ಯತೆ ದೊರಕಿಸುವುದು. ಸ್ಥಳೀಯ ಸಂಸ್ಕೃತಿಯ ರಕ್ಷಣೆ ಮತ್ತು ಕನ್ನಡ ಭಾಷೆಯನ್ನು ಎಲ್ಲಾ ಕಡೆ ಅನುಷ್ಠಾನಗೊಳಿಸಲು ಆಯಾ ಉದ್ಯಮಗಳ ಆಡಳಿತ ಮಂಡಳಿ, ಕಾರ್ಮಿಕ ಸಂಘ ಹಾಗೂ ಕನ್ನಡ ಸಂಘಗಳು ಪ್ರಮುಖ ಪಾತ್ರವಹಿಸುವಂತೆ ಕಾರ್ಯನಿರ್ವಹಿಸಲಾಗುತ್ತಿದೆ.

ಕಾರ್ಮಿಕ ವರ್ಗದಲ್ಲಿ ನಾಡು–ನುಡಿಗಳ ಪ್ರಜ್ಞೆಮೂಡಿಸಲು ಉದ್ಯಮಗಳಲ್ಲಿ ಕನ್ನಡ ಸಂಘಗಳ ಸ್ಥಾಪನೆ, ರಾಜ್ಯೋತ್ಸವ ಆಚರಣೆ, ಶಿಸ್ತುಬದ್ಧ ಕನ್ನಡ ಚಳವಳಿ ಸಂಘಟಿಸುವ ಗುರಿ ಹೊಂದಿದೆ.

ಕೈಗಾರಿಕೆ ಮತ್ತು ಉದ್ಯಮ ಕ್ಷೇತ್ರದಲ್ಲಿ ದುಡಿಯುತ್ತಿರುವ ಜಾನಪದ ರಂಗಭೂಮಿ,. ಸಂಗೀತ, ನೃತ್ಯ ಹಾಗೂ ಚಲನಚಿತ್ರ ಕಲಾವಿದರಿಗೆ ಪ್ರೋತ್ಸಾಹ ನೀಡಿ ಕನ್ನಡ ನಾಡು-ನುಡಿ ಕ್ರೀಡೆ, ವಿಜ್ಞಾನ ಹಾಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರಿಗೆ ಉತ್ತೇಜನ ನೀಡುವುದು ಹಾಗೂ ಸನ್ಮಾನಿಸಿ ಗೌರವಿಸುವ ಯೋಜನೆಯನ್ನು ಸಹ ಹೊಂದಿದೆ.

ಸಾಹಿತ್ಯಿಕ, ಸಂಸ್ಕೃತಿ, ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಕನ್ನಡ ನೆಲ, ಜಲ, ಜನ ಭಾಷೆ ಸಂಸ್ಕೃತಿಯ ಸ್ವಾಭಿಮಾನಕ್ಕೆ ಧಕ್ಕೆ ಉಂಟಾದಾಗ ಕನ್ನಡಿಗರಲ್ಲಿ ಜಾಗೃತಿ ಮೂಡಿಸಲು ಚಿಂತನಾ ಸಭೆಗಳು, ವಿಚಾರ ಗೋಷ್ಠಿಗಳು, ಬಹಿರಂಗ ಸಭೆ, ಪ್ರತಿಭಟನಾ ಸಭೆ ಹಾಗೂ ಮೆರವಣಿಗೆಗಳನ್ನು ಆಯೋಜಿಸುವ ಕ್ರಿಯಾಶೀಲ ಉದ್ದೇಶವಿದೆ.

ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ವಲಯದಲ್ಲಿ ರಾಜ್ಯಮಟ್ಟದ ನಾಟಕ ಸ್ಪರ್ಧೆ, ಪ್ರಬಂಧ ಸ್ಪರ್ಧೆ, ಸಂಗೀತ ಗಾಯನ ಸ್ಪರ್ಧೆ ನಡೆಸುವುದು ಮತ್ತು ಬಹುಮಾನ ನೀಡುವುದು, ಉದಯೋನ್ಮುಖ ಬರಹಗಾರರ, ಕಥೆ, ಕವನ, ಪುಸ್ತಕಗಳ ಪ್ರಕಟಣೆ, ರಾಜ್ಯೋತ್ಸವ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮಗಳನ್ನು ನಾಡು-ನುಡಿಗೆ ದುಡಿದ ಹಿರಿಯ ಗಣ್ಯವ್ಯಕ್ತಿಗಳು, ಸಾಹಿತಿಗಳು ಮತ್ತು ಕಲಾವಿದರನ್ನು ಗೌರವಿಸುವ ಆಸಕ್ತಿಯನ್ನು ಹೊಂದಿದೆ.

ಆಟೋಚಾಲಕರು, ಅಸಂಘಟಿತ ಕಾರ್ಮಿಕರು, ದಿನಗೂಲಿ ಮತ್ತು ಹೋಟೆಲ್ ಕಾರ್ಮಿಕರು ಸೇರಿದಂತೆ ಬೀದಿವ್ಯಾಪಾರಿಗಳ ರಕ್ಷಣೆ, ಸಮಾಜ ಸೇವೆ ಮತ್ತು ಜನಪರ ಹೋರಾಟಗಳಲ್ಲಿ ಒಕ್ಕೂಟವು ಕ್ರಿಯಾತ್ಮಕವಾಗಿ ಸ್ಪಂದಿಸುವುದು.

ಕನ್ನಡ ಕಾರ್ಮಿಕ ಬಂಧುಗಳೆ, ಕನ್ನಡ ನಾಡು-ನುಡಿಯ ಪ್ರೇಮಿಗಳಾದ ತಾವು ಒಕ್ಕೂಟದ ಸದಸ್ಯರಾಗುವುದು ಮತ್ತು ತಮ್ಮ ಕೈಗಾರಿಕೋದ್ಯಮಗಳಲ್ಲಿರುವ ಕನ್ನಡ ಸಂಘವನ್ನು ಒಕ್ಕೂಟದಲ್ಲಿ ನೋಂದಾಯಿಸುವಂತೆ ಮಾಡುವುದರ ಮೂಲಕ ಕನ್ನಡ ಕಟ್ಟುವ ಕಾರ್ಯಕ್ಕೆ ತಮ್ಮ ಬೆಂಬಲ ನೀಡಬೇಕಾಗಿ ಮನವಿ.

ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ (ನೋಂ.)

ಎಂ ತಿಮ್ಮಯ್ಯ	ಸಿದ್ಧಯ್ಯ	ನಾ. ಶ್ರೀಧರ, ಎಂ.ಗೌಡಯ್ಯ	ಬಿ.ಜಿ.ರಾಜೇಶ್
ಅಧ್ಯಕ್ಷರು	ಕಾರ್ಯಾಧ್ಯಕ್ಷರು	ಪ್ರಧಾನ ಕಾರ್ಯದಶಿಗಳು	ಕೋಶಾಧ್ಯಕ್ಷರು

ಕಾರ್ಯದರ್ಶಿಗಳು : ಚಳವಳಿ ರಾಮಕೃಷ್ಣ, ಎಲ್.ಜಿ.ರಾಮಚಂದ್ರಪ್ಪ, ಎನ್.ವಿಜಯಲಕ್ಷ್ಮಿ, ಪ್ರಖ್ಯಾತ್ ಪ್ರಭಾಕರ್ ರೆಡ್ಡಿ

ಕಛೇರಿ : ನಂ.೧೭೦, ೨ನೇ ತಿರುವು, ೧೧ನೇ ಮುಖ್ಯರಸ್ತೆ, ಕಾಳಪ್ಪ ಬ್ಲಾಕ್, ಶ್ರೀನಗರ, ಬೆಂಗಳೂರು-೫೦. ಸಂಚಾರಿ : ೯೮೮೦೯೭೬೯೮೪



ಕನ್ನಡವೇ ಸತ್ಯ ಕನ್ನಡವೇ ಧರ್ಮ ಕನ್ನಡವೇ ದೇವರು ಕನ್ನಡವೇ ಕಾಯಕ

ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಂಗಸಂಸ್ಥೆಗಳು

ಬಿ.ಇ.ಎಲ್. ಕರ್ನಾಟಕ ಕಾರ್ಮಿಕರ ಹಿತರಕ್ಷಕ ಸಮಿತಿ

ಎಚ್.ಎ.ಎಲ್. ಕೇಂದ್ರೀಯ ಕನ್ನಡ ಸಂಘ

ಐ.ಟಿ.ಐ. ಕನ್ನಡ ಹಿತರಕ್ಷಣಾ ಸಮಿತಿ

ಬಿ.ಇ.ಎಂ.ಎಲ್. ಕನ್ನಡ ಸಂಘ

ಬಿ.ಎಚ್.ಇ.ಎಲ್. ಕನ್ನಡ ಹಿತರಕ್ಷಣಾ ಸಮಿತಿ

ನಾಗನಾಥಪುರ ಮೈಕೋ ಕನ್ನಡ ಬಳಗ

ಕವಿಕಾ ಕನ್ನಡ ಸಂಘ

ಜಿ.ಇ. ಕನ್ನಡ ಸಂಘ , ಸಿರಿ ನೃತ್ಯ ಕಲಾನಿಕೇತನ

ಆರ್.ಎಂ.ಎಸ್. ಕನ್ನಡ ಸಂಘ.

ಆಮ್ಕೋ ಕಾರ್ಮಿಕರ ಕನ್ನಡ ಕಲಾ ಸಂಘ

ಎಂ.ಇ.ಐ. ಕನ್ನಡ ಹಿತರಕ್ಷಣಾ ಸಮಿತಿ

ಜಿ.ಟಿ.ಆರ್.ಇ. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ (ರಿ.)

ಶ್ರೀ ಭಾಗ್ಯಲಕ್ಷ್ಮಿ ಸಮೂಹ ಕನ್ನಡ ಹಿತರಕ್ಷಣಾ ಸಮಿತಿ (ರಿ.)

ಎ.ಡಿ.ಇ. ಕನ್ನಡ ಹಿತರಕ್ಷಣಾ ಸಮಿತಿ

ಇಂಡಿಯನ್ ಏರ್ ಲೈನ್ಸ್ ಕನ್ನಡ ಸಂಘ

ಎಚ್.ಎಂ.ಟಿ. ಕನ್ನಡ ಸಂಘ

೫೧೫ ಭೂ ಸೇನಾ ಕಾರ್ಯಾಗಾರ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ

ಕೇಂದ್ರೀಯ ಸದನ ಕನ್ನಡ ಸಂಘ

ಕನ್ನಡ ಮಿತ್ರ ವೃಂದ ಭಾರತೀಯ ಸರ್ವೇಕ್ಷಣ ವಿಭಾಗ

ಕಾರ್ ಮೊಬೈಲ್ಸ್ ಕನ್ನಡ ಸಂಘ

ರೈಲ್ವೆ ನೌಕರರ ಕನ್ನಡ ಸಂಘ

ಜೀವ ವಿಮೆ / ಸಾಮಾನ್ಯ ವಿಮೆ ಕನ್ನಡ ಸಂಘ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕನ್ನಡ ಸಂಘ

ಐ.ಪಿ.ಪಿ. ಕನ್ನಡ ಸಂಘ

ಬಿ.ಎಚ್.ಇ.ಎಲ್. ಇ.ಪಿ.ಡಿ. ಕರ್ನಾಟಕ ಸಂಘ

ಜೈ ಕರ್ನಾಟಕ ಆಟೋ ಮಾಲೀಕರ ಕನ್ನಡ ಸಂಘ, ಅಗರ

ಎ.ಡಿ.ಎ. ಕನ್ನಡ ಸಂಘ

ಅಂಚೆ, ಲೆಕ್ಕ ನಿರ್ದೇಶಕರ ಕಛೇರಿ ನೌಕರರ ಕನ್ನಡ ಸಂಘ

ಡಾ। ಬಿ.ಆರ್. ಅಂಬೇಡ್ಕರ್ ಪ್ರತಿಷ್ಠಾನ

ಬೆಮಲ್ ಕನ್ನಡ ಸಂಘ, ಕೆ.ಜಿ.ಎಫ್.

ಬೆಂಗಳೂರು ಜಲಮಂಡಲಿ ಕನ್ನಡ ಸಂಘ

ಬಿ.ಪಿ.ಎಲ್. ಕನ್ನಡ ಸಂಘ

ಕನ್ನಡ ಅಭಿಮಾನಿಗಳ ಸಂಘ, ಕ.ಸಾ.ಮಾ.ನಿ.

ಕುವೆಂಪು ಕಲಾ ಕೇಂದ್ರ ಟ್ರಸ್ಟ್ (ರಿ.) ಶ್ರೀನಗರ

ಮೈಕೊ ಕನ್ನಡ ಬಳಗ, ಆಡುಗೋಡಿ
ಎಲ್ಲಾ ಕನ್ನಡ ಅಭಿಮಾನಿಗಳ ಅಂತರಾಷ್ಟ್ರೀಯ ವೇದಿಕೆ (ಈ - ಕವಿ)
ಬೆಂಗಳೂರು ವಿಮಾನ ನಿಲ್ದಾಣ ಕೆಎಸ್‌ಟಿಡಿಸಿ ವಾಹನ ಚಾಲಕರ ಕಲ್ಯಾಣ ಸಂಘ
ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನೌಕರರ ಒಕ್ಕೂಟಗಳ ಸಂಯುಕ್ತ ಕ್ರಿಯಾ ಸಮಿತಿ
ಎಸ್.ಕೆ.ಎಫ್. ಟೆಕ್ನೋಲಜೀಸ್ ಕನ್ನಡ ಗೆಳೆಯರ ಬಳಗ
ಕನ್ನಡ ನಾಡು - ನುಡಿ ರಕ್ಷಣಾ ಸಮಿತಿ (ರಿ)
ಎನ್.ಎ.ಎಲ್. ಕನ್ನಡ ಸಂಘ
ಎಸ್ಕಾರ್ಟ್ಸ್ ಕನ್ನಡ ಸಂಘ
ವಿಪ್ರೋ ಕಾರ್ಖಾನೆ ಕಾರ್ಮಿಕ ಸಂಘ
ತ್ರಿವೇಣಿ ಕಾರ್ಮಿಕ ಸಂಘ
ವೋಲ್ವೋ ಇಂಡಿಯಾ ಕಾರ್ಮಿಕ ಸಂಘ
ಮಾಡ್ರನ್ ಬೇಕರಿ ಕಾರ್ಮಿಕ ಸಂಘ
ಪಾರ್ಲೆ ಕಾರ್ಖಾನೆ ಕನ್ನಡ ಸಂಘ ಮತ್ತು ಕಾರ್ಮಿಕ ಸಂಘ
ಕೆನ್ನಾ ಮೆಟಲ್ ಕಾರ್ಮಿಕ ಸಂಘ
ಎ.ಬಿ.ಬಿ. ಕಾರ್ಮಿಕರ ಕನ್ನಡ ಸಂಘ ಮತ್ತು ಕಾರ್ಮಿಕ ಸಂಘ
ಸಿ.ಎಂ.ಟಿ.ಐ. ಕಾರ್ಮಿಕರ ಕನ್ನಡ ಸಂಘ ಮತ್ತು ಕಾರ್ಮಿಕ ಸಂಘ
ಡೈನಾಮಿಟಿಕ್ ಐಡ್ರಾಲಿಕ್ ಲಿಮಿಟೆಡ್ ಕನ್ನಡ ಸಂಘ ಮತ್ತು ಕಾರ್ಮಿಕ ಸಂಘ
ಎನ್.ಟಿ.ಟಿ.ಎಫ್ ಕಾರ್ಖಾನೆ ಕನ್ನಡ ಸಂಘ ಮತ್ತು ಕಾರ್ಮಿಕ ಸಂಘ
ಅನಿಕೇತನ ಕನ್ನಡ ಬಳಗ

ಭಾರತ್ ಫ್ರಿಜ್ಡ್ ಲಿಮಿಟೆಡ್ ಕಾರ್ಮಿಕ ಸಂಘ
ವೆಲ್‌ಕ್ಯಾಸ್ಟ್ ಕಾರ್ಖಾನೆ ಕಾರ್ಮಿಕ ಸಂಘ
ಕಾಳಿಂಗರಾಯರ ಬಳಗ (ರಿ.)
ಗೋಕುಲ್‌ದಾಸ್ ಇಮೇಜ್ ಕಾರ್ಖಾನೆ ಕಾರ್ಮಿಕ ಸಂಘ
ಸದ್ಭಾವನಾ ಪ್ರತಿಷ್ಠಾನ
ಇ.ಎಂ.ಐ.ಎಲ್. ಕಾರ್ಮಿಕ ಸಂಘ–ದೊಡ್ಡ ಬಳ್ಳಾಪುರ
ಜನದನಿ ಬಳಗ, ಬೆಂಗಳೂರು
ಎಚ್.ಎಂ.ಟಿ. ಕರ್ನಾಟಕ ಕಾರ್ಮಿಕರ ಹಿತರಕ್ಷಣಾ ಸಮಿತಿ (ರಿ.)
ಎಸ್ಸಿಲಾರ್ ಕಾರ್ಮಿಕ ಸಂಘ, ದೊಡ್ಡ ಬಳ್ಳಾಪುರ
ಕರ್ನಾಟಕ ಆಂಟಿಬಯಾಟಿಕ್ಸ್ ಫಾರ್ಮಾಸುಟಿಕಲ್ಸ್ (ಲಿ.)
ಕನ್ನಡ ವಿನಾಯಕ ಗೆಳೆಯರ ಬಳಗ (ರಿ.)
ಕಪಿಲಾ ಕನ್ನಡ ಸಂಘ, ಸಿರಿ ಸಾಂಸ್ಕೃತಿಕ ನೃತ್ಯ ಕಲಾನಿಕೇತನ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕನ್ನಡ ನೌಕರರ ಕನ್ನಡ ಕ್ರಿಯಾ ಸಮಿ
ಟಾಟಾ ಪ್ರಕೃತಿ ಕಾರ್ಮಿಕರ ಸಂಘ, ದೊಡ್ಡ ಬಳ್ಳಾಪುರ
ಎಂ.ಇ.ಎಸ್. ಕಾಂಟ್ರಾಕ್ಟ್ ಲೇಬರ್ ಅಸೋಸಿಯೇಷನ್ (ರಿ.)
ಎ.ಪಿ.ಎಂ.ಸಿ. ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾರ್ಮಿಕ ಸಂಘ (ರಿ.)
ಶ್ರೀ ಮಹಾಲಕ್ಷ್ಮಿ ಗಾನಸುಧಾನಿಕೇತನ (ರಿ.)
ಡಾ. ವಿಷ್ಣು ಸೇನಾ ಸಮಿತಿ (ರಿ.)
ಗಾರ್ಡನ್ ಸಿಟಿ ಕಲ್ಚರಲ್ ಅಕಾಡೆಮಿ



ಮ. ರಾಮಮೂರ್ತಿಯವರು ಸ್ವಾತಂತ್ರ್ಯ ಹೋರಾಟಗಾರ, ಪತ್ರಿಕೋದ್ಯಮಿ, ವಿದ್ವಾಂಸ. ಭವ್ಯ ವ್ಯಕ್ತಿತ್ವದ ಕನ್ನಡದ ಅಪೂರ್ವ ಚಳುವಳಿಗಾರ, ಅವರು ಕೇವಲ ಕನ್ನಡ ಹೋರಾಟಗಾರ, ಪುಸ್ತಕ ಪ್ರಕಟಣೆಗಾರ, ಪತ್ರಿಕಾ ಸಾಹಿತಿ ಅಷ್ಟೇ ಅಲ್ಲ, ಕನ್ನಡದ ಆಳವಾದ ಅಧ್ಯಯನಕಾರ ಸಹ ಆಗಿದ್ದರು ಎಂಬುದು ಅನೇಕರಿಗೆ ತಿಳಿಯದ ಸಂಗತಿ ಆಗಿದೆ.

ಇಂಥ ಭವ್ಯ ವ್ಯಕ್ತಿತ್ವದ ಕನ್ನಡದ ಅಪೂರ್ವ ಚಳುವಳಿಗಾರ, ದಟ್ಟಿಪಂಚೆ ಜುಬ್ಬಾಧಾರಿ, ಸಿಂಹಧ್ವನಿಯ ಕನ್ನಡ ಜೀವಿ ರಾಮಮೂರ್ತಿಯವರದು ಭೀಮಕಾಯ, ಭೀಮಕಂಠ, ಭೀಮಪರಾಕ್ರಮ. ಇವರ ಹೋರಾಟ ಕೇವಲ ಮೆರವಣಿಗೆ ಘೋಷಣೆ ಸಭೆ ವಾಗ್ವಾದಗಳಿಗಷ್ಟೆ ಸೀಮಿತವಾಗಿರಲಿಲ್ಲ. ಯುವಕರನ್ನು ಚಳುವಳಿಗೆ ತೊಡಗಿಸುತ್ತಿದ್ದರು. ವಿಶೇಷವಾಗಿ ಕಾರ್ಖಾನೆಗಳಲ್ಲಿದ್ದ ಕನ್ನಡಿಗರನ್ನು ಜಾಗೃತಗೊಳಿಸುತ್ತಿದ್ದ ಕನ್ನಡ ಕಾರ್ಮಿಕ ನಾಯಕರಾಗಿದ್ದರು. ಇವರ ಹೋರಾಟದ ಫಲವಾಗಿ ಕನ್ನಡದ ಪ್ರಭಾವ ಜಾಸ್ತಿ ಆಯಿತು. ಕನ್ನಡ ಹೋರಾಟದಲ್ಲಿ, ಚಳುವಳಿಯಲ್ಲಿ ಭಾಗವಹಿಸಿದವರು ದಸ್ತಗಿರಿ ಆದಾಗ ಅವರ ಮನೆಯವರಿಗೆ ಧೈರ್ಯ ಹೇಳಿ ಅವರಿಗೆ ಸಹಾಯ ಮಾಡುತ್ತಿದ್ದರು. ಇದು ಅವರ ಹೋರಾಟದ ರೀತಿ ಆಗಿತ್ತು.

ಇವರನ್ನು ಕುರಿತು ಎನ್. ಆನಂದರಾಮರಾವ್ ಅವರು ಉಪಯುಕ್ತ ಮಾಹಿತಿಗಳಿಂದ ಕೂಡಿದ ಪುಟ್ಟ ಗ್ರಂಥವನ್ನು ಸರಳವಾಗಿ ಮನ ಮುಟ್ಟುವಂತೆ ಬರೆದಿದ್ದಾರೆ. ಇದು ಅವರ ಬಗ್ಗೆ ದೊಡ್ಡ ಅಧಿಕೃತ ಗ್ರಂಥ ಬರಲು ನಾಂದಿ ಆಗಲಿ ಎಂದು ಆಶಿಸುತ್ತೇನೆ.

ಕನ್ನಡ ಸೇನಾನಿ ಮ.ರಾಮಮೂರ್ತಿಯವರನ್ನು ಕುರಿತು ಕನ್ನಡ ಅಭಿಮಾನದಿಂದ ಆನಂದರಾಮರಾವ್ ಅವರು ಬರೆದಿರುವ ಗ್ರಂಥವನ್ನು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ ಪ್ರಕಟಿಸುತ್ತಿರುವುದು ಶ್ಲಾಘನೀಯವಾಗಿದೆ.

ಮ.ರಾಮಮೂರ್ತಿ ಅವರ ಕನ್ನಡ ಸೇವೆ, ಚಳುವಳಿ, ಸಾಹಿತ್ಯ ಕನ್ನಡಿಗರನ್ನು ಪುಳಕಿತಗೊಳಿಸಲು ಇಂಥ ಗ್ರಂಥಗಳು ಹೊರಬರುತ್ತಿರಲಿ. ಅವರ ಗ್ರಂಥಗಳು ಪುನರ್ಮುದ್ರಣವಾಗಲಿ ಎಂದು ಆಶಿಸುತ್ತೇನೆ.

ಪ್ರೊ. ಜಿ. ಅಶ್ವತ್ಥನಾರಾಯಣ

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟ (ನೋಂ.)
ನಂ.೧೭೩, ೩ನೆಯ ತಿರುವು, ೧೧ನೆಯ ಮುಖ್ಯ ರಸ್ತೆ, ಕಾಳಪ್ಪ ಬ್ಲಾಕ್, ಶ್ರೀನಗರ, ಬೆಂಗಳೂರು-೫೬೦೦೫೦